# ಕೇರಳ ಪಾಠಾವಳಿ
# KERALA READER

## ಕನ್ನಡ
## KANNADA

## ಮುಂದುವರಿದ ಪಠ್ಯ
## ADVANCED TEXT

ತರಗತಿ
VII

ಭಾಗ - 1
Part - 1

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

ST-295-1-KANNADA (AT)-7-VOL-1

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ.ಅದರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - VII (Advanced Text) - Part I

---

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2024
Printed at : KBPS Kakkanad, Kochi-30
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸರಿಸಮಾನವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾ ಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷಾ ಶೈಲಿಯನ್ನು ಬೆಳೆಸಿಕೊಳ್ಳಲು ಭಾಷೆಯನ್ನು ಕಲಿಯಬೇಕು.

ಭಾಷಾ ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕವು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತದೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತದೆ, ಹಿತೈಷಿಗಳಂತೆ ಇರುತ್ತದೆ ಎನ್ನಬಹುದು. ಪಠ್ಯಪುಸ್ತಕವು ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡುತ್ತದೆ ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE

## KANNADA - VII AT - PART I

**Advisor**

| | |
|---|---|
| Shivashankara P. | Asst. Professor, GPM College, Manjeshwar |

**Chairperson**

| | |
|---|---|
| Dr. Shridhara N. | Associate Professor, Govt. College, Kasaragod |

**Experts**

| | |
|---|---|
| Dr . Mahalinga Bhat K. | Associate Prof, St. Aloysius College, Mangalore |
| Ramanna D. | Rtd. Head Master, GVHSS Delampady |

**Participants**

| | |
|---|---|
| Padma Nayana N.K. | Rtd. H.M. S.V.V.A.U.P. School Kodlamogaru |
| Ravi Kumar K. | HSST, GHSS Kumbla |
| Jyothsna K. | UPST, NHSS Peradala |
| Pushparaj Shetty B. | UPST, ASBS Ichlampady |
| Shridhara Bhat B. | UPST, GHS Peradala |
| Praveen. | UPST, GHSS Paivalike Nagar |
| Shailaja. | UPST, GHS Delampady |
| Gururaj K. | UPST, GHS Udyawar |

**Artists**

| | |
|---|---|
| Balasubrahmanya. | Rtd. Drawing Teacher, MSCHS Neerchal |
| Sathyanarayana Aila. | Drawing Teacher, GHSS Mangalpady |
| Jayaprakash Shetty. | Drawing Teacher, SATHSS Manjeshwar |

**Academic Co-ordinator**
**Dr. Sahaya Dhas D.**
Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| ಕ್ರಮ ಸಂಖ್ಯೆ | ಘಟಕ | ಪುಟ ಸಂಖ್ಯೆ |
|---|---|---|
| 1. | **ಬೇರು - ಬದುಕು** | 7-25 |
| | ಚೆರ‍್ರಿ ಹಣ್ಣಿನ ಮರ (ಅನುವಾದ ಕತೆ) | |
| | ನೇಗಿಲ ಯೋಗಿ (ಕವನ) | |
| | ಬಾಳು ಬೆಳಗಿಸಿದ ಕೃಷಿ (ಅಂಕಣ ಬರಹ) | |
| 2. | **ಹೆಣ್ಣು - ಕಣ್ಣು** | 26-44 |
| | ರಾಣಿ ಅಬ್ಬಕ್ಕ (ನಾಟಕ) | |
| | ಬಣ್ಣವೇರಿತು ಪಾಲ್ಗಡಲು (ನಡುಗನ್ನಡ ಪದ್ಯ) | |
| | ಸಾವಿತ್ರಿಬಾಯಿ ಫುಲೆ (ವ್ಯಕ್ತಿ ಪರಿಚಯ) | |
| 3. | **ಪ್ರಕೃತಿ - ಪರಿಸರ** | 45-65 |
| | ಊರು ಬರಿದಾಯ್ತು (ಕಾದಂಬರಿ ಭಾಗ) | |
| | ಕಾರ್ಗಾಲದ ವೈಭವ (ಕಥನ ಕವನ) | |
| | ಕಾಡು ಕಡಿದರೆ (ಸಣ್ಣ ಕತೆ) | |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು
ಅಂಗೀಕರಿಸಿ,
ಶಾಸನವಾಗಿ ವಿಧಿಸಿಕೊಂಡಿದ್ದೇವೆ.

# 1. ಬೇರು - ಬದುಕು

ಕೃಷಿ ನಮ್ಮದೇಶದ ಪ್ರಧಾನ ಶಕ್ತಿಯಾಗಿದೆ. ಕೃಷಿ ಕ್ಷೇತ್ರದ ಅಭಿವೃದ್ಧಿಯು ದೇಶದ ಪ್ರಗತಿಯಲ್ಲಿ ಮಹತ್ತರವಾದ ಪಾತ್ರವಹಿಸುತ್ತದೆ. ಕೃಷಿಯು ಕೇವಲ ಜೀವನೋಪಾಯದ ಮಾರ್ಗವಲ್ಲ, ಅದು ಜೀವನ ವಿಧಾನವಾಗಿದೆ. ಇಡೀ ರಾಷ್ಟ್ರವು ಆಹಾರಕ್ಕಾಗಿ ಈ ವಲಯವನ್ನು ಅವಲಂಬಿಸಿರುವುದರಿಂದ ಈ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ನಿರಂತರವಾಗಿ ಪ್ರಯತ್ನಗಳು ನಡೆಯುತ್ತಿವೆ. ಆಧುನಿಕ ತಂತ್ರಜ್ಞಾನದ ಪ್ರಭಾವವು ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗೆ ಕಾರಣವಾದರೂ ಕೃಷಿಯ ಕಡೆ ಒಲವು ತೋರಿಸುವವರ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿದೆ. ಕೃಷಿಯಲ್ಲಿ ಖುಷಿಯಿಂದ ತೊಡಗಿಕೊಂಡು ಸಾಧನೆ ಮಾಡಿದವರ ಕತೆಗಳು ನಮಗೆ ಸ್ಫೂರ್ತಿಯಾಗಲಿ.



## ಪ್ರವೇಶ ಚಟುವಟಿಕೆ

ಈ ಕೆಳಗಿನ ಚಿತ್ರಗಳನ್ನು ಗಮನಿಸಿರಿ. ಚಿತ್ರದ ಆಧಾರದಲ್ಲಿ ಕೃಷಿರಂಗದಲ್ಲಿನ ಬೆಳವಣಿಗೆ ಮತ್ತು ಸಮಸ್ಯೆಗಳನ್ನು ಚರ್ಚಿಸಿರಿ.













# ಚೆರ್ರಿ ಹಣ್ಣಿನ ಮರ

ಆರು ವರ್ಷ ಪ್ರಾಯದ ರಾಕೇಶ್ ಚೆರ್ರಿ ಹಣ್ಣುಗಳನ್ನು ತಿನ್ನುತ್ತಾ ಮಸ್ಸೂರಿ ಪೇಟೆಯಿಂದ ಮನೆ ಕಡೆ ಹೊರಟನು. ಕಾಶ್ಮೀರ ಕಣಿವೆಯಲ್ಲಿ ಬೆಳೆಯುವ ಕೆಂಬಣ್ಣದ ಸಣ್ಣಗಾತ್ರದ ಚೆರ್ರಿ ಹಣ್ಣುಗಳು ಸ್ವಲ್ಪ ಸಿಹಿ ಮತ್ತು ಸ್ವಲ್ಪ ಹುಳಿಯಾಗಿರುತ್ತವೆ.

ಮಸ್ಸೂರಿಯ ಹೊರವಲಯದಲ್ಲಿ ಕಾಡಿನಂಚಿನಲ್ಲಿ ರಾಕೇಶ್ ತನ್ನ ತಾತನೊಂದಿಗೆ ಇದ್ದಾನೆ. ಅವನ ಅಪ್ಪ ಅಮ್ಮ ಇಲ್ಲಿಂದ ಐವತ್ತು ಮೈಲು ದೂರದ ಹಳ್ಳಿಯಲ್ಲಿ ವಾಸಿಸುತ್ತಾರೆ. ಅಲ್ಲಿ ಅವರು ಬೆಟ್ಟದ ಇಳಿಜಾರಿನಲ್ಲಿ ಸಣ್ಣ ಪ್ರಮಾಣದಲ್ಲಿ ಜೋಳ, ಭತ್ತ, ಬಾರ್ಲಿ ಬೆಳೆಯುತ್ತಾರೆ. ಆ ಹಳ್ಳಿಯಲ್ಲಿ ಶಾಲೆಯಿಲ್ಲ. ಹಾಗಾಗಿ ಅವನು ಓದಲಿ ಎಂದು ಅವನನ್ನು ತಾತನ ಬಳಿ ಬಿಟ್ಟಿದ್ದಾರೆ.

ರಾಕೇಶನ ತಾತ ನಿವೃತ್ತ ವಲಯ ಅರಣ್ಯಾಧಿಕಾರಿ. ಅವರಿಗೆ ನಗರದ ಹೊರವಲಯದಲ್ಲಿ ಸಣ್ಣ ಮನೆಯಿತ್ತು. ರಾಕೇಶ್ ಶಾಲೆಯಿಂದ ಮನೆಗೆ ಬರುವಾಗ ಚೆರ್ರಿ ಹಣ್ಣುಗಳನ್ನು ಕೊಂಡನು. ಐವತ್ತು ಪೈಸೆಗೆ ಒಂದು ಹಣ್ಣಿನ ಗೊಂಚಲು ಸಿಕ್ಕಿತು. ಮನೆಗೆ ತಲುಪಲು ಅವನಿಗೆ ಅರ್ಧಗಂಟೆ ಸಮಯ ಬೇಕಾಯ್ತು. ಮನೆ ತಲುಪಿದಾಗ ಮೂರು ಚೆರ್ರಿ ಹಣ್ಣು ಅವನ ಕೈಯಲ್ಲಿ ಉಳಿದಿತ್ತು.

ಮನೆಯ ಮುಂದಿನ ಕೈತೋಟದಲ್ಲಿ ತಾತನನ್ನು ಕಂಡವನೇ, 'ತಾತ, ಚೆರ್ರಿ ಹಣ್ಣು ತಿನ್ನು ತಗೋ' ಎಂದು ಕೊಟ್ಟನು. ತಾತ ಒಂದು ಹಣ್ಣನ್ನು ತೆಗೆದುಕೊಂಡರು. ಉಳಿದ ಎರಡು ಹಣ್ಣುಗಳನ್ನು ರಾಕೇಶ್ ತಿಂದನು. ಕಡೆಯ ಹಣ್ಣಿನ ಬೀಜವನ್ನು ಬಾಯಲ್ಲಿ ನಮುಲುತ್ತಾ, ನಾಲಿಗೆಯಿಂದ ಬಾಯೊಳಗೆ ಹೊರಳಾಡಿಸುತ್ತಾ ಅದರ ಸ್ವಾದವೆಲ್ಲ ಮುಗಿದ ಮೇಲೆ ಅಂಗೈಲಿಟ್ಟುಕೊಂಡು ನೋಡಿದನು. 'ಚೆರ್ರಿಹಣ್ಣುಗಳು ಅದೃಷ್ಟ ತರುತ್ತವಂತೆ ಹೌದಾ?' ಎಂದು ತಾತನನ್ನು ಕೇಳಿದ.

'ಹೌದು.'

'ಹಾಗಾದ್ರೆ ನಾನಿದನ್ನು ಇಟ್ಟುಕೊಳ್ತೀನಿ.'

'ನೀನು ಹಾಗೇ ಇಟ್ಟುಕೊಂಡರೆ ಅದೃಷ್ಟ ಬರದು. ಅದೃಷ್ಟ ಬೇಕೆಂದರೆ ಅದನ್ನು ಸರಿಯಾಗಿ ಬಳಸಬೇಕು.'

'ಈ ಬೀಜವನ್ನು ನಾನು ಏನು ಮಾಡಬೇಕು?'



ST-295-2-KANNADA (AT)-7-VOL-1

ತಕ್ಷಣ ರಾಕೇಶ್, ಅಲ್ಲೇ ಇದ್ದ ಸನಿಕೆ ತೆಗೆದುಕೊಂಡು ಅಗೆಯಲು ಹೋದ. 'ಏಯ್, ಅಲ್ಲಲ್ಲ, ಅಲ್ಲಿ ನಾನು ಸಾಸಿವೆ ಬಿತ್ತಿದ್ದೇನೆ. ಆ ಕಡೆ ಮೂಲೆಯಲ್ಲಿ ನೆಡು. ಅದರಿಂದ ಯಾವುದಕ್ಕೂ ತೊಂದರೆಯಾಗದು' ಎಂದರು ತಾತ.

ರಾಕೇಶ್ ಕೈತೋಟದ ಮೂಲೆಗೆ ಹೋದನು. ಅಲ್ಲಿ ನೆಲ ಮೆದುವಾಗಿದ್ದರಿಂದ ಅಗೆಯುವ ಅಗತ್ಯ ಕಾಣಲಿಲ್ಲ. ಹಾಗಾಗಿ ಬೀಜವನ್ನು ಹಾಗೆಯೇ ಬೆರಳಿನಿಂದ ಒತ್ತಿದ. ಅದು ಒಳಕ್ಕಿಳಿಯಿತು. ಅನಂತರ ಊಟ ಮಾಡಿ ಸ್ನೇಹಿತರೊಂದಿಗೆ ಕ್ರಿಕೆಟ್ ಆಡಲು ಓಡಿದ ಅವನಿಗೆ ಚೆರ್ರಿ ಬೀಜ ಮರೆತೇ ಹೋಯಿತು.

ಚಳಿಗಾಲ ಪ್ರಾರಂಭವಾಯಿತು. ಹಿಮಾಚ್ಛಾದಿತ ಪರ್ವತಗಳ ಕಡೆಯಿಂದ ತಣ್ಣನೆ ಗಾಳಿ ಬೀಸತೊಡಗಿತು. ದೇವದಾರು ಮರಗಳ ನಡುವೆ ಹಾದು ಬರುವ ಗಾಳಿ 'ವೂ...ವೂ...ವೂ...' ಎಂಬ ಶಬ್ದ ಹೊರಹೊಮ್ಮಿಸುತ್ತಿತ್ತು. ಮನೆಯ ಮುಂದಿನ ಕೈತೋಟದಲ್ಲಿ ಜೀವಚೈತನ್ಯವಿಲ್ಲ. ಎಲ್ಲ ಭಣಗುಟ್ಟುತ್ತಿದೆ.

ಉತ್ತರದ ಸೈಬೀರಿಯಾದೆಡೆಗೆ ಬಾತುಗಳು ಹಾರಿದವೆಂದರೆ ಅದು ವಸಂತಕಾಲ. ಉರುವಲಿಗಾಗಿ ಮರವನ್ನು ಸಣ್ಣ ತುಂಡುಗಳನ್ನಾಗಿ ಮಾಡಲು ಬೆಳಿಗ್ಗೆಯೇ ಎದ್ದು ಬಂದ ರಾಕೇಶನಿಗೆ ಇಂಗ್ಲಿಷ್‌ನ 'ವಿ' ಆಕಾರದಲ್ಲಿ ಉತ್ತರ ದಿಕ್ಕಿಗೆ ಹಾರುತ್ತಿದ್ದ ಹಕ್ಕಿಗಳು ಕಂಡವು. ಅವುಗಳ ಕೂಗು ಸಹ ಬೀಸುತ್ತಿದ್ದ ಗಾಳಿಯಲ್ಲಿ ಇಂಪಾಗಿ ತೇಲಿ ಬಂತು.

ಒಂದು ಬೆಳಿಗ್ಗೆ ಕೈತೋಟದಲ್ಲಿ ಯಾವುದೋ ಬೇಡದ ಕಡ್ಡಿ ಎಂದು ಕೀಳಲು ಬಗ್ಗಿದ ರಾಕೇಶನಿಗೆ ಅದು ಬೇರು ಬಿಟ್ಟಿರುವುದು ಕಂಡುಬಂತು. ಅವನಿಗೆ ಏನೋ ಹೊಳೆದಂತಾಗಿ ತನ್ನ ತಾತನನ್ನು ಕರೆತರಲು ಓಡಿದನು.

'ತಾತ, ನೋಡು ಬಾ, ಇಲ್ಲಿ ಚೆರ್ರಿ ಗಿಡ ಬೆಳೆದಿದೆ!'

'ಚೆರ್ರಿ ಗಿಡವಾ?' ಎಂದ ತಾತ. ಅವನಿಗದು ಮರೆತೇ ಹೋಗಿತ್ತು. 'ಕಳೆದ ವರ್ಷ ನಾವು ಬೀಜ ಬಿತ್ತಿದ್ದೆವಲ್ಲ - ಅದೀಗ ಬೆಳೆದಿದೆ! ನೋಡು ಬಾ'

ಗಿಡದ ಮುಂದೆ ರಾಕೇಶ್ ಕುಕ್ಕರಗಾಲಲ್ಲಿ ಕುಳಿತರೆ, ತಾತ ಸೊಂಟವನ್ನು ಬಗ್ಗಿಸಿ ನೋಡಿದರು.

ನಾಲ್ಕು ಇಂಚು ಎತ್ತರ ಬೆಳೆದಿದ್ದ ಆ ಗಿಡವನ್ನು ನೋಡಿ ತಾತ, 'ಹೌದು, ಇದು ಚೆರ್ರಿ ಗಿಡ, ನೀನು ಆಗಾಗ ನೀರು ಹಾಕಬೇಕು' ಎಂದರು. ರಾಕೇಶ್ ಒಳಗೆ ಓಡಿ ಒಂದು ಬಕೆಟ್‌ನಲ್ಲಿ ನೀರು ತಂದ. 'ಅದನ್ನು ನೀರಿನಲ್ಲಿ ಮುಳುಗಿಸಿಬಿಡಬೇಡ, ಸ್ವಲ್ಪ ಹಾಕು' ಅಂದರು ತಾತ.

ರಾಕೇಶ್ ಗಿಡಕ್ಕೆ ನೀರು ಚಿಮುಕಿಸಿ ಅದರ ಸುತ್ತ ಬೆಣಚು ಕಲ್ಲುಗಳನ್ನು ಜೋಡಿಸಿದನು.

'ಕಲ್ಲುಗಳನ್ನು ಏಕೆ ಸುತ್ತ ಇಟ್ಟೆ' ಎಂದು ತಾತ ಕೇಳಿದಾಗ, 'ಗಿಡದ ಹತ್ತಿರ ಏನೂ ಸುಳಿಯಬಾರದು' ಎಂದನು ರಾಕೇಶ್.

ಪ್ರತಿದಿನ ಬೆಳಿಗ್ಗೆ ಗಿಡವನ್ನು ನೋಡುವುದೇ ಅವನ ಕೆಲಸ. ಅದು ಬೆಳೆಯುತ್ತಿಲ್ಲವಲ್ಲ ಎಂದು ಬೇಸರದಿಂದ ನೋಡುವುದು ಕಡಿಮೆ ಮಾಡಿದನು. ಆಗಾಗ ಓರೆನೋಟದಲ್ಲಿ ಗಮನಿಸುತ್ತಿದ್ದನು. ಒಂದೆರಡು ವಾರಗಳ ನಂತರ ಹತ್ತಿರ ಹೋಗಿ ಸೂಕ್ಷ್ಮವಾಗಿ ಗಮನಿಸಿದನು. ಚೆರ್ರಿ ಗಿಡ ಎರಡು ಅಡಿ ಬೆಳೆದಿತ್ತು. ಮೇಕೆಯೊಂದು ಕೈತೋಟ ಪ್ರವೇಶಿಸಿ ಎಲ್ಲ ಎಲೆಗಳನ್ನೂ ತಿಂದುಹಾಕಿತು. ಗಿಡದ ಕಾಂಡ ಮತ್ತು ಎರಡು ಸಣ್ಣ ಕಡ್ಡಿಗಳಂತಿದ್ದ ರೆಂಬೆಗಳು ಬಿಟ್ಟರೆ ಬೇರೇನೂ ಉಳಿದಿರಲಿಲ್ಲ.


'ತಲೆ ಕೆಡಿಸ್ಕೋಬೇಡ' ಎಂದು ತಾತ ರಾಕೇಶನಿಗೆ ಸಮಾಧಾನ ಹೇಳಿ, 'ಚೆರ್ರಿ ಗಿಡ ಎಲ್ಲ ಕಷ್ಟವನ್ನೂ ಎದುರಿಸಿ ಮತ್ತೆ ಬೆಳೆಯುತ್ತೆ' ಎಂದು ಧೈರ್ಯ ತುಂಬಿದರು.

ಮುಂಗಾರು ಮುಗಿಯುವ ಸಮಯದಲ್ಲಿ ಚೆರ್ರಿ ಗಿಡದಲ್ಲಿ ಚಿಗುರೆಲೆಗಳು ಕಂಡವು. ಬೆಟ್ಟದಿಂದ ಹುಲ್ಲು ಕೊಯ್ದುಕೊಂಡು ಹೋಗಲು ಬರುವ ಹೆಂಗಸೊಬ್ಬಳು ತನ್ನ ಕುಡುಗೋಲಿನಿಂದ ಹುಲ್ಲಿನ ಜೊತೆಯಲ್ಲಿ ಚೆರ್ರಿ ಗಿಡವನ್ನೂ ಕೊಯ್ದು ಹಾಕಿದಳು. ಈ ದುರ್ಘಟನೆಯನ್ನು ಕಂಡ ತಾತ ಆ ಹೆಂಗಸನ್ನು ಚೆನ್ನಾಗಿ ಬೈದರು. ಆದರೆ ಏನು ಪ್ರಯೋಜನ ಆದ ಹಾನಿಯನ್ನು ಸರಿಪಡಿಸುವುದು ಅಸಾಧ್ಯ

'ಇನ್ನಿಷ್ಟೆ, ಈ ಗಿಡ ಸಾಯುತ್ತೆ' ಅಂದ ರಾಕೇಶ್ ದುಃಖದಿಂದ.

'ಹಾಗೇ ಅನ್ನುತ್ತೆ' ಅಂದರು ತಾತ. ಆದರೆ ಚೆರ್ರಿ ಗಿಡಕ್ಕೆ ಸಾಯಲು ಮನಸ್ಸಿಲ್ಲ.

ಬೇಸಿಗೆ ಕಾಲದ ಹೊತ್ತಿಗೆ ಚೆರ್ರಿ ಗಿಡದ ಉಳಿದ ಕಾಂಡದಿಂದ ಚಿಗುರೆಲೆಗಳು, ಕೊಂಬೆಗಳು ಮೂಡಿದವು. ರಾಕೇಶ್ ಕೂಡ ಬೆಳೆದಿದ್ದನು, ಗುಂಗುರು ಕೂದಲು, ಕಪ್ಪು ಕಣ್ಣುಗಳ, ಗಟ್ಟಿಮುಟ್ಟಾದ ಅವನಿಗೀಗ ಎಂಟು ವರ್ಷ, ಅವನವು ನೇರಳೆ ಹಣ್ಣಿನಂತಹ ಕಣ್ಣುಗಳು ಎನ್ನುತ್ತಿದ್ದರು ತಾತ. ಮುಂಗಾರು ಪ್ರಾರಂಭವಾಯಿತು. ಉತ್ತು ಬಿತ್ತಲು ತನ್ನ ತಂದೆ ತಾಯಿಗೆ ನೆರವಾಗಲು ರಾಕೇಶ್ ಹಳ್ಳಿಗೆ ಹೋದನು. ಮಳೆಗಾಲ ಮುಗಿದು ಅವನು ತಾತನ ಮನೆಗೆ ವಾಪಸಾದಾಗ ಕೊಂಚ ತೆಳ್ಳಗಾಗಿದ್ದರೂ, ದೇಹ ಗಟ್ಟಿಗೊಂಡಿತ್ತು. ಚೆರ್ರಿ ಗಿಡ ಕಳೆದ ಬಾರಿಗಿಂತ ಒಂದು ಅಡಿ ಎತ್ತರ ಬೆಳೆದಿತ್ತು. ಈಗದು ಅವನ ಎದೆ ಮಟ್ಟಕ್ಕಿದೆ. ಮಳೆ ಬಿದ್ದರೂ ರಾಕೇಶ್ ಅದಕ್ಕೆ ನೀರು ಹಾಕುವುದು ನಿಲ್ಲಿಸುತ್ತಿರಲಿಲ್ಲ. ನಿನ್ನೊಂದಿಗೆ ಸದಾ ನಾನಿದ್ದೇನೆ' ಎಂದು ಗಿಡಕ್ಕೆ ಅವನು ತಿಳಿಸುವ ರೀತಿಯದು.



ಒಂದು ದಿನ ಗಿಡದ ರೆಂಬೆಯ ಮೇಲೆ ಹಚ್ಚ ಹಸಿರು ಬಣ್ಣದ ಗೊಲ್ಲಬಾಮೆ (ಪ್ರೇಯಿಂಗ್ ಮ್ಯಾಂಟಿಸ್) ಕೀಟ ಕುಳಿತಿತ್ತು. ತನ್ನ ಕತ್ತನ್ನು ಸುತ್ತ ತಿರುಗಿಸುತ್ತಾ ಮೊನಚು ಕಣ್ಣುಗಳಿಂದ ಅತ್ತಿತ್ತ ನೋಡುತ್ತಿತ್ತು. ರಾಕೇಶ್ ಅದನ್ನು

ಅಲ್ಲಿಯೇ ಇರಲು ಬಿಟ್ಟ ಚೆರ್ರಿ ಗಿಡದ ಮೊದಲ ಅತಿಥಿಯಿದು.

ಮುಂದಿನ ಅತಿಥಿ ಮುಳ್ಳುಗಳಂತೆ ಕೂದಲಿರುವ ಕಂಬಳಿಹುಳು. ಅದು ಚೆರ್ರಿ ಎಲೆಯನ್ನು ತಿನ್ನುತ್ತಿತ್ತು. ಅದನ್ನು ಕಂಡವನೇ ರಾಕೇಶ್ ಎತ್ತಿ ಒಣ ಎಲೆಗಳ ಮಧ್ಯೆ ಬಿಟ್ಟು, 'ನೀನು ಚಿಟ್ಟೆಯಾದ ಮೇಲೆ ಬಾ' ಅಂದ.

ಫೆಬ್ರವರಿಯಲ್ಲಿ ರಾಕೇಶ್‌ನ ಹುಟ್ಟಿದ ಹಬ್ಬ. ಈಗವನಿಗೆ ಒಂಬತ್ತು ವರ್ಷ. ಚೆರ್ರಿ ಗಿಡ ಈಗ ರಾಕೇಶ್‌ನಷ್ಟೇ ಎತ್ತರಕ್ಕೆ ಬೆಳೆದಿದೆ. ಒಂದು ಬೆಳಿಗ್ಗೆ ಬಿಸಿಲೇರಿದಂತೆ ತಾತ, 'ಮರಗಟ್ಟಿದಂತಿರುವ ಮೂಳೆಗಳಿಗೆ ಬಿಸಿ ತಾಗಿಸೋಣ' ಅಂದುಕೊಂಡು ಕೈತೋಟದಲ್ಲಿ ಚೆರ್ರಿ ಗಿಡದ ಬಳಿ ಬಂದರು. ಗಿಡವನ್ನು ಹಾಗೇ ಕೆಲಕ್ಷಣ ನೋಡಿದವರೇ, 'ರಾಕೇಶ್! ಬೇಗ ಬಾ, ನೋಡಿಲ್ಲಿ, ಇದು ಬೀಳುವಷ್ಟರಲ್ಲಿ ನೋಡು ಬಾ!' ಎಂದು ಉದ್ವೇಗದಿಂದ ಕೂಗಿದರು.

ರಾಕೇಶ್ ಮತ್ತು ತಾತ ಪವಾಡವನ್ನು ನೋಡುವವರಂತೆ ಚೆರ್ರಿ ಗಿಡವನ್ನು ನೋಡಿದರು. ರೆಂಬೆಯ ತುದಿಯಲ್ಲಿ ಗುಲಾಬಿ ಬಣ್ಣದ ಹೂವು ಬಿಟ್ಟಿತ್ತು. ಮುಂದಿನ ವರ್ಷ ಮತ್ತಷ್ಟು ಹೂಗಳು ಅರಳಿದವು. ರಾಕೇಶನಿಗಿಂತ ಅರ್ಧದಷ್ಟು ವಯಸ್ಸಿನದಾದರೂ ಗಿಡ ಅವನಿಗಿಂತ ಎತ್ತರ ಬೆಳೆದಿತ್ತು. ಆನಂತರ ಆ ಪ್ರದೇಶದ ಹಲವಾರು ಓಕ್ ಮರಗಳಿಗಿಂತ ಹಿರಿಯನಾದ ತಾತನಿಗಿಂತಲೂ ಎತ್ತರ ಬೆಳೆಯಿತು. ರಾಕೇಶ್ ಕೂಡ ಬೆಳೆದ, ಇತರ ಹುಡುಗರಂತೆ ಅವನೂ ಓಡುವುದು, ಎಗರುವುದು, ಮರ ಹತ್ತುವುದೂ ಮಾಡುತ್ತಿದ್ದ, ತುಂಬಾ ಪುಸ್ತಕಗಳನ್ನು ಓದುತ್ತಿದ್ದ.

ಚೆರ್ರಿ ಮರದ ಹೂಗಳಲ್ಲಿನ ಮಕರಂದ ಹೀರಲು ಈಗ ಜೇನ್ನೊಣಗಳು ಬರುತ್ತಿವೆ. ಸಣ್ಣ ಹಕ್ಕಿಗಳು ಕುಕ್ಕಿ ಕೆಲ ಹೂಗಳನ್ನು ಬೀಳಿಸಿದರೂ ಮರವು ವಸಂತ ಮಾಸದಲ್ಲಿ ಮೈ ತುಂಬಾ ಹೂವರಳಿಸಿ ನಿಂತಿದೆ.

ಆ ಬೇಸಿಗೆಯಲ್ಲಿ ಚೆರ್ರಿ ಮರದಲ್ಲಿ ಕೆಲವು ಹಣ್ಣುಗಳು ಬಿಟ್ಟಿದ್ದವು, ರಾಕೇಶ್ ಅದನ್ನು ಬಾಯಲ್ಲಿ ಇಟ್ಟುಕೊಂಡವನೇ 'ತುಂಬಾ ಹುಳಿ' ಎಂದು ತಕ್ಷಣ ಉಗಿದುಬಿಟ್ಟ, 'ಮುಂದಿನ ವರ್ಷ ಸರಿಹೋಗುತ್ತೆ ಬಿಡು' ಅಂದರು ತಾತ. ಆದರೆ ಹಕ್ಕಿಗಳು ಆ ಹಣ್ಣುಗಳನ್ನೇ ಇಷ್ಟಪಟ್ಟವು. ಅದರಲ್ಲೂ ದೊಡ್ಡ ಹಕ್ಕಿಗಳಾದ ಬುಲ್ ಬುಲ್ ಮತ್ತು ಚಿತ್ರಪಕ್ಷಿಗಳು ಹುಳಿ ಹಣ್ಣನ್ನೇ ಹಬ್ಬದೂಟದಂತೆ ಸವಿದವು. ಬೇಸಿಗೆಯ ಒಂದು ಸಂಜೆ, ರಾಕೇಶ್ ತನ್ನ ತಾತನನ್ನು ಮನೆಯಲ್ಲಿ ಹುಡುಕಿದ, ತಾತ ಯಾವಾಗಲೂ ಕೂರುವ ಜಾಗದಲ್ಲಿ ಕಾಣಿಸದಿದ್ದಾಗ ಆತನ ಮಲಗುವ ಕೋಣೆಗೆ ಹೋದ.ಅಲ್ಲಿನ ಕಿಟಕಿಯಿಂದ ತಾತ ಚೆರ್ರಿ ಮರದ ಕೆಳಗೆ ಬೆತ್ತದ ಕುರ್ಚಿ ಮೇಲೆ ಒರಗಿರುವ ದೃಶ್ಯ ಕಂಡಿತು.

'ಇಲ್ಲಿ ಒಳ್ಳೆಯ ನೆರಳಿದೆ. ಇಲ್ಲಿ ಕುಳಿತು ಮರದ ಎಲೆಗಳನ್ನು ನೋಡಲು ತುಂಬಾ ಚೆನ್ನಾಗಿರುತ್ತದೆ' ಅಂದರು ತಾತ. 'ಹೌದು, ಇದರ ಎಲೆಗಳು ಸುಂದರವಾಗಿವೆ. ಗಾಳಿ ಬೀಸಿದಾಗ ನರ್ತಿಸುತ್ತವೆ' ಎಂದ ರಾಕೇಶ್.

ತಾತ ಮನೆಯೊಳಗೆ ಬಂದ ಮೇಲೆ ರಾಕೇಶ್ ಚೆರ್ರಿ ಮರದ ಕೆಳಗೆ ಮಲಗಿ ಅದರ ಎಲೆಗಳನ್ನು ನೀಲಿ ಆಗಸದ ಹಿನ್ನೆಲೆಯಲ್ಲಿ ನೋಡುತ್ತಿದ್ದವನು, ಪಕ್ಕಕ್ಕೆ ತಿರುಗಿದಾಗ ಮೋಡಗಳು ಬೆಟ್ಟವನ್ನು ಆವರಿಸುವ ದೃಶ್ಯ ಕಂಡ.

ಸೂರ್ಯ ಮುಳುಗಿದರೂ ಅವನು ಅಲ್ಲೇ ಇರುವುದನ್ನು ಕಂಡು ತಾತ ಅವನ ಬಳಿ ಬಂದು ಕುಳಿತರು. ಇಬ್ಬರೂ ಮೌನವಾಗಿದ್ದರು. ಕತ್ತಲು ಆವರಿಸಿ, ನಕ್ಷತ್ರಗಳು ಮೂಡಿ, ನತ್ತಿಂಗ ಹಕ್ಕಿ ಕೂಗಿತು. ಕಣಿವೆಯ

ಕಾಡಿನಿಂದ ಚಿಮ್ಮುಂಡೆಗಳು ಮತ್ತು ಸಿಕಾಡಗಳು ಚಿರುಗುಟ್ಟಿದವು. ಎಲ್ಲಾ ಮರಗಳಿಂದ ಕೀಟಗಳ ಧ್ವನಿ ಹೊರಹೊಮ್ಮತೊಡಗಿತು.



"ಕಾಡಿನಲ್ಲಿ ಬೇಕಾದಷ್ಟು ಮರಗಳಿವೆ. ಆದರೆ ಈ ಮರವನ್ನೇ ನಾವೇಕೆ ಇಷ್ಟಪಡುತ್ತೇವೆ. ಏನಿದರ ವಿಶೇಷ?' ಎಂದು ರಾಕೇಶ್ ಕೇಳಿದನು.

'ಇದನ್ನು ನಾವೇ ನೆಟ್ಟು ಬೆಳೆಸಿದ್ದು, ಆದ್ದರಿಂದ ಇದು ನಮಗೆ ವಿಶೇಷ' ಎಂದರು ತಾತ,

'ಒಂದೇ ಒಂದು ಸಣ್ಣ ಬೀಜ' ಎನ್ನುತ್ತಾ ರಾಕೇಶ್ ತಾನು ಬೆಳೆಸಿದ ಆ ಮರದ ಕಾಂಡವನ್ನು ಮೃದುವಾಗಿ ಸವರಿದನು. ಹಾಗೇ ಸವರುತ್ತಾ ಎಲೆಯ ಮೇಲೆ ಬೆರಳಾಡಿಸಿ, 'ದೇವರೆಂಬ ಭಾವನೆ ಹುಟ್ಟಿಸುವುದು ಇದೇ ಅಲ್ಲವೇ' ಎಂದು ಮೆಲ್ಲನೆ ಪಿಸುಗುಟ್ಟಿದನು.

**ಲೇಖಕರು : ರಸ್ಕಿನ್ ಬಾಂಡ್**

**ಕನ್ನಡ ಅನುವಾದ : ಡಿ.ಜಿ. ಮಲ್ಲಿಕಾರ್ಜುನ**

### ಲೇಖಕರ ಪರಿಚಯ



ಡಿ. ಜಿ. ಮಲ್ಲಿಕಾರ್ಜುನ ಇವರು ಕರ್ನಾಟಕದ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟದವರು. ಮೆಕ್ಯಾನಿಕಲ್ ಎಂಜಿನಿಯರ್ ಪದವೀಧರರಾದ ಇವರ ಹವ್ಯಾಸಗಳು ಛಾಯಾಗ್ರಹಣ ಮತ್ತು ಬರಹ. ಪ್ರಸ್ತುತ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಗಳಿಗೆ ಶಿಡ್ಲಘಟ್ಟ ತಾಲೂಕು ವರದಿಗಾರರಾಗಿ ಕೆಲಸ ಮಾಡುತ್ತಿರುವ ಇವರು ಛಾಯಾಗ್ರಹಣದಲ್ಲಿ ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಯಿಂದ ಪ್ರಮಾಣ ಪತ್ರ ಪಡೆದಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿರುವ ಇವರು ನಮ್ಮ ಶಿಡ್ಲಘಟ್ಟ, ಕ್ಲಿಕ್, ಭೂತಾನ್, ಅರೆಕ್ಷಣದ ಅದೃಷ್ಟ, ಯೋರ್ಡಾನ್ ಪಿರೆಮಸ್ - ಜೋರ್ಡಾನ್ ಈಜಿಪ್ಟ್ ಪ್ರವಾಸ ಕಥನ ಕೃತಿಗಳನ್ನು ಪ್ರಕಟಿಸಿದ್ದಾರೆ. ಯೋರ್ಡಾನ್ ಪಿರೆಮಸ್ ಪ್ರವಾಸ ಕಥನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ೨೦೧೯ನೇ ಸಾಲಿನ ಅತ್ಯುತ್ತಮ ಕೃತಿಗಿರುವ ಬಹುಮಾನ ದೊರೆತಿದೆ. ಪ್ರಸ್ತುತ 'ಚೆರ್ರಿ ಹಣ್ಣಿನ ಮರ' ಎನ್ನುವ ಕತೆಯನ್ನು ಇವರ 'ರಸ್ಕಿನ್ ಬಾಂಡ್ ಕತೆಗಳು' ಎನ್ನುವ ಅನುವಾದಿತ ಕೃತಿಯಿಂದ ಆರಿಸಲಾಗಿದೆ.

## ಚಟುವಟಿಕೆಗಳು

### ಉತ್ತರಿಸಿರಿ

1. ರಾಕೇಶನು ಕೊಂಡುಕೊಂಡ ಚೆರ್ರಿ ಹಣ್ಣುಗಳು ಹೇಗೆ ಖಾಲಿಯಾದುವು?
2. ಚೆರ್ರಿ ಹಣ್ಣಿನ ಬೀಜವನ್ನು ಬಿತ್ತಿದ ಬಗೆ ಹೇಗೆ?
3. ಬೇರು ಬಿಟ್ಟಿರುವ ಚೆರ್ರಿ ಗಿಡವನ್ನು ಕಂಡ ರಾಕೇಶನು ಅದರ ಆರೈಕೆಯನ್ನು ಹೇಗೆ ಮಾಡಿದನು?
4. ಚೆರ್ರಿ ಗಿಡದ ಬೆಳೆವಣಿಗೆಗೆ ಅಡ್ಡಿ ಉಂಟು ಮಾಡಿದ ಘಟನೆಗಳನ್ನು ವಿವರಿಸಿರಿ.
5. ರಾಕೇಶನಿಗೆ ಚೆರ್ರಿ ಮರ ಹೆಚ್ಚು ಇಷ್ಟವಾಗಲು ಕಾರಣವೇನು?

### ಘಟನೆಗಳ ಕ್ರಮೀಕರಣ

ಕೆಳಗಿನ ಘಟನೆಗಳನ್ನು ಕ್ರಮೀಕರಿಸಿ ಬರೆಯಿರಿ.

1. ಬುಲ್ ಬುಲ್ ಮತ್ತು ಚಿತ್ರ ಪಕ್ಷಿಗಳು ಹುಳಿ ಹಣ್ಣನ್ನೇ ಹಬ್ಬದೂಟದಂತೆ ಸವಿದವು.
2. ನೆಲ ಮೆದುವಾಗಿದ್ದರಿಂದ ಬೀಜವನ್ನು ಹಾಗೆಯೇ ಬೆರಳಿನಿಂದ ಒತ್ತಿದನು.
3. ಹುಲ್ಲಿನ ಜೊತೆಯಲ್ಲಿ ಚೆರ್ರಿ ಗಿಡವನ್ನು ಕೊಯ್ದ ಹೆಂಗಸನ್ನು ತಾತ ಚೆನ್ನಾಗಿ ಬೈದರು.
4. ರಾಕೇಶ್ ಶಾಲೆಯಿಂದ ಬರುವಾಗ ಚೆರ್ರಿ ಹಣ್ಣುಗಳನ್ನು ಕೊಂಡನು.
5. ಚೆರ್ರಿ ಎಲೆಗಳನ್ನು ತಿಂದ ಕಂಬಳಿ ಹುಳುವನ್ನು ಎತ್ತಿ ಒಣ ಎಲೆಗಳ ಮಧ್ಯೆ ಬಿಟ್ಟ
6. ರಾಕೇಶ್ ಗಿಡಕ್ಕೆ ನೀರು ಚಿಮುಕಿಸಿ ಅದರ ಸುತ್ತ ಬೆಣಚು ಕಲ್ಲುಗಳನ್ನು ಜೋಡಿಸಿದ
7. ಗೊಲ್ಲಬಾಮೆ ತನ್ನ ಕತ್ತನು ಸುತ್ತ ತಿರುಗಿಸುತ್ತಾ ಅತ್ತಿತ್ತ ನೋಡುತಿತ್ತು.
8. “ಇದನ್ನು ನಾವೇ ನೆಟ್ಟು ಬೆಳೆಸಿದ್ದು ಆದ್ದರಿಂದ ಇದು ನಮಗೆ ವಿಶೇಷ” ಎಂದರು ತಾತ.
9. ಮೇಕೆಯೊಂದು ಕೈತೋಟ ಪ್ರವೇಶಿಸಿ ಎಲ್ಲಾ ಎಲೆಗಳನ್ನು ತಿಂದು ಹಾಕಿತು.

### ಸಂಭಾಷಣೆ

ಬೇಸಾಯದ ಕೆಲಸಗಳಲ್ಲಿ ತಂದೆ ತಾಯಿಗೆ ನೆರವಾಗಲು ರಾಕೇಶನು ತನ್ನ ಹಳ್ಳಿಗೆ ತೆರಳಿದನು. ಅಲ್ಲಿ ಅವರೊಳಗೆ ನಡೆದಿರಬಹುದಾದ ಸಂಭಾಷಣೆಯನ್ನು ಊಹಿಸಿ ಬರೆಯಿರಿ.

### ಅನುಭವ ಟಿಪ್ಪಣಿ

"ಕಾಡಿನಲ್ಲಿ ಬೇಕಾದಷ್ಟು ಮರಗಳಿವೆ. ಆದರೆ ಈ ಮರವನ್ನೇ ನಾವೇಕೆ ಇಷ್ಟಪಡುತ್ತೇವೆ" ಎಂದು ರಾಕೇಶ್ ಕೇಳಿದ.

"ಇದನ್ನ ನಾವೇ ನೆಟ್ಟು ಬೆಳೆಸಿದ್ದು. ಆದ್ದರಿಂದ ಇದು ನಮಗೆ ವಿಶೇಷ" ಎಂದರು ತಾತ.

➢ ಪಾಠಭಾಗದಲ್ಲಿ ಬಂದಿರುವ ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ನೀವು ನೆಟ್ಟು ಬೆಳೆಸಿದ 'ನನ್ನ ಮರ'ದ ಕುರಿತು ಒಂದು ಅನುಭವ ಟಿಪ್ಪಣಿ ಬರೆಯಿರಿ.

## ಕಿರು ಲೇಖನ

ಚೆರ್ರಿ ಮರದ ಹೂಗಳಲ್ಲಿನ ಮಕರಂದ ಹೀರಲು ಈಗ ಜೇನ್ನೊಣಗಳು ಬರುತ್ತಿವೆ.

ದೊಡ್ಡ ಹಕ್ಕಿಗಳಾದ ಬುಲ್ ಬುಲ್ ಮತ್ತು ಚಿತ್ರ ಪಕ್ಷಿಗಳು ಹುಳಿ ಹಣ್ಣನ್ನೇ ಹಬ್ಬದೂಟದಂತೆ ಸವಿದವು.

➢ ಪಾಠಭಾಗದ ಮೇಲಿನ ವಾಕ್ಯಗಳ ಹಿನ್ನೆಲೆಯಲ್ಲಿ ಗಿಡಮರಗಳಿಂದ ನಮಗೆ ದೊರಕುವ ಪ್ರಯೋಜನಗಳ ಕುರಿತು ಒಂದು ಕಿರು ಲೇಖನ ತಯಾರಿಸಿರಿ.

## ವಿವರಣೆ ಬರೆಯಿರಿ

ದೇಶದ ವಿವಿಧ ಮೂಲೆಗಳಿಂದ ನಮ್ಮ ಊರಿಗೆ ತಲುಪುವ ವಿವಿಧ ರೀತಿಯ ಹಣ್ಣುಗಳ ಬಗ್ಗೆ ತಿಳಿದಿರುವಿರಲ್ಲವೇ? ಯಾವುದಾದರೂ ಒಂದು ಹಣ್ಣಿನ ಕುರಿತು ವಿವರಣೆ ತಯಾರಿಸಿರಿ. ನಿಮ್ಮ ತರಗತಿಯಲ್ಲಿ ಮೂಡಿಬಂದ ಎಲ್ಲ ವಿವರಣೆಗಳನ್ನು ಸೇರಿಸಿಕೊಂಡು ಒಂದು ಸಂಚಿಕೆ ತಯಾರಿಸಿರಿ.

## ಸಂಯುಕ್ತ - ಸರಳ ವಾಕ್ಯ

ಈ ಕೆಳಗಿನ ವಾಕ್ಯಗಳನ್ನು ಓದಿರಿ.

➢ ಸ್ನೇಹಿತರೊಂದಿಗೆ ಕ್ರಿಕೆಟ್ ಆಡಲು ಓಡಿದ ಅವನಿಗೆ ಚೆರ್ರಿ ಬೀಜ ಮರೆತೇ ಹೋಯಿತು.

ಅವನು ಸ್ನೇಹಿತರೊಂದಿಗೆ ಕ್ರಿಕೆಟ್ ಆಡಲು ಓಡಿದನು.

ಅವನಿಗೆ ಚೆರ್ರಿ ಬೀಜ ಮರೆತೇ ಹೋಯಿತು.

➢ ಮೇಕೆಯೊಂದು ಕೈತೋಟ ಪ್ರವೇಶಿಸಿ ಎಲ್ಲ ಎಲೆಗಳನ್ನೂ ತಿಂದು ಹಾಕಿತು.

ಮೇಕೆಯೊಂದು ಕೈತೋಟ ಪ್ರವೇಶಿಸಿತು.

ಅದು ಎಲ್ಲ ಎಲೆಗಳನ್ನು ತಿಂದು ಹಾಕಿತು.

ಸಂಯುಕ್ತವಾಕ್ಯವನ್ನು ಸರಳವಾಕ್ಯಗಳಾಗಿ ಬದಲಾಯಿಸಿ ಬರೆದುದನ್ನು ನೋಡಿದರಲ್ಲವೇ? ಇದೇ ರೀತಿಯಲ್ಲಿ ಕೆಳಗೆ ನೀಡಲಾದ ವಾಕ್ಯಗಳನ್ನು ಸರಳವಾಕ್ಯಗಳಾಗಿ ಬರೆಯಿರಿ.

➢ ರಾಕೇಶ್ ಗಿಡಕ್ಕೆ ನೀರು ಚಿಮುಕಿಸಿ ಅದರ ಸುತ್ತ ಬೆಣಚು ಕಲ್ಲುಗಳನ್ನು ಜೋಡಿಸಿದನು.

➢ ಗಿಡದ ಮುಂದೆ ರಾಕೇಶ್ ಕುಕ್ಕರಗಾಲಲ್ಲಿ ಕುಳಿತರೆ ತಾತ ಸೊಂಟವನ್ನು ಬಗ್ಗಿಸಿ ನೋಡಿದರು.

➢ ಬೆಟ್ಟದಿಂದ ಹುಲ್ಲು ಕೊಯ್ದುಕೊಂಡು ಹೋಗಲು ಬರುವ ಹೆಂಗಸೊಬ್ಬಳು ತನ್ನ ಕುಡುಗೋಲಿನಿಂದ ಹುಲ್ಲಿನ ಜೊತೆಯಲ್ಲಿ ಚೆರ್ರಿ ಗಿಡವನ್ನೂ ಕೊಯ್ದು ಹಾಕಿದಳು.

➢ ರಾಕೇಶ್ ಚೆರ್ರಿ ಹಣ್ಣನ್ನು ಬಾಯಲ್ಲಿ ಇಟ್ಟುಕೊಂಡವನೇ 'ತುಂಬಾ ಹುಳಿ' ಎಂದು ತಕ್ಷಣ ಉಗಿದು ಬಿಟ್ಟನು.

# ನೇಗಿಲ ಯೋಗಿ



ನೇಗಿಲ ಹಿಡಿದಾ ಹೊಲದೊಳು ಹಾಡುತ
ಉಳುವಾ ಯೋಗಿಯ ನೋಡಲ್ಲಿ.
ಫಲವನು ಬಯಸದ ಸೇವೆಯೇ ಪೂಜೆಯು
ಕರ್ಮವೆ ಇಹಪರ ಸಾಧನವು.
ಕಷ್ಟದೊಳನ್ನವ ದುಡಿವನೆ ತ್ಯಾಗಿ
ಸೃಷ್ಟಿ ನಿಯಮದೊಳಗವನೆ ಭೋಗಿ,

ಲೋಕದೊಳೇನೇ ನಡೆಯುತಲಿರಲಿ
ತನ್ನೀ ಕಾರ್ಯವ ಬಿಡನೆಂದೂ:
ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ,
ಹಾರಲಿ ಗದ್ದುಗೆ ಮಕುಟಗಳು,
ಮುತ್ತಿಗೆ ಹಾಕಲಿ ಸೈನಿಕರೆಲ್ಲ,
ಬಿತ್ತುಳುವುದನವ ಬಿಡುವುದೆ ಇಲ್ಲ.


ಬಾಳಿತು ನಮ್ಮೀ ನಾಗರಿಕತೆ ಸಿರಿ
ಮಣ್ಣುಣಿ ನೇಗಿಲಿನಾಶ್ರಯದಿ;
ನೇಗಿಲ ಹಿಡಿದಾ ಕೈಯಾಧಾರದಿ
ದೊರೆಗಳು ದರ್ಪದೊಳಾಳಿದರು.
ನೇಗಿಲ ಬಲದೊಳು ವೀರರು ಮೆರೆದರು,
ಶಿಲ್ಪಿಗಳೆಸೆದರು, ಕವಿಗಳು ಬರೆದರು.



ಯಾರೂ ಅರಿಯದ ನೇಗಿಲ ಯೋಗಿಯೆ
ಲೋಕಕೆ ಅನ್ನವನೀಯುವನು.
ಹೆಸರನು ಬಯಸದೆ ಅತಿಸುಖಕೆಳಸದೆ
ದುಡಿವನು ಗೌರವಕಾಶಿಸದೆ.
ನೇಗಿಲಕುಳದೊಳಗಡಗಿದೆ ಕರ್ಮ;
ನೇಗಿಲ ಮೇಲೆಯೆ ನಿಂತಿದೆ ಧರ್ಮ.

– **ಕುವೆಂಪು**

## ಕವಿ ಪರಿಚಯ



ಕುವೆಂಪು ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರು ೨೯ ಡಿಸೆಂಬರ್ ೧೯೦೪ ರಂದು ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ನಂತರ ಅಲ್ಲೇ ಪ್ರಾಧ್ಯಾಪಕರಾಗಿ, ಕುಲಪತಿಗಳಾಗಿ ಕೆಲಸ ಮಾಡಿದರು. ಸಣ್ಣಕತೆ, ಕವಿತೆ, ಕಾದಂಬರಿ, ನಾಟಕ, ವಿಮರ್ಶೆ, ಮೀಮಾಂಸೆ, ಜೀವನಚರಿತ್ರೆ ಮುಂತಾದ ಹಲವು ಪ್ರಕಾರಗಳಲ್ಲಿ ಕೃಷಿ ಮಾಡಿರುವ ಇವರ "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ಲಭಿಸಿತು. ಪಾಂಚಜನ್ಯ, ನವಿಲು, ಕಲಾಸುಂದರಿ, ಕೃತ್ತಿಕೆ, ಅಗ್ನಿಹಂಸ, ಪಕ್ಷಿಕಾಶಿ, ಷೋಡಶಿ, ಅನಿಕೇತನ ಮುಂತಾದ ಹಲವು ಕವನ ಸಂಕಲನಗಳನ್ನು ಪ್ರಕಟಿಸಿದರು. ಕಾನೂರು ಸುಬ್ಬಮ್ಮ ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಇವರ ಎರಡು ಬೃಹತ್ ಕಾದಂಬರಿಗಳು. ಕರ್ನಾಟಕರತ್ನ, ಪಂಪಪ್ರಶಸ್ತಿ, ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ, ಪದ್ಮಭೂಷಣ, ಪದ್ಮವಿಭೂಷಣ ಮುಂತಾದ ಹಲವು ಪ್ರಶಸ್ತಿಗಳು ಇವರಿಗೆ ಸಂದಿವೆ. ಕನ್ನಡದ ಎರಡನೆಯ ರಾಷ್ಟ್ರಕವಿಗಳಾದ ಇವರು ೧೯೯೪ ನವೆಂಬರ್ ೧೧ ರಂದು ನಿಧನರಾದರು. ಪ್ರಸ್ತುತ ಕವಿತೆಯನ್ನು ಕುವೆಂಪು ಅವರ "ಕೊಳಲು" ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಚಟುವಟಿಕೆಗಳು

### ಹಾಡಿರಿ

ಈ ಕವನವನ್ನು ರಾಗವಾಗಿ ಹಾಡಿರಿ.

### ಉತ್ತರಿಸಿರಿ

1. ನೇಗಿಲ ಯೋಗಿಯು ಹೊಲದಲ್ಲಿ ಏನು ಮಾಡುತ್ತಿದ್ದಾನೆ?
2. ರೈತನು ತನ್ನ ಕಾಯಕದಲ್ಲಿ ಯಾವ ರೀತಿ ನಿರತನಾಗಿದ್ದಾನೆಂದು ಕವಿ ವರ್ಣಿಸುತ್ತಾರೆ?
3. ನಮ್ಮ ನಾಗರಿಕತೆ ಹೇಗೆ ಬೆಳೆಯಿತು?
4. ಇಹಪರದ ಸಾಧನ ಯಾವುದು?
5. ನೇಗಿಲಿನ ಮಹತ್ವವೇನು?

### ಆಶಯ ಬರವಣಿಗೆ

ನೇಗಿಲ ಯೋಗಿ ಪದ್ಯದ ಆಶಯವನ್ನು ಬರೆಯಿರಿ.

## ಸ್ವಾರಸ್ಯ ಬರವಣಿಗೆ

ಕೆಳಗೆ ಕೊಟ್ಟಿರುವ ಸಾಲುಗಳ ಸ್ವಾರಸ್ಯ ಬರೆಯಿರಿ

ಬಾಳಿತು ನಮ್ಮೀ ನಾಗರಿಕತೆ ಸಿರಿ
ಮಣ್ಣುಣಿ ನೇಗಿಲಿನಾಶ್ರಯದಿ;
ನೇಗಿಲ ಹಿಡಿದಾ ಕೈಯಾಧಾರದಿ
ದೊರೆಗಳು ದರ್ಪದೊಳಾಳಿದರು.
ನೇಗಿಲ ಬಲದೊಳು ವೀರರು ಮೆರೆದರು,
ಶಿಲ್ಪಿಗಳೆಸೆದರು, ಕವಿಗಳು ಬರೆದರು

## ಟಿಪ್ಪಣಿ ಬರವಣಿಗೆ

"ರೈತನೇ ದೇಶದ ಬೆನ್ನೆಲುಬು" ಎಂಬ ಮಾತನ್ನು ಕೇಳಿರುವಿರಲ್ಲವೇ? ಇಂದು ರೈತರು ಎದುರಿಸುತ್ತಿರುವ ಸಮಸ್ಯೆಗಳೇನು ?ಅದನ್ನು ಹೇಗೆ ಪರಿಹರಿಸಬಹುದು? ನಿಮ್ಮ ಅಭಿಪ್ರಾಯವನ್ನು ಟಿಪ್ಪಣಿ ರೂಪದಲ್ಲಿ ಬರೆಯಿರಿ.

## ಲಿಖಿತ ಭಾಷಣ

ಯಾರೂ ಅರಿಯದ ನೇಗಿಲ ಯೋಗಿಯೆ
ಲೋಕಕೆ ಅನ್ನವನೀಯುವನು.

➢ 'ನೇಗಿಲ ಯೋಗಿ' ಕವನದ ಮೇಲಿನ ಸಾಲುಗಳು ಮತ್ತು ಇಡೀ ಕವನದ ಹಿನ್ನೆಲೆಯಲ್ಲಿ **'ಅನ್ನದಾತ - ನಮ್ಮ ರೈತ'** ಎಂಬ ವಿಷಯದ ಕುರಿತು ಒಂದು ಲಿಖಿತ ಭಾಷಣ ತಯಾರಿಸಿರಿ.

## ಗಾದೆ ವಿಸ್ತರಣೆ

ಉದಾ : ತಗ್ಗಿದ ಗದ್ದೆಗೆ ಮೂರು ಬೆಳೆ
ಬೇಸಾಯಗಾರ ಬೇಗ ಸಾಯ

ಈ ಗಾದೆಗಳಲ್ಲಿ ನಿಮಗೆ ಇಷ್ಟವಾದ ಒಂದನ್ನು ವಿಸ್ತರಿಸಿ ಬರೆಯಿರಿ.

## ಪ್ರಾಸ ಪದ

ಈ ಕೆಳಗಿನ ಸಾಲುಗಳನ್ನು ಗಮನಿಸಿರಿ.

ಕಷ್ಟದೊಳನ್ನವ ದುಡಿವನೆ ತ್ಯಾಗಿ
ಸೃಷ್ಟಿ ನಿಯಮದೊಳಗವನೆ ಭೋಗಿ

> ಈ ಸಾಲುಗಳಲ್ಲಿ ತ್ಯಾಗಿ-ಭೋಗಿ ಪ್ರಾಸಬದ್ಧವಾಗಿದೆ. ಹೀಗೆ ಪದ್ಯದ ಪ್ರತಿಪಾದ ಅಥವಾ ನಿರ್ದಿಷ್ಟ ಪಾದಗಳಲ್ಲಿ ಅಂತ್ಯಾಕ್ಷರವು ಸಮಾನವಾಗಿದ್ದರೆ ಅದು ಅಂತ್ಯಪ್ರಾಸವೆನಿಸುವುದು.

'ನೇಗಿಲ ಯೋಗಿ' ಪದ್ಯದಲ್ಲಿ ಬರುವ ಅಂತ್ಯಪ್ರಾಸ ಪದಗಳನ್ನು ಹುಡುಕಿ ಬರೆಯಿರಿ.

## ಪದ ವಿಂಗಡಣೆ

ನೋಡಲ್ಲಿ = ನೋಡು + ಅಲ್ಲಿ
ಕಷ್ಟದೊಳನ್ನವ = ಕಷ್ಟದೊಳು + ಅನ್ನವ
ರಾಜ್ಯಗಳುದಿಸಲಿ = ರಾಜ್ಯಗಳು + ಉದಿಸಲಿ

ಮೇಲಿನ ಪದಗಳನ್ನು ವಿಂಗಡಿಸಿ ಬರೆದುದನ್ನು ನೋಡಿದಿರಲ್ಲವೇ? ಇದೇ ರೀತಿಯಲ್ಲಿ ಕೆಳಗೆ ಕೊಟ್ಟಿರುವ ಪದಗಳನ್ನು ವಿಂಗಡಿಸಿ ಬರೆಯಿರಿ.

- ನಿಯಮದೊಳಗವನೇ -
- ನಡೆಯುತಲಿರಲಿ -
- ರಾಜ್ಯಗಳಳಿಯಲಿ -
- ನೇಗಿಲಿನಾಶ್ರಯದಿ -
- ಕೈಯಾಧಾರದಿ -
- ದರ್ಪದೊಳಾಳಿದರು -
- ಅನ್ನವನೀಯುವನು -
- ಗೌರವಕಾಶಿಸದೆ -
- ನೇಗಿಲಕುಳದೊಳಗಡಗಿದೆ -
- ಶಿಲ್ಪಿಗಳೆಸೆದರು -

# ಬಾಳು ಬೆಳಗಿಸಿದ ಕೃಷಿ !

ಅದು ಆಂಧ್ರಪ್ರದೇಶದ ನಲ್ಗೊಂಡ ಜಿಲ್ಲೆಯ ಒಂದು ಹಳ್ಳಿ. ಅಲ್ಲಿ ಮಾಧವರೆಡ್ಡಿ ಎಂಬಾತನಿದ್ದ. ಅವನಿಗೆ ೧೮ ಎಕರೆ ಜಮೀನಿತ್ತು. ಕೃಷಿ, ಅವನ ಆಸಕ್ತಿಯ ಕ್ಷೇತ್ರವಾಗಿರಲಿಲ್ಲ. ನೌಕರಿಗೆ ಸೇರಬೇಕು. ಕೆಲಸದ ನೆಪದಲ್ಲಿ ಊರೂರು ತಿರುಗುತ್ತಾ ಜ್ಞಾನ ಹೆಚ್ಚಿಸಿಕೊಳ್ಳಬೇಕು ಎಂಬುದು ಮಾಧವರೆಡ್ಡಿಯ ವಾದವಾಗಿತ್ತು. ರೋಗಿ ಬಯಸಿದ್ದೂ ಹಾಲು ಅನ್ನ... ಎಂಬ ಮಾತಿನಂತೆ, ರೆಡ್ಡಿಗೆ ಚಿಟ್‌ಫಂಡ್ ಕಂಪನಿಯಲ್ಲಿ ನೌಕರಿ ಸಿಕ್ಕಿತು. ನಂತರದ ಕೆಲ ದಿನಗಳಲ್ಲಿ ಮದುವೆಯೂ ಆಯಿತು. ರೆಡ್ಡಿಯ ಮನದನ್ನೆಯಾಗಿ ಬಂದಾಕೆಯ ಹೆಸರು ಶಶಿಕಲಾ. ಅದೊಂದು ದಿನ, ಹೆಂಡತಿಯನ್ನು ಎದುರು ಕೂರಿಸಿಕೊಂಡು ಮಾಧವ ರೆಡ್ಡಿ ಹೇಳಿಬಿಟ್ಟ "ಇಂಟ್ಲೋ ಚಿನ್ನ ಚಿನ್ನ ಪನಿ ಚೇಸ್ಕೋನಿ ಆರಾಮ್ಗಾ ಉಂಡು, ಜಮೀನ್, ವ್ಯವಹಾರಲಾ ಗೊಡವಾ ನೀಕು ವದ್ದು..." (ಮನೆಯಲ್ಲಿ ಚಿಕ್ಕ ಪುಟ್ಟ ಕೆಲಸ ಮಾಡ್ಕೊಂಡು ಆರಾಮಾಗಿ ಇರು. ಜಮೀನು ಹಾಗೂ ವ್ಯವಹಾರದ ಉಸಾಬರಿ ನಿನಗೆ ಬೇಡ...) ಮುಂದೆ ಈ ದಂಪತಿಗೆ ಗಂಡು ಮಗುವಾಯಿತು. ಅದಕ್ಕೆ ಸಾಯಿರಾಂ ರೆಡ್ಡಿ ಎಂದು ಹೆಸರಿಡಲಾಯಿತು. ಮನೆ ಹಾಗೂ ಮಗು-ಇವೆರಡೇ ತನ್ನ ಪ್ರಪಂಚ ಅನ್ನಿಸಿದಾಗ ಶಶಿಕಲಾ ಓದಲು ಆಸೆಪಟ್ಟಳು. ಈ ವಿಷಯವಾಗಿ ಗಂಡನನ್ನು ಒಪ್ಪಿಸಿ, ತೆಲುಗು ಸಾಹಿತ್ಯದಲ್ಲಿ ಪದವಿ ಮುಗಿಸಿದಳು. ಇಷ್ಟೆಲ್ಲಾ ಆಗುವ ವೇಳೆಗೆ ಈಕೆಗೆ ೩೦ ವರ್ಷ ತುಂಬಿತ್ತು.

ಸಂಸಾರ ನಿರ್ವಹಣೆಗೆ ಗಂಡನ ಸಂಪಾದನೆಯಿದೆ. ಜಮೀನಿನ ಉಸ್ತುವಾರಿ ಬಂಧುಗಳ ಕೈಯಲ್ಲಿದೆ. ಗೊಂದಲವೇ ಇಲ್ಲದ ಸಂತೃಪ್ತ ಬದುಕು ನನ್ನದು ಎಂಬ ಸಡಗರದಲ್ಲಿ ಶಶಿಕಲಾ ಇದ್ದಾಗಲೇ, ಆಕೆ ಕನಸಿನಲ್ಲೂ ಊಹಿಸಿರದಂಥ ದುರಂತವೊಂದು ನಡೆದುಹೋಯಿತು. ಅದೊಂದು ಮುಂಜಾನೆ, ನೌಕರಿಗೆ ಹೊರಟು ನಿಂತ ಮಾಧವರೆಡ್ಡಿ, ಹೊಸ್ತಿಲು ದಾಟುತ್ತಿದ್ದಂತೆಯೇ, ಯಾಕೋ ಎದೆ ನೋಯುತ್ತಿದೆ ಎಂದ. ಮರುಕ್ಷಣವೇ ಕುಸಿದು ಕುಳಿತ. ರೆಡ್ಡಿಯನ್ನು ತಕ್ಷಣವೇ ಆಸ್ಪತ್ರೆಗೆ ಸೇರಿಸಿದ್ದಾಯ್ತು. ಆದರೆ ಪ್ರಯೋಜನವಾಗಲಿಲ್ಲ. ತೀವ್ರ ಹೃದಯಾಘಾತದಿಂದ ಆತ ತೀರಿಕೊಂಡ. ವಾರದ ನಂತರ, ಮತ್ತೊಂದು ಶಾಕಿಂಗ್ ಸುದ್ದಿ ಶಶಿಕಲಾಳನ್ನು ತಲುಪಿತು. ಏನೆಂದರೆ - ಬಿಸಿನೆಸ್ ಮಾಡುವ ನೆಪದಲ್ಲಿ, ಮಾಧವ ರೆಡ್ಡಿ ೪.೫೦ ಲಕ್ಷ ರೂಪಾಯಿ ಸಾಲ ಮಾಡಿದ್ದ!

ರೆಡ್ಡಿಯ ಮದುವೆಯಾದ ಮೂರು ವರ್ಷದಲ್ಲಿಯೇ ಆತನ ಹೆತ್ತವರು ತೀರಿಕೊಂಡಿದ್ದರು. ಈಗ, ಇಡೀ ಮನೆಗೆ, ಶಶಿಕಲಾ ಮತ್ತು ಆಕೆಯ ಮಗ ಇಬ್ಬರೇ ಆದರು. ಅದುವರೆಗೂ ಮನೆಯಿಂದ ಹೊರಗೇ ಬಾರದಿದ್ದ ಶಶಿಕಲಾ, ಈಗ ಹೊಟ್ಟೆಪಾಡಿನ ಕಾರಣಕ್ಕಾದರೂ ಹೊರಗೆ ಬರಲೇಬೇಕಿತ್ತು. ಗಂಡನ ಹೆಸರಲ್ಲಿ ಜಮೀನಿತ್ತು ನಿಜ. ಆದರೆ ಬೇಸಾಯ ಮಾಡಿಸುವುದು ಹೇಗೆಂದೇ ಈಕೆಗೆ ಗೊತ್ತಿರಲಿಲ್ಲ. ಜಮೀನಿನ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಬಂಧುಗಳ ಬಳಿ ಹೋಗಿ, ಅದುವರೆಗೂ ಆಗಿರುವ ಕೆಲಸದ ವಿವರ ಕೇಳಿದರೆ, ಅದನ್ನೆಲ್ಲಾ ನಿನ್ನ ಗಂಡನಿಗೆ

ಹೇಳಿದ್ದೆವಲ್ಲ; ಈಗ ನಿನಗೂ ಯಾಕೆ ಹೇಳ್ಬೇಕು, ಆ ಜಮೀನಿನಿಂದ ಏನೂ ಗಿಟ್ಟುವುದಿಲ್ಲ. ಅದನ್ನು ನಮಗೆ ಮಾರಿಬಿಡು ಎಂದು ಒತ್ತಾಯಿಸಿದರಂತೆ. ಹಾಗೇನಾದರೂ ಮಾಡಿದರೆ, ತನ್ನ ಬದುಕಿಗೆ ಇರುವ ಆಸರೆಯೂ ತಪ್ಪಿ ಹೋಗಿ ಬೀದಿಪಾಲಾಗಬೇಕಾಗುತ್ತದೆ ಅನಿಸಿದ್ದರಿಂದ 'ಉಹುಂ, ಏನೇ ಕಷ್ಟ ಬಂದರೂ ಸರಿ, ಜಮೀನು ಮಾರಲಾರೆ. ಇನ್ಮೇಲೆ ನಾನೇ ನಿಂತು ಬೇಸಾಯ ಮಾಡಿಸ್ತೇನೆ ಎಂದುಬಿಟ್ಟಿದ್ದಾಳೆ ಶಶಿಕಲಾ.

ಶಶಿಕಲಾಳ ಯಶೋಗಾಥೆ ಆರಂಭವಾಗುವುದೇ ಇಲ್ಲಿಂದ ಜಮೀನನ್ನ ಮಾರುವುದಿಲ್ಲ ಎಂದು ಈಕೆ ಖಡಾಖಂಡಿತವಾಗಿ ಹೇಳಿದ್ದರಿಂದ ಸಿಟ್ಟಿಗೆದ್ದ ಬಂಧುಗಳು, ಈಕೆಯ ವಿರುದ್ಧ ಅಪಪ್ರಚಾರ ಮಾಡಿದರು. 'ಈ ಹೆಂಗಸಿನ ಕಾಲ್ಗುಣ ಚೆನ್ನಾಗಿಲ್ಲ ಕಣೋ. ಹಾಗಾಗಿ ಗಂಡನೇ ಸತ್ತು ಹೋದ' ಅಂದರು. ಗಂಡನನ್ನೇ ತಿನ್ಕೊಂಡವಳು, ವಿಧವೆ ಎಂದು ಹೆಜ್ಜೆಹೆಜ್ಜೆಗೂ ಹಂಗಿಸಿದರು. ಇಂಥ ಮಾತುಗಳಿಗೆ ಶಶಿಕಲಾ ಕೇರ್ ಮಾಡಲಿಲ್ಲ, ಅದೊಂದು ದಿನ, ಕೂಲಿ ಕಾರ್ಮಿಕರ ನೆರವಿನೊಂದಿಗೆ ಕೃಷಿ ಕೆಲಸ ಆರಂಭಿಸಿಯೇಬಿಟ್ಟಳು. ಕೆಲವೇ ತಿಂಗಳಲ್ಲಿ ಬಗೆಬಗೆಯ ಹಣ್ಣು, ತರಕಾರಿಯ ಬೆಳೆಯಿಂದ ಕೃಷಿ ಭೂಮಿ ನಳನಳಿಸಿತು. ಶಶಿಕಲಾಳ ಈ ಏಳಿಗೆಯನ್ನು ಸಹಿಸದ ಬಂಧುಗಳು, ರಾತ್ರೋ ರಾತ್ರಿ ತೋಟಕ್ಕೆ ನುಗ್ಗಿ ಬೆಳೆಯನ್ನೆಲ್ಲ ಕತ್ತರಿಸಿ ಹಾಕಿದರು. ಜಮೀನಿಗೆ ನೀರಾವರಿಯ ಅನುಕೂಲವೇ ಸಿಗದಂತೆ ತಂತ್ರ ರೂಪಿಸಿದರು. ಕೂಲಿಗೆ ಬರುತ್ತಿದ್ದ ಕಾರ್ಮಿಕರಿಗೆ ಬೆದರಿಕೆ ಹಾಕಿ, ಅವರನ್ನೆಲ್ಲ ಹಿಂದಕ್ಕೆ ಕಳಿಸಿಬಿಟ್ಟರು. ಹಳೆಯ ಸಾಲದ ಮರುಪಾವತಿಗೆ ಒತ್ತಾಯಿಸುವಂತೆ ಶಶಿಕಲಾಳ ಗಂಡನಿಗೆ ಸಾಲ ಕೊಟ್ಟಿದ್ದವರಿಗೆಲ್ಲ ಹೇಳಿಕೊಟ್ಟರು. ದಿನವೂ ಇಂಥ ಕಿರಿಕಿರಿಗಳೇ ಜೊತೆಯಾದ್ದರಿಂದ ವಿಪರೀತ ನೊಂದುಕೊಂಡ ಶಶಿಕಲಾ, ತಕ್ಷಣವೇ ಹೆತ್ತವರಿಗೆ ಪತ್ರ ಬರೆದಳು.

ಮಗಳ ಪತ್ರ ಕಂಡಾಕ್ಷಣ, ಶಶಿಕಲಾಳ ಹೆತ್ತವರು ಧಾವಿಸಿ ಬಂದರು. ಸಮಾಧಾನ ಹೇಳಿ ಎದ್ದು ಹೋಗುವ ಮುನ್ನ, ರಾಮಕೃಷ್ಣ ಪರಮಹಂಸರ ವಿಚಾರಗಳಿದ್ದ ಪುಸ್ತಕವನ್ನು ಕೊಟ್ಟು ಶಶಿಕಲಾಳ ಅಣ್ಣ ಹೇಳಿದನಂತೆ: 'ಈ ಪುಸ್ತಕವನ್ನು ಪೂರ್ತಿ ಓದು. ಆನಂತರವೂ ಸಾಯಬೇಕು ಅನ್ನಿಸಿದರೆ ಹಾಗೇ ಮಾಡು...'

ರಾಮಕೃಷ್ಣ ಪರಮಹಂಸರ ವಿಚಾರಗಳನ್ನು ಓದುತ್ತಾ ಹೋದಂತೆಲ್ಲ ಶಶಿಕಲಾ, ಮಾನಸಿಕವಾಗಿ ಗಟ್ಟಿಯಾದಳು. ಮಗನಿಗೆ ಭವಿಷ್ಯ ರೂಪಿಸುವುದಕ್ಕಾದರೂ ನಾನು ಬದುಕಲೇಬೇಕು ಎಂದು ನಿರ್ಧರಿಸಿದಳು. ಕೃಷಿ ಕೆಲಸವನ್ನು ಏಕಾಂಗಿಯಾಗಿ ಮಾಡಲು ಮುಂದಾದಳು.

"ಇದೆಲ್ಲಾ ೨೦೦೫ ರ ಮಾತು. ಆಗ ಜಮೀನಿನಲ್ಲಿ ಜನರೇಟರ್ ಇತ್ತು. ಅದನ್ನು ಸ್ಟಾರ್ಟ್ ಮಾಡಲು ಒಂದು ಬಿಂದಿಗೆ ನೀರು ಹಾಕಬೇಕಿತ್ತು. ಆ ನೀರನ್ನು ಪಕ್ಕದಲ್ಲಿದ್ದ ಕಲ್ಲುಕಟ್ಟದ ಬಾವಿಯಿಂದ ತರಬೇಕಿತ್ತು. ಅದನ್ನು ನೆನಪಿಸಿಕೊಂಡು ಶಶಿಕಲಾ ಹೇಳುತ್ತಾಳೆ: 'ಬಾವಿಯಲ್ಲಿ ನೀರು ತುಂಬಾ ಆಳದಲ್ಲಿತ್ತು. ನೀರು ತುಂಬಿಸಿಕೊಂಡು ಒಂದೊಂದೇ ಮೆಟ್ಟಿಲೇರುವಾಗ ಸ್ವಲ್ಪ ಆಯ ತಪ್ಪಿದರೂ ಬಾವಿಗೆ ಬಿದ್ದು ಹೋಗುತ್ತಿದ್ದೆ. ನನಗೆ ಈಜು ಬರುತ್ತಿರಲಿಲ್ಲ. ಇಂತ ಇಕ್ಕಟ್ಟಿನ ಸ್ಥಿತಿಯಲ್ಲೇ ಆರೇಳು ತಿಂಗಳು ಕೆಲಸ ಮಾಡಿದೆ. ಆ ವೇಳೆಗೆ, ಉಳುಮೆಯ ಕೆಲಸ ಬಹಳ ಕಷ್ಟ

ಅನ್ನಿಸಿತು. ಆಗ, ಕೆಲವರ ಸಲಹೆಯಂತೆ ಸಾಲ ಮಾಡಿ ಹತ್ತು ಹಸುಗಳನ್ನು ಖರೀದಿಸಿ, ಡೈರಿಗೆ ಹಾಲು ಮಾರಲು ಆರಂಭಿಸಿದೆ.....





ಇದೇ ಸಂದರ್ಭದಲ್ಲಿ, ಆಂಧ್ರದಾದ್ಯಂತ ಸಾವಯವ ಕೃಷಿಯ ಪ್ರಯೋಗಗಳು ಹೆಚ್ಚಿದ್ದವು. ಅದೊಮ್ಮೆ ನಮ್ಮ ಊರಿಗೂ ಬಂದ ಸಾವಯವ ಕೃಷಿ ಆಂದೋಲನದ ಮುಖಂಡರು, ಹಸುವಿನ ಸೆಗಣಿ ಹಾಗೂ ಕೊಟ್ಟಿಗೆಯ ಕಸದಿಂದ ಎರೆಗೊಬ್ಬರ ತಯಾರಿಸಬಹುದು. ಅದರಿಂದ ದೊಡ್ಡ ಪ್ರಮಾಣದ ಲಾಭ ಪಡೆಯಬಹುದು ಎಂದರು. ಜೊತೆಗೆ, ಹೈದರಾಬಾದ್‌ನ ಒಂದು ವಿಳಾಸ ನೀಡಿ, ಅಲ್ಲಿಗೆ ಹೋಗಿ ಎರೆಗೊಬ್ಬರ ತಯಾರಿಸುವ ರೀತಿಯನ್ನು ಕಲಿಯಬೇಕೆಂದೂ ಸಲಹೆ ಮಾಡಿದರು. ಹೈದರಾಬಾದ್‌ನಲ್ಲಿ ತರಬೇತಿ ಪಡೆದ ನಂತರ, ನನ್ನ ಆದಾಯದ ಮೊತ್ತ ದುಪ್ಪಟ್ಟಾಯಿತು. ಐದು ಹಸುಗಳಿಂದ ಸಂಗ್ರಹವಾದ ಸೆಗಣಿ ಹಾಗೂ ಕೊಟ್ಟಿಗೆಯ ಕಸದಿಂದ, ಕೆಲವೇ ತಿಂಗಳುಗಳಲ್ಲಿ ೨೦೦೦ ಟನ್ ಎರೆಗೊಬ್ಬರ ತಯಾರಿಸಲು ಸಾಧ್ಯವಾಯಿತು. ಎರೆಗೊಬ್ಬರ ಮಾರಾಟದಿಂದ, ಕನಸಿನಲ್ಲೂ ನಿರೀಕ್ಷಿಸದಷ್ಟು ಲಾಭ ಬಂತು.

ಸಾವಯವ ಗೊಬ್ಬರ ತಯಾರಿಕೆಯಿಂದಲೂ ಭಾರಿ ಲಾಭವಿದೆ ಅನ್ನಿಸಿದಾಗ, ಮತ್ತಷ್ಟು ಹಸುಗಳನ್ನು ಖರೀದಿಸುವ, ಈ ಹಸುಗಳಿಗೆ ಮೇವು ಬೆಳೆಯಲೆಂದೇ ಜಮೀನು ಖರೀದಿಸುವ ಯೋಚನೆ ಬಂತು. ತಕ್ಷಣವೇ ಬ್ಯಾಂಕ್ ಸಾಲಕ್ಕೆ ಅರ್ಜಿ ಹಾಕಿದೆ. ಗಂಡನ ಹೆಸರಿನಲ್ಲಿದ್ದ ಜಮೀನನ್ನು ಆಧಾರವಾಗಿಟ್ಟು, ೧೦ ಲಕ್ಷ ರೂಪಾಯಿ ಸಾಲ ಪಡೆದೆ. ಅಷ್ಟೂ ಹಣ ಕೈ ಸೇರಿದ ತಕ್ಷಣ, ಗಂಡ ಮಾಡಿದ್ದ ೪.೫೦ ಲಕ್ಷ ಮತ್ತು ಹಸುಗಳನ್ನು ಖರೀದಿಸಲು ಮಾಡಿದ್ದ ಸಾಲ ತೀರಿಸಿದೆ. ೨ ಲಕ್ಷ ರೂಗಳಲ್ಲಿ ಎರಡೆಕರೆ ಜಮೀನು ಹಾಗೂ ಉಳಿದ ಹಣದಲ್ಲಿ ಮತ್ತಷ್ಟು ಹಸುಗಳನ್ನು ಖರೀದಿಸಿದೆ. ಈ ಸಂದರ್ಭದಲ್ಲಿ ಮಧ್ಯವರ್ತಿಗಳಂತೆ ಬಂದ ಕೆಲವರು ಮೋಸ ಮಾಡಿದರು. ವಯಸ್ಸಾಗಿದ್ದ, ಹಾಲು ಕೊಡದಿದ್ದ ಹಸುಗಳನ್ನು, ಸುಳ್ಳು ಮಾಹಿತಿ ನೀಡಿ ಮಾರಿಬಿಟ್ಟರು. ಪರಿಣಾಮ ಏನಾಯಿತೆಂದರೆ, ವಾರಕ್ಕೊಂದು ಹಸು ಅನಾರೋಗ್ಯದಿಂದ ಮಲಗುತ್ತಿತ್ತು. ಅಥವಾ ಸತ್ತು ಹೋಗುತ್ತಿತ್ತು. ಹೀಗೇ, ಸಾಲುಸಾಲಾಗಿ ಆರು ಹಸುಗಳು ಸತ್ತಾಗ ಗಾಬರಿಯಾಯಿತು. ತಕ್ಷಣವೇ, ವಯಸ್ಸಾದ ಹಸುಗಳನ್ನು ಗೋಶಾಲೆಗೆ ಕಳಿಸಿಬಿಟ್ಟೆ. ಈ ವ್ಯವಹಾರದಲ್ಲಿ ೩ ಲಕ್ಷ ರೂ. ನಷ್ಟವಾಯಿತು.

ಈ ವಿಷಯ ಗೊತ್ತಾಗುತ್ತಿದ್ದಂತೆಯೇ 'ಬಂಧುಗಳು' ಮತ್ತೆ ಎದ್ದು ಬಂದರು. 'ಕೃಷಿ ಹಾಗೂ ವ್ಯವಹಾರ ಹೆಂಗಸರಿಗಲ್ಲ, ತಕ್ಷಣವೇ ಎಲ್ಲವನ್ನೂ ಮಾರಿಬಿಡು. ಖರೀದಿಸಲು ನಾವು ಸಿದ್ಧರಿದ್ದೇವೆ' ಎಂದರು. ಆದರೆ ಈ

ಹೊತ್ತಿಗಾಗಲೇ, ಶ್ರಮದ ದುಡಿಮೆ ಎಂದೂ ನಮ್ಮ ಕೈಬಿಡುವುದಿಲ್ಲ ಎಂಬ ಸತ್ಯ ನನಗೆ ಅರ್ಥವಾಗಿತ್ತು. 'ಎಷ್ಟೇ ಲಾಸ್ ಆದ್ರೂ ಸರಿ, ನಾನು ಏಕಾಂಗಿಯಾಗಿ ಕೆಲಸ ಮಾಡ್ತೀನಿ' ಎಂದೆ. ಆನಂತರದಲ್ಲಿ, ಬ್ಯಾಂಕ್ ಸಾಲದ ಸಹಾಯದಿಂದ ಮತ್ತೆ ೪೦ ಹಸುಗಳನ್ನು ಖರೀದಿಸಿದೆ.

ಈ ವೇಳೆ, ಸಾವಯವ ಕೃಷಿ ಪದ್ಧತಿಯಲ್ಲೂ ಸಾಕಷ್ಟು ಆವಿಷ್ಕಾರಗಳಾಗಿದ್ದವು. ಸೆಗಣಿ ಹಾಗೂ ಕಸದಿಂದ ಎರೆಹುಳು ಗೊಬ್ಬರವನ್ನು ತಯಾರಿಸುವುದಷ್ಟೇ ಅಲ್ಲ, ಜೈವಿಕ ಕ್ರಿಯಾ ಘಟಕ ಆರಂಭಿಸಿ, ಅದರಿಂದ ಜೈವಿಕ ಅನಿಲವನ್ನು ಈ ಅನಿಲದಿಂದ ವಿದ್ಯುತ್ತನ್ನು ಉತ್ಪಾದಿಸಬಹುದು ಎಂಬಲ್ಲಿಗೆ ಸಾವಯವ ಕೃಷಿಯ ಕ್ರಾಂತಿ ಮುನ್ನಡೆದಿತ್ತು. ಈ ಹಿಂದೆ ಎರೆಹುಳು ಗೊಬ್ಬರ ತಯಾರಿಸಿ ವಿಪರೀತ ಲಾಭ ಕಂಡಿದ್ದೆನಲ್ಲ; ಅದೇ ನಂಬಿಕೆಯಿಂದ ಜೈವಿಕ ಕ್ರಿಯಾ ಘಟಕ ಆರಂಭಿಸುವ ಧೈರ್ಯ ಮಾಡಿದೆ. ಹೀಗೆ ಉತ್ಪತ್ತಿಯಾದ ಗೊಬ್ಬರವನ್ನೇ ನಮ್ಮ ಜಮೀನಿನಲ್ಲಿ ಬಳಸಿದೆ. ಪರಿಣಾಮವಾಗಿ, ದುಪ್ಪಟ್ಟು ಪ್ರಮಾಣದ ಬೆಳೆ ಬಂತು. ಮನೆ ಹಾಗೂ ಕೃಷಿ ಭೂಮಿಯ ಎಲ್ಲ ಅಗತ್ಯಗಳಿಗೂ ಸಾಕಾಗುವಷ್ಟು ವಿದ್ಯುತ್ತನ್ನು, ಜೈವಿಕ ಅನಿಲ ಘಟಕದಿಂದಲೇ ಉತ್ಪಾದಿಸಲು ಸಾಧ್ಯವಾಯಿತು. ಹೀಗೆ, ಬದುಕಲ್ಲಿ ನಾನು ಒಂದೊಂದೇ ಗೆಲುವು ದಕ್ಕಿಸಿಕೊಳ್ಳುತ್ತಿದ್ದ ಸಂದರ್ಭದಲ್ಲಿಯೇ ನನ್ನ ಮಗ ಸಾಯಿರಾಂ ರೆಡ್ಡಿ, ಶ್ರದ್ಧೆಯಿಂದ ಓದಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿಬಿಟ್ಟ...



ಹಾಲು ಮಾರಾಟದ ಕೆಲಸವಾಗಲಿ, ಎರೆಗೊಬ್ಬರ ತಯಾರಿಸುವುದಾಗಲಿ ಸುಲಭವಲ್ಲ. ಅಲ್ಲಿ, ಮುಂಜಾನೆ ೩ ಗಂಟೆಯಿಂದಲೇ ಕೆಲಸ ಶುರುವಾಗುತ್ತದೆ. ಮೈಕೈಗೆ ಹಸುವಿನ ಸೆಗಣಿ, ಗಂಜಲ, ಗೊಬ್ಬರದ ವಾಸನೆ ಮೆತ್ತಿಕೊಳ್ಳುತ್ತದೆ, ಅದನ್ನೆಲ್ಲ ಕಂಡ ಬಂಧುಗಳು 'ಥೂ, ಇವಳು ಕೊಳಕಿ' ಅಂದರು. 'ದುಡ್ಡಿನಾಸೆಯಿಂದ ಹೀಗೆಲ್ಲ ದುಡೀತಾಳೆ' ಎಂದು ಹಂಗಿಸಿದರು. ಆದರೆ, ನನ್ನ ಯಶೋಗಾಥೆಯನ್ನು ಆಂಧ್ರದ ಸರ್ಕಾರ ಹಾಗೂ ಸ್ಥಾನೀ ಪತ್ರಿಕೆ ಗುರುತಿಸಿದವು. 'ಅಬಲೆಯರಿಗೆಲ್ಲಾ ಶಶಿಕಲಾರ ಬದುಕು ಸ್ಫೂರ್ತಿಯಾಗಲಿ' ಎಂದು ಪತ್ರಿಕೆಗಳಲ್ಲಿ ಸುದ್ದಿಗಳು ಪ್ರಕಟವಾದವು."

ಬದುಕಲ್ಲಿ, ಚಿಕ್ಕ ವಯಸ್ಸಿಗೇ ಗಂಡನನ್ನು ಕಳೆದುಕೊಂಡು ಒಂಟಿಯಾದ ನಂತರವೂ, ಎಲ್ಲ ಸವಾಲುಗಳಿಗೂ ಎದೆಯೊಡ್ಡಿ ಗೆದ್ದ ಈ ದಿಟ್ಟೆಯ ಬದುಕು ಎಲ್ಲರಿಗೂ ಪಾಠವಾಗುವಂಥದ್ದು, ಅಲ್ಲವೇ?

ಲೇಖಕರು: **ಎ.ಆರ್. ಮಣಿಕಾಂತ್**

### ಲೇಖಕರ ಪರಿಚಯ



ಎ.ಆರ್ ಮಣಿಕಾಂತ್ ರವರು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಆಯಿತನಹಳ್ಳಿಯಲ್ಲಿ ಜನಿಸಿದರು. ಶ್ರೀಯುತರು ಮಂಡ್ಯದ ಪಿ.ಇ.ಎಸ್. ಕಾಲೇಜಿನಲ್ಲಿ ಬಿ.ಇ. ಆಟೊಮೊಬೈಲ್ ಪದವಿಯನ್ನು ಪಡೆದ ಇವರಿಗೆ ಒಲಿದಿದ್ದು ಪತ್ರಿಕೋದ್ಯಮ. ಹಾಯ್ ಬೆಂಗಳೂರ್, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ ಪತ್ರಿಕೆಗಳಲ್ಲಿ ಉದ್ಯೋಗವನ್ನು ಮಾಡಿದರು. ಪ್ರಸ್ತುತ ಕನ್ನಡಪ್ರಭದಲ್ಲಿ ಮುಖ್ಯ ಉಪಸಂಪಾದಕರಾಗಿರುವರು. 'ಭಾವತೀರಯಾನ', 'ನನ್ನ ಹಾಡು ನನ್ನದು' ಎಂಬ ಅಂಕಣಗಳ ಬರಹಗಾರ. 'ಅಮ್ಮ ಹೇಳಿದ ಎಂಟು ಸುಳ್ಳುಗಳು, ಅಪ್ಪ ಅಂದ್ರೆ ಆಕಾಶ, ಭಾವತೀರಯಾನ, ನವಿಲುಗರಿ' ಇವರ ಪ್ರಕಟವಾಗಿರುವ ಪುಸ್ತಕಗಳು. ಸೇಡಂನ ಅಮ್ಮ ಪ್ರಶಸ್ತಿ ಹಾಗೂ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಇವರಿಗೆ ಲಭಿಸಿವೆ.

ಈ ಮೇಲಿನ ಲೇಖನವನ್ನು 'ಮನಸು ಮಾತಾಡಿತು' ಎಂಬ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

### ಚಟುವಟಿಕೆಗಳು

#### ಉತ್ತರಿಸಿರಿ

1. ಮಾಧವ ರೆಡ್ಡಿಯ ಜೀವನ ಹೇಗೆ ಸಾಗುತಿತ್ತು?
2. ಶಶಿಕಲಾಳನ್ನು ಮನೆಯ ಹೊರಗಿನ ಪ್ರಪಂಚಕ್ಕೆ ಬರುವಂತೆ ಮಾಡಿದ ಘಟನೆಗಳು ಯಾವುವು?
3. ಶಶಿಕಲಾಳ ಮೇಲೆ ಬಂಧುಗಳು ಸಿಟ್ಟುಗೊಳ್ಳಲು ಕಾರಣವೇನು?
4. ಬಂಧುಗಳ ಸಿಟ್ಟಿನಿಂದ ಶಶಿಕಲಾ ಇದಿರಿಸಿದ ಕಷ್ಟಗಳು ಯಾವುವು?
5. "ಶ್ರಮದ ದುಡಿಮೆ ಎಂದೂ ನಮ್ಮ ಕೈಬಿಡೋದಿಲ್ಲ" ಎಂಬ ಭರವಸೆ ಶಶಿಕಲಾಳಲ್ಲಿ ಮೂಡಲು ಕಾರಣವೇನು?

#### ಚರ್ಚಿಸಿ ಬರೆಯಿರಿ

'ತಂದೆ ತಾಯಿ ಮತ್ತು ಅಣ್ಣನ ಸಾಂತ್ವನದ ಮಾತುಗಳು ಶಶಿಕಲಾಳನ್ನು ಏಕಾಂಗಿಯಾಗಿ ಕೃಷಿ ಕೆಲಸದಲ್ಲಿ ತೊಡಗಲು ಪ್ರೇರೇಪಿಸಿತು.' ಇಂತಹ ಪ್ರೇರಣೆಯ ಮಾತುಗಳಿಂದ ಶಶಿಕಲಾ ಮಾಡಿದ ಸಾಧನೆಯನ್ನು ನಿಮ್ಮ ಅಭಿಪ್ರಾಯಗಳೊಂದಿಗೆ ಬರೆಯಿರಿ.

### ಪತ್ರ ಬರವಣಿಗೆ

ಶಶಿಕಲಾ ತನ್ನ ಬದುಕಿನಲ್ಲಿ ಇದಿರಾದ ಕಷ್ಟಗಳ ಬಗ್ಗೆ ತನ್ನ ಹೆತ್ತವರಿಗೆ ಪತ್ರದ ಮೂಲಕ ತಿಳಿಸುತ್ತಾಳಲ್ಲವೇ? ಅವಳು ಪತ್ರದಲ್ಲಿ ಏನನ್ನು ಬರೆದಿರಬಹುದು? ಊಹಿಸಿ ಬರೆಯಿರಿ.

### ಸಂದರ್ಶನ ಪ್ರಶ್ನಾವಳಿ

ನಿಮ್ಮ ಊರಿನಲ್ಲಿ ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ವ್ಯಕ್ತಿಯನ್ನು ಸಂದರ್ಶನ ಮಾಡುವುದಕ್ಕಿರುವ ಸಂದರ್ಶನ ಪ್ರಶ್ನಾವಳಿಯನ್ನು ತಯಾರಿಸಿರಿ.

### ಪ್ರಬಂಧ ರಚನೆ

ನಾವಿಂದು ಇತರ ಎಲ್ಲಾ ಕ್ಷೇತ್ರಗಳಂತೆ ಕೃಷಿಯಲ್ಲೂ ಮುಂದಿದ್ದೇವೆ. ಅನೇಕ ಬದಲಾವಣೆಗಳು ನಮ್ಮ ಕೃಷಿ ರಂಗದಲ್ಲಿ ಉಂಟಾಗಿವೆ. ಈ ಎಲ್ಲಾ ವಿಚಾರಗಳನ್ನು ಸೇರಿಸಿಕೊಂಡು 'ಆಧುನಿಕ ಕೃಷಿ ರಂಗ' ಎಂಬ ವಿಷಯದ ಕುರಿತು ಪ್ರಬಂಧವನ್ನು ತಯಾರಿಸಿರಿ.

### ಅನ್ಯದೇಶೀಯ ಪದ

ಈ ಕೆಳಗೆ ನೀಡಿರುವ ಪದಗಳನ್ನು ಗಮನಿಸಿರಿ.

- ಬ್ಯಾಂಕ್
- ಸ್ಟಾರ್ಟ್


ವಿವಿಧ ಭಾಷೆಗಳ ಪದಗಳನ್ನು ಕನ್ನಡ ಭಾಷೆಯಲ್ಲಿ ಬಳಸುತ್ತಿದ್ದೇವೆ. ಹೀಗೆ ಬೇರೆ ಭಾಷೆಗಳಿಂದ ಸ್ವೀಕರಿಸಿದ ಪದಗಳನ್ನು "ಅನ್ಯದೇಶೀಯ ಪದ"ಗಳೆಂದು ಕರೆಯುತ್ತಾರೆ.

ಈ ಪಾಠಭಾಗದಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಪಟ್ಟಿ ಮಾಡಿರಿ.

### ಕನ್ನಡ ಅಂಕೆಗಳ ಪರಿಚಯ

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ |

# 2. ಹೆಣ್ಣು - ಕಣ್ಣು



ಸ್ತ್ರೀ ಸಮುದಾಯವನ್ನು ಕಡೆಗಣಿಸುವ ಪ್ರವೃತ್ತಿ ಹಳೆಯ ಕಾಲದಿಂದಲೂ ನಿರಂತರವಾಗಿ ನಡೆದು ಬಂದಿದೆ. ಚರಿತ್ರೆಯನ್ನು ನಿರ್ಮಿಸುವಲ್ಲಿ ಸ್ತ್ರೀ ಎಷ್ಟೇ ಮಹತ್ವದ ಪಾತ್ರವಹಿಸಿದರೂ ಅವಳು ಚರಿತ್ರೆಯಲ್ಲಿ ದಾಖಲಾದದ್ದು ಕಡಿಮೆ. ಇದು ಸ್ತ್ರೀ ಶೋಷಣೆಯ ಒಂದು ಮುಖವಾಗಿದೆ. ಎಷ್ಟೇ ತುಳಿಯಲ್ಪಟ್ಟರೂ ಗರಿಕೆಯ ಹುಲ್ಲಿನಂತೆ ಚಿಗುರುವ ಶಕ್ತಿ ಹೆಣ್ಣಿಗಿರುವುದರಿಂದ ಅವಳು ಶೋಷಣೆಯನ್ನು ಮೆಟ್ಟಿನಿಂತು ಹತ್ತು ಹಲವು ಕ್ಷೇತ್ರಗಳಲ್ಲಿ ತನ್ನ ಸಾಧನೆಯನ್ನು ಮೆರೆದಿದ್ದಾಳೆ. ಇತಿಹಾಸದಲ್ಲಿ ಧೈರ್ಯ ಸಾಹಸದ ಮೂರ್ತರೂಪವಾಗಿದ್ದಾಳೆ. ಸಾಮಾಜಿಕವಾಗಿ ಹಲವು ಸಂಪ್ರದಾಯ ಕಟ್ಟುಕಟ್ಟಳೆಗಳ ಎಲ್ಲೆಯನ್ನು ಮೀರಿ ವರ್ತಮಾನ ಕಾಲದಲ್ಲಿ ಸ್ತ್ರೀ ಆಡಳಿತ, ವೈಜ್ಞಾನಿಕ, ವೈದ್ಯಕೀಯ, ತಾಂತ್ರಿಕ, ಔದ್ಯೋಗಿಕ, ಕೃಷಿ, ಕ್ರೀಡೆ, ಕಲೆ, ಮುಂತಾದ ಸಕಲ ಕ್ಷೇತ್ರಗಳಲ್ಲಿ ಸಾಧನೆಯ ಉತ್ತುಂಗದಲ್ಲಿ ರಾರಾಜಿಸುತ್ತಿದ್ದಾಳೆ.

## ಪ್ರವೇಶ ಚಟುವಟಿಕೆ

- ಕೆಳಗೆ ನೀಡಿರುವ ಪತ್ರಿಕಾ ವಾರ್ತೆಯ ತುಣುಕುಗಳನ್ನು ಓದಿರಿ.



ಮಾದರಿ ಮಾನಿನಿ

### 'ಎಳನೀರಿನ ಅಮ್ಮ'ನಿಗೆ ಪದ್ಮಶ್ರೀ ಅಭಿಷೇಕ

**ಕಾಮಾಚಿ ಚೆಲ್ಲಮ್ಮಾಳ್** ಅಂಡಮಾನ್ ನಿಕೋಬಾರ್

ಸಾಂಪ್ರದಾಯಿಕ ವಿಧಾನದಲ್ಲಿ ತೆಂಗು ಕೃಷಿ ಮಾಡುವ ಮೂಲಕ ದೇಶದ ಗಮನ ಸೆಳೆದಿರುವ ಕಾಮಾಚಿ ಚೆಲ್ಲಮ್ಮಾಳ್ 'ಎಳನೀರಿನ ಅಮ್ಮ' ಎಂದೇ ಹೆಸರು ಪಡೆದವರು. ರಾಸಾಯನಿಕಗಳನ್ನು ಬಳಸುವ ಸುಲಭ ವಿಧಾನಗಳಿಗೆ ಮೊರೆ ಹೋಗದೆ ತಮ್ಮ ಪೂರ್ವಜರು ಅನುಸರಿಸುತ್ತಿದ್ದ ವಿಧಾನಗಳನ್ನೇ ಅನುಸರಿಸಿ ಸುತ್ತಮುತ್ತಲಿನ ರೈತರಿಗೂ ಮಾದರಿಯಾದವರು. ರಾಮ್‌ಚಂಗ್ ಎಂಬ ಗ್ರಾಮದ ನಿವಾಸಿಯಾಗಿರುವ ಚೆಲ್ಲಮ್ಮಾಳ್ ತಮಗೆ ಬಂದ ಆ ಕರೆಯನ್ನು ಪ್ರಾಂಕ್ ಕಾಲ್ ಎಂದು ತಳ್ಳಿಹಾಕುವವರಿದ್ದರು. ಕೇಂದ್ರ ಸರಕಾರಿ ಅಧಿಕಾರಿಯೋರ್ವರು ಪದ್ಮಶ್ರೀ ಪ್ರಶಸ್ತಿ ಸಿಕ್ಕಿರುವ ಬಗ್ಗೆ ಕರೆ ಮಾಡಿದ್ದರು. ಅಂಡಮಾನ್ ನಿಕೋಬಾರ್‌ನ ಸ್ಥಳೀಯ ಅಧಿಕಾರಿಯೊಬ್ಬರು ಕರೆ ಮಾಡಿದಾಗಲೇ ತೆಂಗು ಕೃಷಿಕ ಮಹಿಳೆ ಚೆಲ್ಲಮಾಳ್‌ಗೆ ನಂಬಿಕೆ ಬಂದಿದ್ದು.

10 ಎಕರೆ ಪ್ರದೇಶದಲ್ಲಿ ಮಾದರಿ ತೆಂಗು ಕೃಷಿ

### ಭಾರತದ ಮೊದಲ ರೈಲು ಚಾಲಕಿ

### ಮದ್ದಾನೆ ಪಳಗಿಸುವ ಮಾತೆ

**ಪಾರ್ವತಿ ಬರುವಾ** ಗೌರಿಪುರ, ಅಸ್ಸಾಂ

ಹೆಣ್ಣುಮಕ್ಕಳು ಬೊಂಬೆಗಳೊಡನೆ ಆಡುವವರು, ಸದಾ ಸೌಂದರ್ಯ ಸಾಧನಗಳೊಂದಿಗೆ ಪ್ರಯೋಗಗಳನ್ನು ನಡೆಸುವವರು ಎಂಬೊಂದು ಸಿದ್ಧ ಪರಿಕಲ್ಪನೆಯಿದೆ ಸಮಾಜದಲ್ಲಿ. ಅವನ್ನೆಲ್ಲಾ ಧಿಕ್ಕರಿಸಿದವರು ಪಾರ್ವತಿ. ಚಿಕ್ಕಂದಿನಲ್ಲಿ ಅವರು ಗೊಂಬೆಗಳಿಗೆ ಬದಲಾಗಿ ಜೀವಂತ ಆನೆ ಕುದುರೆಗಳೊಂದಿಗೆ ಆಡುತ್ತಿದ್ದರು. ಮುಂದೆ ಮೊದಲ ಬಾರಿ ಕೆರಳಿದ ಮದ್ದಾನೆಯನ್ನು ಪಳಗಿಸಿದಾಗ ಈ ಹೆಣ್ಣುಮಗಳಿಗೆ ಹದಿನಾಲ್ಕೇ ವಯಸ್ಸು. ಎಲ್ಲಕ್ಕಿಂತ ಆಶ್ಚರ್ಯ ಸಂಗತಿ ಎಂದರೆ ದೇಶದ ಮೊದಲ ಮಹಿಳಾ ಮಾವುತೆ ಎನ್ನುವ ಕೀರ್ತಿಗೆ ಪಾತ್ರವಾಗಿರುವ ಪಾರ್ವತಿ ರಾಜಮನೆತನಕ್ಕೆ ಸೇರಿದವರು. ಬಿಬಿಸಿ ಮಾಧ್ಯಮ ಸಂಸ್ಥೆ ಈಕೆಯ ಜೀವನವನ್ನಾಧರಿಸಿ 'ಕ್ವೀನ್ ಆಫ್ ದಿ ಎಲಿಫೆಂಟ್ಸ್'(ಆನೆಗಳ ರಾಣಿ) ಎಂಬ ಸಾಕ್ಷ್ಯಚಿತ್ರ ನಿರ್ಮಿಸಿದೆ.

14 ವರ್ಷ ವಯಸ್ಸಿನಿಂದಲೇ ಆನೆ ಪಳಗಿಸಿದ ಶ್ರೇಯ

### ನಾಟ್ಯ ಮಯೂರಿ

Work Life balance

### 2022ರ ವಿಶ್ವಕಪ್ ಬಳಿಕ ಮಿಥಾಲಿ ರಾಜ್ ನಿವೃತ್ತಿ

**ನವದೆಹಲಿ:** ಭಾರತದ ಮಹಿಳಾ ಏಕದಿನ ತಂಡದ ನಾಯಕಿ ಮಿಥಾಲಿ ರಾಜ್ ಮುಂದಿನ ವರ್ಷ ನ್ಯೂಜಿಲೆಂಡ್‌ನಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಬಳಿಕ ಎರಡು ದಶಕಗಳ ತಮ್ಮ ಅಂತಾರಾಷ್ಟ್ರೀಯ ಕ್ರಿಕೆಟ್ ಬದುಕಿಗೆ ವಿದಾಯ ಹೇಳುವುದಾಗಿ ತಿಳಿಸಿದ್ದಾರೆ. 38 ವರ್ಷದ ಮಿಥಾಲಿ 2022 ನನ್ನ ವೃತ್ತಿಜೀವನದ ಕೊನೆ ವರ್ಷವಾಗಿರುತ್ತದೆ ಎಂದು ಪುಸ್ತಕವೊಂದರ ಬಿಡುಗಡೆಯ ವರ್ಚುವಲ್ ಸಮಾರಂಭದಲ್ಲಿ ಹೇಳಿದ್ದಾರೆ.

1999ರಲ್ಲಿ 16ನೇ ವಯಸ್ಸಿನಲ್ಲೇ ಅಂತಾರಾಷ್ಟ್ರೀಯ ಕ್ರಿಕೆಟ್ ಪ್ರವೇಶಿಸಿದ್ದ ಮಿಥಾಲಿ, ಭಾರತ ಪರ ಇದುವರೆಗೆ 10 ಟೆಸ್ಟ್, 214 ಏಕದಿನ ಮತ್ತು 89 ಟಿ20 ಪಂದ್ಯ ಆಡಿದ್ದಾರೆ. ಅವರು 2019ರಲ್ಲೇ ಟಿ20 ಕ್ರಿಕೆಟ್‌ಗೆ ವಿದಾಯ ಪ್ರಕಟಿಸಿದ್ದರು.

ಈ ವರ್ಷ ನಡೆಯಬೇಕಾಗಿದ್ದ ಏಕದಿನ ವಿಶ್ವಕಪ್ ಕರೊನಾ ಕಾರಣದಿಂದಾಗಿ ಮುಂದಿನ ವರ್ಷಕ್ಕೆ ಮುಂದೂಡಿಕೆಯಾಗಿತ್ತು.

### ಐಒಸಿಗೆ ಪಿವಿ ಸಿಂಧು ರಾಯಭಾರಿ

**ನವದೆಹಲಿ:** ವಿಶ್ವ ಚಾಂಪಿಯನ್ ಹಾಗೂ ಒಲಿಂಪಿಕ್ ಬೆಳ್ಳಿ ಪದಕ ವಿಜೇತೆ ಪಿವಿ ಸಿಂಧು, ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ 'ಕ್ರೀಡಾ ನಂಬಿಕೆ' (ಬಿಲೀವ್ ಇನ್ ಸ್ಪೋರ್ಟ್ಸ್) ಪ್ರಚಾರ ಕಾರ್ಯಕ್ಕೆ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. ವಿಶ್ವ ನಂ.11 ಆಟಗಾರ ಕೆನಡದ ಮಿಚೆಲ್ ಲೀ ಪುರುಷರ ವಿಭಾಗದಿಂದ ನೇಮಕವಾಗಿದ್ದಾರೆ. ಸಿಂಧು ಹಾಗೂ ಮಿಚೆಲ್, ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್‌ನ ಜಾಗತಿಕ ರಾಯಭಾರಿಗಳಾಗಿ ಕಳೆದ ವರ್ಷದ ಏಪ್ರಿಲ್‌ನಿಂದಲೂ ಕಾರ್ಯನಿರ್ವಹಿಸುತ್ತಿದ್ದಾರೆ. 'ಐಒಸಿಗೆ ರಾಯಭಾರಿಯಾಗುವುದು ಹೆಮ್ಮೆಯ ವಿಷಯ. ಕ್ರೀಡಾಪಟುಗಳ ಪರವಾಗಿ ನಿಲ್ಲುವೆ. ಒಗ್ಗಟ್ಟಿನಿಂದ ಎಲ್ಲರೂ ಇದರಲ್ಲಿ ಪಾಲ್ಗೊಳ್ಳಬೇಕು' ಎಂದು ಸಿಂಧು ತಿಳಿಸಿದ್ದಾರೆ. ಇದು ಭಾರತಕ್ಕೆ ಸಂದ ದೊಡ್ಡ ಗೌರವ, ಭಾರತೀಯ ಬ್ಯಾಡ್ಮಿಂಟನ್ ಸಂಸ್ಥೆ ಸಿಂಧು ಅವರನ್ನು ಅಭಿನಂದಿಸುತ್ತದೆ ಎಂದು ಭಾರತೀಯ ಬ್ಯಾಡ್ಮಿಂಟನ್ ಸಂಸ್ಥೆಯ ಕಾರ್ಯದರ್ಶಿ ಅಜಯ್ ಸಿಂಘಾನಿಯಾ ತಿಳಿಸಿದ್ದಾರೆ.

» ಸ್ಟಾರ್ ಷಟ್ಲರ್‌ಗೆ ಬಿಎಐ ಅಭಿನಂದನೆ

**ಪ್ಯಾರಾಷಟ್ಲರ್‌ಗಳಿಗೆ ಶಾಕ್:** ಕೋವಿಡ್-19ರಿಂದಾಗಿ ಸ್ಪೇನ್‌ನಲ್ಲಿರುವ ಕೋವಿಡ್-19 ಮಾರ್ಗಸೂಚಿಯಿಂದಾಗಿ ಭಾರತದ ಅಗ್ರಮಾನ್ಯ ಪ್ಯಾರಾಷಟ್ಲರ್‌ಗಳಾದ ಪ್ರಮೋದ್ ಭಗತ್ ಹಾಗೂ ಸುಕಾಂತ್ ಕದಂ ಸ್ಪಾನಿಷ್ ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್‌ನಿಂದ ಹಿಂದೆ ಸರಿದಿದ್ದಾರೆ. ಇದರಿಂದ ಪ್ಯಾರಾಲಂಪಿಕ್ ಸಿದ್ಧತೆಯಲ್ಲಿದ್ದ ಭಾರತದ ಷಟ್ಲರ್‌ಗಳಿಗೆ ಭಾರಿ ಹಿನ್ನಡೆಯಾದಂತಾಗಿದೆ. ಪೂರ್ವನಿಗದಿಯಂತೆ ಟೂರ್ನಿಯೂ ಮೇ 11 ರಿಂದ 16 ರವರೆಗೆ ಸ್ಪೇನ್‌ನಲ್ಲಿ ನಡೆಯಬೇಕಿತ್ತು. ಆದರೆ, ಭಾರತದಿಂದ ಆಗಮಿಸುವ ಪ್ರವಾಸಿಗರಿಗೆ ಸ್ಪೇನ್‌ನಲ್ಲಿ 10 ದಿನಗಳ ಕಾಲ ಕ್ವಾರಂಟೈನ್ ಅವಧಿಯನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದಾಗಿ ಷಟ್ಲರ್‌ಗಳು ಟೂರ್ನಿಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ.

### ಬಾಕ್ಸಿಂಗ್ ಚಾಂಪಿಯನ್‌ಶಿಪ್

**ನವದೆಹಲಿ:** ಭಾರತದ ಬಾಕ್ಸಿಂಗ್ ತಾರೆಯರಾದ ಮೇರಿಕೋಮ್, ಅಮಿತ್ ಪಂಘಾಲ್ ಸೇರಿ ಒಟ್ಟು 10 ಮಂದಿ ಸೋಮವಾರದಿಂದ ದುಬೈನಲ್ಲಿ ನಡೆಯಲಿರುವ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ. ಒಲಿಂಪಿಕ್ಸ್‌ಗೂ ಮೊದಲು ಇದು ಕೊನೆಯ ಮಹತ್ವದ ಬಾಕ್ಸಿಂಗ್ ಟೂರ್ನಿ ಆಗಿದೆ. ವಿಶೇಷ ವಿಮಾನದಲ್ಲಿ ತೆರಳಿದ ಭಾರತ ತಂಡ ಶುಕ್ರವಾರ ಸಂಜೆ ದುಬೈ ತಲುಪಿದ್ದು, ಏರ್‌ಪೋರ್ಟ್ ಹಾಗೂ ಹೋಟೆಲ್‌ನಲ್ಲಿ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಪಟ್ಟಿದೆ. ಭಾರತ, ಇಂಡೋನೇಷ್ಯಾ, ಇರಾನ್, ಕಜಕಸ್ತಾನ, ದಕ್ಷಿಣ ಕೊರಿಯಾ, ಕಿರ್ಗಿಸ್ತಾನ, ಫಿಲಿಪ್ಪೀನ್ಸ್, ಉಜ್ಬೇಕಿಸ್ತಾನ ಸೇರಿ ಏಷ್ಯಾದ ಪ್ರಮುಖ ರಾಷ್ಟ್ರಗಳು ಸ್ಪರ್ಧಿಸಲಿವೆ. 2019ರ ಆವೃತ್ತಿಯಲ್ಲಿ ಭಾರತ 2 ಚಿನ್ನ ಸೇರಿ ಒಟ್ಟು 13 ಪದಕಗಳನ್ನು ಗೆದ್ದಿತ್ತು.

- ನೀಡಿರುವ ಪತ್ರಿಕಾ ವಾರ್ತೆಯ ತುಣುಕುಗಳನ್ನು ಓದಿದಾಗ ನೀವು ಕಂಡುಕೊಂಡ ವಿಚಾರಗಳೇನು? ಚರ್ಚಿಸಿರಿ.

# ರಾಣಿ ಅಬ್ಬಕ್ಕ



(ಹಿನ್ನೆಲೆ ಧ್ವನಿ: ತುಳುನಾಡಿನ ವೀರ ಮಹಿಳೆಯರಲ್ಲಿ ರಾಣಿ ಅಬ್ಬಕ್ಕ ದೇವಿಗೆ ಅಗ್ರಸ್ಥಾನವು ಸಲ್ಲುತ್ತದೆ. ರಾಣಿ ಅಬ್ಬಕ್ಕ ಚೌಟ ವಂಶದವಳು. ವಿಜಯನಗರದ ಅಧೀನದಲ್ಲಿದ್ದ ಚೌಟರು ತುಳುನಾಡಿನ ಅರಸು ಮನೆತನಗಳಲ್ಲಿ ಪ್ರಸಿದ್ಧರಾದವರು. ಸೋಮೇಶ್ವರ, ತಲಪಾಡಿ, ಕೈರಂಗಳ ಮುಂತಾದ ಮಾಗಣೆಗಳು ಅವರ ಸಂಸ್ಥಾನದಲ್ಲಿ ಸೇರಿದ್ದವು. ಸ್ವಾತಂತ್ರ್ಯ ಪ್ರಿಯಳಾಗಿದ್ದ ಅಬ್ಬಕ್ಕ ಅಪ್ರತಿಮ ಬುದ್ಧಿವಂತೆಯಾಗಿದ್ದಳು. ಅವಳ ಮಾವ ತಿರುಮಲರಾಯ ಅವಳಿಗೆ ಸೂಕ್ತ ವಿದ್ಯಾಭ್ಯಾಸವನ್ನು ಕೊಡಿಸಿ ಕತ್ತಿ ವರಸೆ, ಕುದುರೆ ಸವಾರಿ, ತುಫಾಕಿ ಹಾರಿಸುವುದು ಮುಂತಾದ ಯುದ್ಧ ವಿದ್ಯೆಗಳಲ್ಲಿ ಪರಿಣತೆಯಾಗುವಂತೆ ಮಾಡಿದನು. ಸದ್ಗುಣ ಸಂಪನ್ನೆಯಾದ ಅಬ್ಬಕ್ಕನನ್ನು ತಿರುಮಲರಾಯನು ಮಂಗಳೂರು ಸಂಸ್ಥಾನದ ಅರಸನಾಗಿದ್ದ ಲಕ್ಷ್ಮಪ್ಪ ಬಂಗರಸನಿಗೆ ಮದುವೆ ಮಾಡಿಕೊಟ್ಟನು.)

**ದೃಶ್ಯ - 1 (ಅರಮನೆ)**

(ಹಿನ್ನೆಲೆ ಧ್ವನಿ ಕ್ಷೀಣವಾಗುತ್ತಿದ್ದಂತೆ ತೆರೆ ಸರಿಯುವುದು. ಸಿಂಹಾಸನದಲ್ಲಿ ಲಕ್ಷ್ಮಪ್ಪ ಬಂಗರಸ ಮತ್ತು ಅಬ್ಬಕ್ಕದೇವಿ ಕುಳಿತಿರುವರು)

ಅಬ್ಬಕ್ಕ` : ನೋಡಿ! ನಮ್ಮ ಮಕ್ಕಳಂತಿರುವ ಪ್ರಜೆಗಳು ಕಷ್ಟಪಟ್ಟು ದುಡಿಯುತ್ತಿದ್ದಾರೆ. ಅವರ ಸಂಪಾದನೆಯನ್ನೆಲ್ಲ ನಾವು ಪೋರ್ಚುಗೀಸರಿಗೆ ಕಪ್ಪ ಕಾಣಿಕೆಯಾಗಿ ಕೊಡುತ್ತಿದ್ದೇವೆ. ಅದರ ಬದಲು ಆ ಸಂಪತ್ತನ್ನು ಬಡಬಗ್ಗರ ಏಳಿಗೆಗಾಗಿ ವಿನಯೋಗಿಸಬಾರದೆ?

ಬಂಗರಸ : ಸರಿಯಾಗಿಯೇ ಹೇಳಿದೆ ರಾಣಿ. ಆದರೆ ಈ ವಿಷಯವನ್ನು ನಮ್ಮವರೆಲ್ಲ ಒಪ್ಪಬೇಕಲ್ಲ! ಅಳಿಯ ಕಾಮರಾಯನು ಏನು ಹೇಳುತ್ತಾನೋ? ಆಗಲಿ, ನಿನ್ನ ಅಭಿಪ್ರಾಯವನ್ನು ಸಭೆಯಲ್ಲಿ ಪ್ರಸ್ತಾಪಿಸೋಣ.

ಅಬ್ಬಕ್ಕ : ಕಾಮರಾಯನು ಏನೇ ಹೇಳಲಿ, ರಾಜ್ಯದ ಪ್ರಥಮ ಪ್ರಜೆಯಾದ ನೀವು ಮತ್ತು ಪ್ರಧಾನಿಗಳು ನಿರ್ಧಾರಕ್ಕೆ ಬಂದರೆ ಬೇರೆ ಯಾರ ಮಾತುಗಳು ನಡೆಯಲಾರವು.

ಬಂಗರಸ : ಆಗಲಿ, ನಮ್ಮ ಕುಲದೇವರ ದಯೆಯಿಂದ ನಿನ್ನ ಆಸೆ ಈಡೇರಲಿ. ನಾಳೆಯೇ ಸಭೆ ಸೇರೋಣ.

### ದೃಶ್ಯ - 2 (ಅರಮನೆ)

(ಸಿಂಹಾಸನದಲ್ಲಿ ಲಕ್ಷ್ಮಪ್ಪ ಬಂಗರಸ ಮತ್ತು ಅಬ್ಬಕ್ಕ ಆಸೀನರಾಗಿರುವರು. ಸಭೆಯಲ್ಲಿ ಮಂತ್ರಿಗಳು, ಸೇನಾಧಿಪತಿ, ಸಂಧಿವಿಗ್ರಹಿ, ಕಾಮರಾಯ, ಮಾಗಣೆಗಳ ಪ್ರಮುಖರು ಮತ್ತು ಊರ ಮುಖ್ಯರು ನೆರೆದಿರುವರು)

ಮಂತ್ರಿ : ಪ್ರಣಾಮಗಳು ಮಹಾಪ್ರಭುಗಳೇ, ಇಷ್ಟೊಂದು ಅವಸರದಲ್ಲಿ ಸಭೆ ಕರೆಯಲು ಕಾರಣವಾದರೂ ಏನು? ಅಪ್ಪಣೆಯಾಗಬೇಕು.

ಬಂಗರಸ : ಒಂದು ಮುಖ್ಯ ವಿಚಾರದ ಬಗೆಗೆ ನಿಮ್ಮೆಲ್ಲರ ಅಭಿಪ್ರಾಯವನ್ನು ತಿಳಿಯಬೇಕಾಗಿದೆ. ನಮ್ಮ ಸಂಸ್ಥಾನದ ಹಿತದೃಷ್ಟಿಯಿಂದ ತೀರ್ಮಾನವೊಂದನ್ನು ಕೈಗೊಳ್ಳಲು ನಿಮ್ಮೆಲ್ಲರನ್ನು ಇಲ್ಲಿಗೆ ಬರಮಾಡಿಸಿಕೊಂಡಿದ್ದೇನೆ. ಇದುವರೆಗೆ ನಾವು ಪೋರ್ಚುಗೀಸರಿಗೆ ಕಪ್ಪವನ್ನು ನೀಡುತ್ತಾ ಬಂದಿದ್ದೇವೆ. ಅವರಿಗೆ ಕಪ್ಪವನ್ನು ನೀಡುವ ಬದಲು ಆ ಸಂಪತ್ತನ್ನು ನಮ್ಮ ರಾಜ್ಯದ ಅಭಿವೃದ್ಧಿಗಾಗಿ ವಿನಯೋಗಿಸಬಹುದಲ್ಲವೆ? ಈ ಬಗೆಗೆ ನಿಮ್ಮ ಅಭಿಪ್ರಾಯವೇನು?

ಮಂತ್ರಿ : ಪ್ರಭು, ಕಪ್ಪವನ್ನು ಕೊಡಬಾರದೆಂಬ ತಮ್ಮ ಯೋಚನೆ ಸರಿಯಾಗಿಯೇ ಇದೆ .

ಕಾಮರಾಯ : (ಗಡಸು ಧ್ವನಿಯಲ್ಲಿ) ರಾಜ್ಯದ ಪ್ರಜೆಗಳ ಸುಖ ಸಂತೋಷಗಳು ಹೆಚ್ಚಬೇಕೆಂದು ಬಯಸದವರು ಇಲ್ಲಿ ಯಾರೂ ಇಲ್ಲ. ಆದರೆ, ತಲೆ ಗಟ್ಟಿಯಾಗಿದೆ ಎಂದು ಬಂಡೆಗೆ ಅಪ್ಪಳಿಸಲಾದೀತೆ?

ಬಂಗರಸ : ನಿನ್ನ ಮಾತಿನ ವರಸೆ ಏನೆಂದು ಅರ್ಥವಾಗಲಿಲ್ಲ.

ಕಾಮರಾಯ: ಪೋರ್ಚುಗೀಸರಿಗೆ ಕಪ್ಪ ಕೊಡುವುದನ್ನು ನಿಲ್ಲಿಸುವ ನಿರ್ಧಾರ ಮಾಡುವ ಮೊದಲು ಅವರ ಶಕ್ತಿ ಸಾಮರ್ಥ್ಯಗಳ ಬಗೆಗೆ ತಿಳಿದಿರುವಿರೆ? ಪೋರ್ಚುಗೀಸರಂತಹ ಬಲಿಷ್ಠರನ್ನು ಎದುರು ಹಾಕಿಕೊಳ್ಳುವುದೆಂದರೆ ನಮ್ಮ ಗೋರಿಯನ್ನು ನಾವೇ ತೋಡಿಕೊಂಡಂತೆ ಆಗಲಾರದೆ?

ಅಬ್ಬಕ್ಕ : (ರೋಷಾವೇಶದಿಂದ ಎದ್ದುನಿಂತು) ಛೆ! ತುಳುನಾಡಿನ ಯುವರಾಜನ ಬಾಯಿಯಿಂದ ಇಂತಹ ಮಾತುಗಳೇ? ಅವರಿಗೆ ಕಪ್ಪವನ್ನು ಕೊಡುವುದೆಂದರೆ ನಾವು ಗುಲಾಮರೆಂಬುದನ್ನು ಒಪ್ಪಿಕೊಂಡಂತಾಗುವುದಿಲ್ಲವೇ?

ಕಾಮರಾಯ : ರಾಣಿಯವರು ಹಿಂದು ಮುಂದು ಯೋಚಿಸದೆ ಮಾತನಾಡುವಂತಿದೆ. ಹಿಂದೊಮ್ಮೆ ಉಳ್ಳಾಲದ ರಾಣಿಯಾಗಿದ್ದ ನಿಮ್ಮ ತಾಯಿ ಪೋರ್ಚುಗೀಸರ ವಿರೋಧವನ್ನು ಕಟ್ಟಿಕೊಂಡು ಪಟ್ಟಪಾಡು ನಿಮಗೆ ತಿಳಿದಿಲ್ಲವೇ ?

ಅಬ್ಬಕ್ಕ : (ಗಂಭೀರ ಧ್ವನಿಯಲ್ಲಿ) ತಿಳಿದಿದೆ. ಚೆನ್ನಾಗಿ ತಿಳಿದಿರುವುದರಿಂದಲೇ ಅವರನ್ನು ಇಲ್ಲಿಂದ ಅಟ್ಟಬೇಕೆಂಬ ನಿರ್ಧಾರಕ್ಕೆ ಬಂದಿದ್ದೇವೆ.

ಬಂಗರಸ : ರಾಣಿಯವರ ಮಾತು ಸಮಂಜಸವಾಗಿದೆ. ಪೋರ್ಚುಗೀಸರಿಗೆ ಕಪ್ಪ ಕಾಣಿಕೆಗಳನ್ನು ಕೊಟ್ಟು ತಲೆತಗ್ಗಿಸಲು ನನಗೂ ಮನಸ್ಸಿಲ್ಲ.

ಕಾಮರಾಯ : ರಾಜರು ರಾಣಿಯ ಮಾತಿಗೆ ಮರುಳಾಗಿ ಅಪಾಯವನ್ನು ಆಹ್ವಾನಿಸುತ್ತಿದ್ದಾರೆ. ಮಂತ್ರಿಗಳೇ, ಸೇನಾಪತಿಗಳೇ, ಮಾಗಣೆಗಳ ಪ್ರಮುಖರೇ... ರಾಜ್ಯದ ಹಿತದೃಷ್ಟಿಯಿಂದ ನಾವು ಒಂದು ನಿರ್ಧಾರಕ್ಕೆ ಬರಬೇಕಾಗಿದೆ. ಕಪ್ಪವನ್ನು ಕೊಡದೆ ಸಾಯಬೇಕೋ... ಕಪ್ಪವನ್ನು ಕೊಟ್ಟು ಸುಖವಾಗಿ ಬಾಳಬೇಕೋ... ನೀವೇ ನಿರ್ಧರಿಸಿ.

ಸೇನಾಪತಿ : ರಾಜ್ಯದ ಉಳಿವಿನ ದೃಷ್ಟಿಯಿಂದ ಯುವರಾಜರ ಸಲಹೆ ಸಮಂಜಸವೆಂದು ನನಗೂ ಅನ್ನಿಸುತ್ತಿದೆ.(ನೆರೆದವರೆಲ್ಲ ಹೌದು.......ಹೌದು....... ಎನ್ನುತ್ತಾರೆ.)

ಅಬ್ಬಕ್ಕ : (ಸಿಟ್ಟಿನಿಂದ) ಮಹಾರಾಜರೇ... ಪರಕೀಯರ ದಾಸ್ಯವನ್ನು ಸ್ವೀಕರಿಸಿದ ಈ ರಾಜ್ಯದಲ್ಲಿರಲು ತುಳು ನಾಡಿನ ಪುತ್ರಿಯಾದ ನನ್ನ ಮನಸ್ಸು ಒಪ್ಪುತ್ತಿಲ್ಲ. ಈ ರಾಜ್ಯಕ್ಕೆ ಕೇಡನ್ನು ಬಯಸುತ್ತಿರುವೆನೆಂದು ನೀವೆಲ್ಲ ಭಾವಿಸುವುದಾದರೆ ನಾನು ಇಲ್ಲಿರುವುದು ಉಚಿತವಲ್ಲ. ನನಗೆ ಉಳ್ಳಾಲಕ್ಕೆ ತೆರಳಲು ಅನುಮತಿ ನೀಡಿರಿ. (ರಾಣಿ ನಿರ್ಗಮಿಸುವಳು.. ಸಭೆಯಲ್ಲಿ ಮೌನ ಆವರಿಸಿವುದು. ರಂಗದಲ್ಲಿ ಬೆಳಕು ಕ್ಷೀಣಿಸುವುದು.)

(ಹಿನ್ನೆಲೆ ಧ್ವನಿ : ಕಾಮರಾಯನ ಪಿತೂರಿಯಿಂದ ರೋಸಿ ಹೋದ ಅಬ್ಬಕ್ಕ ಮಂಗಳೂರನ್ನು ಬಿಟ್ಟು ಉಳ್ಳಾಲಕ್ಕೆ ಹೋದಳು. ಪೋರ್ಚುಗೀಸರನ್ನು ನಾಡಿನಿಂದ ಹೇಗೆ ಓಡಿಸಬಹುದೆಂದು ಹಗಲೂ ರಾತ್ರಿ ಯೋಚಿಸತೊಡಗಿದಳು. ಉಳ್ಳಾಲದ ಕೋಟೆಯನ್ನು ಭದ್ರಪಡಿಸಿದಳು. ಪ್ರಜೆಗಳ ಕಷ್ಟ-ಸುಖಗಳಲ್ಲಿ ಬೆರೆತು ಅವರ ಮನಸ್ಸನ್ನು ಗೆದ್ದುಕೊಂಡಳು. ಬಲಿಷ್ಠರಾದ ತರುಣರನ್ನು ಒಗ್ಗೂಡಿಸಿ ಅವರಿಗೆ ಯುದ್ಧ ವಿದ್ಯೆಯ ತರಬೇತಿಯನ್ನು ಕೊಡಿಸಿದಳು. ದೂರ ದೇಶಗಳೊಡನೆ ವ್ಯಾಪಾರವನ್ನು ಹೆಚ್ಚಿಸಲು ದೊಡ್ಡ ದೊಡ್ಡ ಹಡಗುಗಳನ್ನು ಕಟ್ಟಿಸಿದಳು. ಕಲ್ಲಿಕೋಟೆಯ ಸಾಮೂದಿರಿ ರಾಜ್ಯದೊಂದಿಗೆ ಉತ್ತಮ ಸಂಬಂಧವನ್ನು ಇರಿಸಿಕೊಂಡಳು. ರಾಣಿಯ ಧೈರ್ಯ, ಉತ್ಸಾಹ, ಸ್ವಾತಂತ್ರ್ಯ ಪ್ರೇಮವನ್ನು ಕಂಡು ಉಳ್ಳಾಲದ ಪ್ರಜಾಜನರಲ್ಲಿ ನವ ಚೈತನ್ಯವುಂಟಾಯಿತು. ರಾಣಿ ಅಬ್ಬಕ್ಕ ಪೋರ್ಚುಗೀಸರಿಂದ ಉಂಟಾದ ಸಮಸ್ಯೆಯನ್ನು ಬಗೆಹರಿಸಲು ತನ್ನ ಪರಿವಾರದವರನ್ನು ಸೇರಿಸಿ ಸಭೆ ಕರೆದಳು. ಪೋರ್ಚುಗೀಸರನ್ನು

ಎದುರಿಸಲು ಎಲ್ಲ ಪ್ರಜೆಗಳೂ ಸಿದ್ಧರಾಗಿರುವ ವಿಷಯವನ್ನು ಮಾಗಣೆಯ ಪ್ರಮುಖರಿಂದ ತಿಳಿದುಕೊಂಡಳು. ಪೋರ್ಚುಗೀಸರು ಯಾವುದೇ ಸಂದರ್ಭದಲ್ಲಿ ತನ್ನನ್ನು ಕೆಣಕದೆ ಇರಲಾರರು ಎಂದು ಅವಳು ತೀರ್ಮಾನಿಸಿದ್ದಳು. ಆ ದಿನವನ್ನು ಅವಳು ಎದುರು ನೋಡುತ್ತಿದ್ದಳು.)

**ದೃಶ್ಯ – 3 (ಉಳ್ಳಾಲದ ಅರಮನೆ)**

(ರಾಣಿ ಅಬ್ಬಕ್ಕ ಸಿಂಹಾಸನದಲ್ಲಿ ಆಸೀನಳಾಗಿರುವಳು. ರಂಗದಲ್ಲಿ ಬೆಳಕು ಆವರಿಸುತ್ತಿದ್ದಂತೆ ಭಟನೋರ್ವನು ಓಡೋಡಿ ಬರುವನು)

ಭಟ : (ಏದುಸಿರು ಬಿಡುತ್ತಾ) ರಾಣಿಯವರಿಗೆ ಪ್ರಣಾಮಗಳು!

ಅಬ್ಬಕ್ಕ : ಅರಮನೆಯ ದ್ವಾರದಲ್ಲಿ ಕರ್ತವ್ಯನಿರತರಾಗಿದ್ದ ನೀವು ಏದುಸಿರು ಬಿಡುತ್ತಾ ಓಡೋಡಿ ಬರಲು ಕಾರಣವಾದರೂ ಏನು? ಏನಾದರೂ !............

ಭಟ : ಪೋರ್ಚುಗೀಸರ ರಾಯಭಾರಿಯೊಬ್ಬ ನಿಮ್ಮನ್ನು ತುರ್ತಾಗಿ ಕಾಣಬೇಕೆಂದು ಹೇಳುತ್ತಿರುವನು .

ಅಬ್ಬಕ್ಕ : ಅವನನ್ನು ಒಳಗೆ ಬರ ಹೇಳಿ........

ಭಟ : ಅಪ್ಪಣೆಯಂತಾಗಲಿ.. (ನಿರ್ಗಮಿಸುವನು )

(ರಾಯಭಾರಿ ಪ್ರವೇಶಿಸಿ)

ರಾಯಭಾರಿ : ಉಳ್ಳಾಲದ ರಾಣಿಗೆ ನಮಸ್ಕಾರ. ಗೋವೆಯಿಂದ ವೈಸರಾಯಿಯವರ ಸಂದೇಶದೊಂದಿಗೆ ಬಂದಿದ್ದೇನೆ. ನಿಮ್ಮಿಂದ ಬರಬೇಕಾಗಿದ್ದ ಕಪ್ಪ ಇನ್ನೂ ಸಂದಾಯವಾಗಿಲ್ಲವೆಂದು ನೆನಪಿಸಲು ನನ್ನನ್ನು ಕಳುಹಿಸಿದ್ದಾರೆ.

ಅಬ್ಬಕ್ಕ : ಕಪ್ಪ...ಕಪ್ಪ... ಕಪ್ಪ...ನಾವು ಸಂದಾಯ ಮಾಡಬೇಕಾದ ಕಪ್ಪವೇ? ಅದೂ ಪೋರ್ಚುಗೀಸರಿಗೆ.. ಹ್ಞ್.. .....

ರಾಯಭಾರಿ : ಹೌದು! ಕಪ್ಪದ ವಿಚಾರ ಮಾತ್ರವಲ್ಲ, ವಿದೇಶಗಳೊಂದಿಗೆ ನೀವು ನೇರವಾಗಿ ವ್ಯಾಪಾರ ನಡೆಸಿದರೆ ನಮ್ಮ ಹಗೆತನವನ್ನು ಕಟ್ಟಿಕೊಂಡಂತೆಯೇ...

ಅಬ್ಬಕ್ಕ : (ಸಿಟ್ಟಿನಿಂದ) ಏನು....? ಉಳ್ಳಾಲದಲ್ಲಿರುವವರೆಲ್ಲ ಕುರಿಗಳೆಂದು ಭಾವಿಸಿದಿರಾ? ನೀವು ಬಂದ ಉದ್ದೇಶವು ನಮ್ಮನ್ನು ಬೆದರಿಸುವುದಕ್ಕಾದರೆ ಇದು ಅದಕ್ಕೆ ಯೋಗ್ಯ ಸ್ಥಳವಲ್ಲ. ಉಳ್ಳಾಲವು ಯಾರ ಆಧೀನಕ್ಕೂ ಒಳಪಟ್ಟ ರಾಜ್ಯವಲ್ಲ. ನಮಗೆ ಆಜ್ಞಾಪಿಸಲು ಆ ನಿಮ್ಮ ಪೋರ್ಚುಗೀಸರಿಗೆ ಅಧಿಕಾರ ಕೊಟ್ಟವರು ಯಾರು? ಕಪ್ಪ ಕೊಡಬೇಕಂತೆ ಕಪ್ಪ ..ಹ್ಞ್.. ಅವರಿಗೆ ಕಪ್ಪಕೊಡುವ ಪ್ರಶ್ನೆಯೇ ಇಲ್ಲ.

ರಾಯಬಾರಿ : ನಿಮ್ಮ ಈ ದರ್ಪದ ಮಾತುಗಳಿಗೆ ನೀವು ಪಶ್ಚಾತ್ತಾಪ ಪಡಬೇಕಾದ ದಿನ ಬರಲು ಹೆಚ್ಚು ದೂರವಿಲ್ಲ ಎಚ್ಚರಿಕೆ! ನಾನಿನ್ನು ಬರುತ್ತೇನೆ. ( ನಿರ್ಗಮಿಸುವನು .ರಂಗದಲ್ಲಿ ಕತ್ತಲು ಆವರಿಸುವುದು.)

**ದೃಶ್ಯ - 4 (ಉಳ್ಳಾಲದ ಕಡಲ ತೀರ)**

(ಪೋರ್ಚುಗೀಸರ ಯುದ್ಧ ನೌಕೆಗಳು ಉಳ್ಳಾಲದ ಸಮುದ್ರ ತೀರಕ್ಕೆ ಮುನ್ನುಗುತ್ತಾ ಬರುತ್ತದೆ. ಹಿನ್ನೆಲೆಯಿಂದ ಅಬ್ಬಕ್ಕನ ಧ್ವನಿ ಕೇಳಿಸುತ್ತದೆ.)

ಅಬ್ಬಕ್ಕ : ಏನು?.... ಪೋರ್ಚುಗೀಸರು ಉಳ್ಳಾಲವನ್ನು ಆಕ್ರಮಿಸುತ್ತಿದ್ದಾರೆಯೆ ?ಅವರ ಯುದ್ಧ ನೌಕೆಗಳು ನಮ್ಮ ಕಡಲ ತೀರ ತಲುಪಿದವೆ?.. ಮಂತ್ರಿ ಸೇನಾಧಿಪತಿಗಳೇ.. ಬಂದಂತಹ ವಾರ್ತೆಯನ್ನು ಕೇಳಿದಿರಲ್ಲವೇ? ಇನ್ನು ತಡಮಾಡುವುದು ಸೂಕ್ತವಲ್ಲ ನಮ್ಮ ಪಡೆಗಳನ್ನು ದೋಣಿಗಳನ್ನು ಯುದ್ಧಕ್ಕೆ ಸಜ್ಜುಗೊಳಿಸಿರಿ. ಮೊಳಗಲಿ ರಣಭೇರಿ .....

(ಅಬ್ಬಕ್ಕಳು ಗಂಡುಡುಗೆಯನ್ನು ತೊಟ್ಟು ಆಯುಧಧಾರಿಯಾಗಿ ತನ್ನ ಪಡೆಯೊಂದಿಗೆ ಯುದ್ಧ ಸನ್ನದ್ಧಳಾಗಿ ಬರುತ್ತಾಳೆ.)



ಅಬ್ಬಕ್ಕ : ಅದೋ ಪೋರ್ಚುಗೀಸರ ಪಡೆ ಕಾಣುತ್ತಿದೆಯಲ್ಲವೇ? ಆಕ್ರಮಿಸಿ.........ನಿಮ್ಮ ಕೈಗಳಲ್ಲಿರುವ ಸಿಡಿಮದ್ದನ್ನಿರಿಸಿದ ಪಂಜುಗಳನ್ನು, ಸೂಟೆಗಳನ್ನು ಅವರ ಹಡಗುಗಳ ಮೇಲೆ ಎಸೆಯಿರಿ.

(ಪಂಜು,ಸೂಟೆಗಳನ್ನು ಎಸೆಯುವರು. ಕ್ಷಣಾರ್ಧದಲ್ಲಿ ಪೋರ್ಚುಗೀಸರ ಹಡಗುಗಳು ನುಚ್ಚುನೂರಾದವು... ಪೋರ್ಚುಗೀಸರ ಎದೆ ನಡುಗಿತು. ಹಡಗುಗಳು ಮುಳುಗಿದವು.)

ಅಬ್ಬಕ್ಕ : ಸೇನಾಧಿಪತಿಗಳೇ....... ನಮಗಿಂದು ವಿಜಯಲಕ್ಷ್ಮಿ ಒಲಿದಿದ್ದಾಳೆ. ಪೋರ್ಚುಗೀಸರ ಸೇನೆ ಹಿಮ್ಮೆಟ್ಟಿದೆ. ಜೀವಪಣಕ್ಕಿಟ್ಟು ಮಾತೃಭೂಮಿಯ ರಕ್ಷಣೆಗಾಗಿ ವೀರಾವೇಷದಿಂದ ಹೋರಾಡಿದ ನಮ್ಮ ಪಡೆಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಈ ಕೆಚ್ಚೆದೆಯ ಉತ್ಸಾಹ ಚಿರಂತನವಾಗಿರಲಿ

ಎಲ್ಲರೂ : ರಾಣಿ ಅಬ್ಬಕ್ಕದೇವಿಗೆ...... ಜಯವಾಗಲಿ....... ಉಳ್ಳಾಲದ ರಾಣಿಗೆ....... ಜಯವಾಗಲಿ.......

(ರಂಗದಲ್ಲಿ ಕತ್ತಲಾವರಿಸುವುದು... ತೆರೆ ಬೀಳುವುದು.)

- ಸಾಧಾರ

* * * * * * *

## ಚಟುವಟಿಕೆಗಳು

### ಉತ್ತರಿಸಿರಿ

1. ಪೋರ್ಚುಗೀಸರಿಗೆ ಕಪ್ಪ ಕೊಡುವ ವಿಚಾರದಲ್ಲಿ ಅಬ್ಬಕ್ಕರಾಣಿಯ ಅಭಿಪ್ರಾಯವೇನಾಗಿತ್ತು?
2. ತಲೆಗಟ್ಟಿಯಾಗಿದೆಯೆಂದು ಬಂಡೆಗೆ ಅಪ್ಪಳಿಸಲಾದೀತೇ? ಎಂದು ಕಾಮರಾಯನು ಹೇಳಲು ಕಾರಣವೇನು?
3. ಅಬ್ಬಕ್ಕ ರಾಣಿಯು ಉಳ್ಳಾಲದಲ್ಲಿ ತನ್ನ ಸೇನೆಯನ್ನು ಹೇಗೆ ಸಜ್ಜುಗೊಳಿಸಿದಳು?
4. ಗೋವೆಯಿಂದ ಬಂದ ಪೋರ್ಚುಗೀಸರ ರಾಯಭಾರಿಗೆ ರಾಣಿ ಅಬ್ಬಕ್ಕ ಕೊಟ್ಟ ಉತ್ತರವೇನು?
5. ಪೋರ್ಚುಗೀಸರ ಸೇನೆಯೊಂದಿಗೆ ರಾಣಿ ಅಬ್ಬಕ್ಕ ಮತ್ತು ಪಡೆಯವರು ಹೇಗೆ ಹೋರಾಡಿದರು?

### ಪಾತ್ರ ಚಿತ್ರಣ

"ಪರಕೀಯರ ದಾಸ್ಯವನ್ನು ಸ್ವೀಕರಿಸಿದ ಈ ರಾಜ್ಯದಲ್ಲಿರಲು ತುಳುನಾಡಿನ ಪುತ್ರಿಯಾದ ನನ್ನ ಮನಸ್ಸು ಒಪ್ಪುತ್ತಿಲ್ಲ. ನಾನು ಇನ್ನು ಇಲ್ಲಿರುವುದು ಉಚಿತವಲ್ಲ. ನನಗೆ ಉಳ್ಳಾಲಕ್ಕೆ ತೆರಳಲು ಅನುಮತಿ ನೀಡಿರಿ." ಈ ಹೇಳಿಕೆ ಮತ್ತು ಪಾಠ ಭಾಗದ ಆಧಾರದಲ್ಲಿ ರಾಣಿ ಅಬ್ಬಕ್ಕನ ಪಾತ್ರ ಚಿತ್ರಣ ಮಾಡಿರಿ.

### ಭಿತ್ತಿ ಪತ್ರ

ನಿಮ್ಮ ಶಾಲೆಯಲ್ಲಿ 'ರಾಣಿ ಅಬ್ಬಕ್ಕ' ನಾಟಕವನ್ನು ಪ್ರದರ್ಶನ ಮಾಡುವ ಸಲುವಾಗಿ ಅದರ ಪ್ರಚಾರಕ್ಕಾಗಿ ಒಂದು ಭಿತ್ತಿ ಪತ್ರವನ್ನು ತಯಾರಿಸಿರಿ.

## ನಾಟಕ ಅಭಿನಯ

'ರಾಣಿ ಅಬ್ಬಕ್ಕ' ಪಾಠ ಭಾಗವನ್ನು ನಾಟಕ ರೂಪದಲ್ಲಿ ಅಭಿನಯಿಸಿರಿ.

## ಪತ್ರಿಕಾ ವಾರ್ತೆ

ನಿಮ್ಮ ಶಾಲೆಯಲ್ಲಿ ಪ್ರದರ್ಶನಗೊಳ್ಳುವ 'ರಾಣಿ ಅಬ್ಬಕ್ಕ' ನಾಟಕದ ಪ್ರಚಾರಕ್ಕೆ ಪತ್ರಿಕೆಗೆ ನೀಡುವ ಸಲುವಾಗಿ ಒಂದು ವಾರ್ತೆಯನ್ನು ತಯಾರಿಸಿರಿ.

## ವ್ಯಕ್ತಿ ಪರಿಚಯ

ಪೋರ್ಚುಗೀಸರ ವಿರುದ್ಧ ಹೋರಾಡಿದ ಮಹಿಳಾ ಹೋರಾಟಗಾರ್ತಿಯಾದ ರಾಣಿ ಅಬ್ಬಕ್ಕನ ಕುರಿತು ಓದಿ ತಿಳಿದಿರುವಿರಿ.

ಅಂತೆಯೇ ಬ್ರಿಟಿಷರ ವಿರುದ್ಧ ಹೋರಾಡಿದ 'ವೀರರಾಣಿ ಕಿತ್ತೂರ ಚೆನ್ನಮ್ಮ' ನ ವ್ಯಕ್ತಿ ಪರಿಚಯ ಬರೆಯಿರಿ.

## ಲೇಖನ ಚಿಹ್ನೆ

ಕೆಳಗಿನ ವಾಕ್ಯಗಳಿಗೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಅಳವಡಿಸಿ ಬರೆಯಿರಿ.

ಸರಿಯಾಗಿಯೇ ಹೇಳಿದೆ ರಾಣಿ ಆದರೆ ಈ ವಿಷಯವನ್ನು ನಮ್ಮವರೆಲ್ಲ ಒಪ್ಪಬೇಕಲ್ಲ ಅಳಿಯ ಕಾಮರಾಯನು ಏನು ಹೇಳುತ್ತಾನೋ ಆಗಲಿ ನಿನ್ನ ಅಭಿಪ್ರಾಯವನ್ನು ಸಭೆಯಲ್ಲಿ ಪ್ರಸ್ತಾಪಿಸೋಣ

## ವಾಕ್ಯ ರಚನೆ

ಉದಾಹರಣೆ:

**ನಿರ್ಧಾರ :** ನಾನು ಈ ಬಾರಿಯ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯಬೇಕೆಂದು ನಿರ್ಧಾರ ಮಾಡಿದ್ದೇನೆ .

ಇದೇ ರೀತಿ ಕೆಳಗೆ ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತವಾಕ್ಯ ರಚಿಸಿರಿ.

ಉತ್ಸಾಹ, ಪಶ್ಚಾತ್ತಾಪ, ನವಚೈತನ್ಯ, ನುಚ್ಚುನೂರು

## ನಾಣ್ಣುಡಿಗಳು

ಒಂದು ನಾಡಿನಲ್ಲಿ ಪ್ರಸಿದ್ಧವಾದ ನುಡಿ ಅಥವಾ ಹೇಳಿಕೆಗಳನ್ನು ನಾಣ್ಣುಡಿಗಳು ಎನ್ನುವರು.

ಉದಾ :
- ನಮ್ಮ ಗೋರಿಯನ್ನು ನಾವೇ ತೋಡಿಕೊಂಡಂತೆ
- ತಲೆ ಗಟ್ಟಿಯಾಗಿದೆ ಎಂದು ಬಂಡೆಗೆ ಅಪ್ಪಳಿಸಲಾದೀತೇ?

ಇಂತಹ ನಾಣ್ಣುಡಿಗಳನ್ನು ಸಂಗ್ರಹಿಸಿ ಬರೆಯಿರಿ .

# ಬಣ್ಣವೇರಿತು ಪಾಲ್ಗಡಲು

ಪೆಣ್ಣ ಪೆತ್ತವರ ಬಳಗ ಬಳೆವುದು ಬೇಗ
ಪೆಣ್ಣ ಪೆತ್ತವರು ಪೆರ್ಚುವರು
ಪೆಣ್ಣ ಪೆತ್ತುದರಿಂದೆ ಪೆಸರೆನಿಸಿತು ಮಿಗೆ
ಬಣ್ಣವೇರಿತು ಪಾಲ್ಗಡಲು


ಪೆಣ್ಣಿಂದ ಪೆರ್ಮೆಗೊಂಡನು ಹಿಮವಂತನು
ಪೆಣ್ಣಿಂದ ಭೃಗು ಪೆರ್ಚಿದನು
ಪೆಣ್ಣಿಂದ ಜನಕರಾಯನು ಜಸವಡೆದನು
ಪೆಣ್ಣ ನಿಂದಿಸಲೇಕೆ ಪೆರರು

ಕುವರನಾದೊಡೆ ಬಂದ ಗುಣವೇನದರಿಂದ
ಕುವರಿಯಾದೊಡೆ ಕುಂದೇನು
ಇವರಿರ್ವರೊಳೇಳ್ಗೆವಡೆದವರಿಂದ
ಸವನಿಪುದಿಹಪರ ಸೌಖ್ಯ

ಕುಲಪುತ್ರನೋದಿ ತಿಳಿದು ನಡೆದಲ್ಲದೆ
ಕುಲವನುದ್ಧರಿಸಲರಿಯನು
ಕುಲಪುತ್ರಿಯೊಳ್ಗುವರನಿಗಿತ್ತ ಮಾತ್ರಕೆ
ಕುಲಕೋಟಿಯನುದ್ಧರಿಪಳು

ಪುಟ್ಟಿದ ಮನೆಯೊಳು ಪೋರಿ ಪುರುಳುಗೊಂಬ
ದಿಟ್ಟ ಗಂಡುಗಳಂತಿರಲಿ
ಕೊಟ್ಟುದರಿಂದ ತಣಿವ ಕುವರಿಗೆ ಮನ
ಮುಟ್ಟಿ ಕೊಡುವುದು ಕೋವಿದರು.

ಎನ್ನ ಪೆತ್ತವರಿವರೀ ಮನೆಯೊಡವೆಗ
ಳೆನ್ನವೆಂದೆರವಿಲ್ಲದಿರ್ಪ
ಕನ್ನೆಯನನ್ಯರಿಗೀವನ್ನೆವರಮುರೆ
ಮನ್ನಿಸುವುದು ಮಮತೆಯೊಳು



- ಸಂಚಿಯ ಹೊನ್ನಮ್ಮ

**ಕವಿ ಪರಿಚಯ**

ಸಂಚಿಹೊನ್ನಮ್ಮನ ಕಾಲ ಸುಮಾರು ಕ್ರಿ.ಶ. ೧೬೮೦. ಈಕೆ ಮೈಸೂರಿನ ಚಿಕ್ಕದೇವರಾಜ ಒಡೆಯರ ಅರಮನೆಯಲ್ಲಿ ಊಳಿಗದವಳಾಗಿದ್ದಳು. ಇವಳ ಹುಟ್ಟೂರು 'ಎಳಂದೂರು'. ಚಿಕ್ಕದೇವರಾಜ ಒಡೆಯರ ಪಟ್ಟದರಸಿ ದೇವರಾಜಮ್ಮಣ್ಣಿಯ ಆತ್ಮಸಖಿ. ಚಿಕ್ಕದೇವರಾಜ ಒಡೆಯರ 'ಸಂಚಿ'ಯ ಸೇವಕಿ. ಹೊನ್ನಮ್ಮನ ವಿದ್ಯಾಗುರು ಅಳಸಿಂಗರಾರ್ಯ, ಈಕೆಯು ಬರೆದ 'ಹದಿಬದೆಯ ಧರ್ಮ' ಕನ್ನಡ ಸಾಹಿತ್ಯದ ಒಂದು ಅನನ್ಯ ಸಾಂಗತ್ಯ ಕೃತಿ. ಆದುದರಿಂದಲೇ ಈಕೆಯನ್ನು ಚಿಕ್ಕದೇವರಾಜ ಒಡೆಯರು 'ಸರಸಸಾಹಿತ್ಯದ ವರದೇವತೆ' ಎಂದು ಬಣ್ಣಿಸಿದ್ದಾರೆ. ಈ ಸಾಂಗತ್ಯ ಕೃತಿಯಲ್ಲಿ ಸಂಚಿಯ ಹೊನ್ನಮ್ಮ ಹೆಣ್ಣಿನ ಮಹತ್ವ, ಗುಣ ಸ್ವಭಾವಗಳನ್ನು ಸರಳ ಸುಂದರವಾಗಿ ಚಿತ್ರಿಸಿದ್ದಾಳೆ. ಅಲ್ಲದೆ ಹೆಣ್ಣಿನ ಬಗ್ಗೆ ಅಂದಿನ ಸಮಾಜ ತಳೆದಿದ್ದ ಅಸಮಾನತೆಯನ್ನು ಖಂಡಿಸಿರುವುದು ಈ ಕೃತಿಯಲ್ಲಿ ಕಂಡುಬರುತ್ತದೆ.

ಪ್ರಸ್ತುತ 'ಬಣ್ಣವೇರಿತು ಪಾಲ್ಗಡಲು' ಕಾವ್ಯಭಾಗವನ್ನು 'ಹದಿಬದೆಯ ಧರ್ಮ' ಕೃತಿಯಿಂದ ಆರಿಸಿಕೊಳ್ಳಲಾಗಿದೆ.

## ಚಟುವಟಿಕೆಗಳು

### ಹಾಡಿರಿ

ಪದ್ಯವನ್ನು ರಾಗವಾಗಿ ಹಾಡಿರಿ.

### ಉತ್ತರಿಸಿರಿ

1. ಹೆಣ್ಣಿನಿಂದಾಗಿ ಕೀರ್ತಿ ಗೌರವಗಳನ್ನು ಪಡೆದವರು ಯಾರು?
2. ಇಹಪರದ ಸೌಖ್ಯ ಹೇಗೆ ಲಭಿಸುವುದು?
3. ಹೆಣ್ಣಿನಿಂದ ಕುಲ ಹೇಗೆ ಬೆಳೆಯುತ್ತದೆ?

### ಪದ ವಿಂಗಡಣೆ

ಕೆಳಗೆ ನೀಡಿರುವ ಪದಗಳನ್ನು ವಿಂಗಡಿಸಿ ಬರೆಯಿರಿ.

ಇವರಿರ್ವರೊಳೇಳ್ಗೆ - ಇವರು + ಇರ್ವರೊಳು + ಏಳ್ಗೆ

ಪೆಣ್ಣಿಂದೇತಕೆ -

ಕುವರಿಯಾದೊಡೆ -

ಕುಲವನುದ್ಧರಿಸಲರಿಯನು -

## ಆಶಯ ಬರವಣಿಗೆ

'ಬಣ್ಣವೇರಿತು ಪಾಲ್ಗಡಲು' ಈ ಪದ್ಯಭಾಗದ ಆಶಯವನ್ನು ಬರೆಯಿರಿ.

## ಸ್ವಾರಸ್ಯ ಬರವಣಿಗೆ

ಈ ಕೆಳಗಿನ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಪೆಣ್ಣಿಂದ ಪೆರ್ಮೆಗೊಂಡನು ಹಿಮವಂತನು
ಪೆಣ್ಣಿಂದ ಭೃಗು ಪೆರ್ಚಿದನು

## ಹೋಲಿಕೆಯ ಟಿಪ್ಪಣಿ

ಕೆಳಗಿನ ಎರಡು ಕಾವ್ಯ ಭಾಗಗಳನ್ನು ಹೋಲಿಸಿ ಹೋಲಿಕೆಯ ಟಿಪ್ಪಣಿ ಬರೆಯಿರಿ.

| | |
|---|---|
| ಕುವರನಾದೊಡೆ ಬಂದ ಗುಣವೇನದರಿಂದ<br>ಕುವರಿಯಾದೊಡೆ ಕುಂದೇನು<br>ಇವರಿರ್ವರೊಳೇಳ್ಗೆವಡೆದವರಿಂದ<br>ಸವನಿಪುದಿಹಪರಸೌಖ್ಯ | ಹೆಣ್ಣಿಂದಲೇ ಇಹವು, ಹೆಣ್ಣಿಂದಲೇ ಪರವು,<br>ಹೆಣ್ಣಿಂದಲೇ ಸಕಲ ಸಂಪದವು, ಹೆಣ್ಣೊಲ್ಲ<br>ದಣ್ಣಗಳು ಯಾರು ಸರ್ವಜ್ಞ \|\| |

## ಲಿಖಿತ ಭಾಷಣ

ಹೋಲಿಕೆಯ ಟಿಪ್ಪಣಿಗೆ ನೀಡಿದ ಪದ್ಯದ ಸಾಲುಗಳ ಹಿನ್ನೆಲೆಯಲ್ಲಿ ಹೆಣ್ಣು ಗಂಡುಗಳ ಸಮಾನತೆಯ ಮಹತ್ವವನ್ನು ವಿಶ್ಲೇಷಿಸಿ ಸ್ತ್ರೀ-ಪುರುಷರು ಸಮಾನರು ಎನ್ನುವ ವಿಚಾರವಾಗಿ ಶಾಲಾ ಕಲೋತ್ಸವದಲ್ಲಿ ಭಾಷಣ ಮಾಡಲು ಒಂದು ಲಿಖಿತ ಭಾಷಣವನ್ನು ತಯಾರಿಸಿರಿ.

## ಪ್ರಾಸ ಪದಗಳನ್ನು ಗುರುತಿಸಿರಿ

> ಪದ್ಯದ ಪ್ರತಿ ಪಾದಗಳ ಮೊದಲೆರಡು ಸ್ವರಗಳ ನಡುವೆ ಒಂದೇ ವ್ಯಂಜನವಿರುವುದನ್ನು ಆದಿಪ್ರಾಸ ಎನ್ನುತ್ತೇವೆ.

ಉದಾ: ಪೆಣ್ಣು - ಬಣ್ಣ.

ಇಂತಹ ಆದಿಪ್ರಾಸಗಳನ್ನು ಈ ಕಾವ್ಯ ಭಾಗದಿಂದ ಆರಿಸಿ ಬರೆಯಿರಿ.

# ಸಾವಿತ್ರಿಬಾಯಿ ಫುಲೆ



ಅದಿನ್ನೂ ಸ್ವಾತಂತ್ರ್ಯ ಚಳುವಳಿ ರೂಪುಗೊಳ್ಳದಿದ್ದ ಕಾಲ. ಗಾಂಧಿ, ಅಂಬೇಡ್ಕರರಂಥ ದೂರದೃಷ್ಟಿಯ ಜನನಾಯಕರು ಹುಟ್ಟಿರದಿದ್ದ ಕಾಲ, ಆಳುವವರ ನಿರಂತರ ಬದಲಾವಣೆಯಿಂದ ಕ್ಷೋಭೆಗೊಂಡ ಸಮಾಜ ಸ್ವವಿಮರ್ಶೆಯನ್ನು ಮರೆತಿತ್ತು. ವೃತ್ತಿಗೊಂದೊಂದು ಜಾತಿ ಸೃಷ್ಟಿಯಾಗಿ ಭಾರತೀಯ ಸಮಾಜ ನೂರಾರು ತುಂಡುಗಳಾಗಿ ಒಡೆದು ಪ್ರತಿಯೊಂದೂ ಮೇಲಾಟ, ಒತ್ತುವರಿ, ಪರಸ್ಪರ ಹಗೆತನ, ಶ್ರೇಷ್ಠತೆಯ ಪ್ರತಿಪಾದನೆಯಲ್ಲಿ ತೊಡಗಿದ್ದವು. ಜಾತಿವ್ಯವಸ್ಥೆ ಸೃಷ್ಟಿಸಿದವರು ಪರಮೋಚ್ಚ ಸ್ಥಾನದಲ್ಲಿ ಕುಳಿತು ಜ್ಞಾನ ಹಾಗೂ ಅಧಿಕಾರವೆಂಬ ಎರಡೂ ಸಂಪನ್ಮೂಲಗಳ ಮೇಲೆ ಏಕಾಧಿಪತ್ಯ ಸಾಧಿಸಿದ್ದರು. ಅಕ್ಷರಕಲಿಯಲು ತಾವು ಮಾತ್ರ ಅರ್ಹ ಎಂದರು. ಅವರ ಹೊರತು ಮತ್ತಾರಿಗೂ ಕಲಿಕೆಗೆ ಅವಕಾಶವಿರಲಿಲ್ಲ. ಒಂದುವೇಳೆ ಕಲಿತದ್ದೇ ಆದರೆ ಅದು ಉಲ್ಲಂಘನೆ ಎನಿಸಿಕೊಳ್ಳುತ್ತಿತ್ತು. ಅದಕ್ಕೆ ಕಠೋರ ದೈಹಿಕ ಶಿಕ್ಷೆಯಷ್ಟೇ ಅಲ್ಲ, ಸಾಮಾಜಿಕ ಬಹಿಷ್ಕಾರದಂತಹ ಕ್ರಮಗಳೂ ಜಾರಿಯಾಗುತ್ತಿದ್ದವು. ಆ ಕಾಲದ ಮಹಿಳೆಯರ ಶಿಕ್ಷಣದ ಕುರಿತು ಹೇಳುವಂತೆಯೆ ಇಲ್ಲ, "ಹೆಣ್ಣು ಅಕ್ಷರ ಕಲಿತರೆ ಎಲ್ಲರಿಗೂ ಪತ್ರ ಬರೆಯತೊಡಗುತ್ತಾಳೆ. ಆಗ ಅವಳ ಗಂಡ ತಿನ್ನುವ ಅನ್ನದ ಅಗುಳು ಹುಳವಾಗಿ ಅವನು ಕಾಯಿಲೆ ಹಿಡಿದು ಬೇಗ ತೀರಿಕೊಳ್ಳುತ್ತಾನೆ" ಎಂದು ಹೆದರಿಸುತ್ತಿದ್ದರು. ಹೆಣ್ಣು ಮಗು ತನ್ನ ಬಾಲ್ಯದ ಮುಗ್ಧತೆಯಲ್ಲಿ ಜಗತ್ತಿಗೆ ಕಣ್ಬಿಡುವ ಹೊತ್ತಿಗೆ ಅವಳ ಮದುವೆಯಾಗಿ, ಯಾರದೋ ಹೆಂಡತಿಯಾಗಿ, ಸೊಸೆಯಾಗಿ ಕೊನೆಗೆ ಅಮ್ಮನಾಗಿ ಬಿಟ್ಟಿರುತ್ತಿದ್ದಳು. ಕುಟುಂಬ ನಿರ್ವಹಣೆಗಾಗಿ, ಕುಟುಂಬ ನಿರ್ವಹಣೆಯಿಂದಲೇ ಅವಳ ವ್ಯಕ್ತಿತ್ವ ರೂಪುಗೊಂಡು ಬದುಕು ಅಲ್ಲೇ ಕಳೆದುಹೋಗುತ್ತಿತ್ತು. ಸಮಾಜದ ಕೆಳವರ್ಗದ ಮಹಿಳೆಯರಿಗೆ ವಿದ್ಯೆ ಎನ್ನುವುದು ಕನಸಿನಲ್ಲೂ ಮೂಡಲಾಗದ ಅಸ್ಪಷ್ಟ ಕಲ್ಪನೆಯಾಗಿಯೇ ಉಳಿದಿತ್ತು. ಲಿಂಗಸಮಾನತೆ ಎಂಬ ಪದ ಹೆಣ್ಣಿನ ಮನೋಕ್ಷಿತಿಜದಲ್ಲಿ ಎಂದೂ ಊಹಿಸಲಾರದ ಮೌಲ್ಯವಾಗಿತ್ತು.

ಇಂಥ ಸನ್ನಿವೇಶದಲ್ಲಿ ೧೮೩೧ ನೇ ಇಸವಿ ಮಹಾರಾಷ್ಟ್ರದ ಪುಣೆಯಿಂದ ೫೦ ಕಿ.ಮೀ . ದೂರವಿರುವ ಸತಾರಾ ಜಿಲ್ಲೆಯ ಹಳ್ಳಿ ನಾಯಗಾಂವಿನಲ್ಲಿ ಖಂಡೋಜಿ ನೆವಾಸೆಪಾಟೀಲರ ಹಿರಿಯ ಮಗಳಾಗಿ ಸಾವಿತ್ರಿ

ಹುಟ್ಟಿದಳು. ಸಾವಿತ್ರಿಬಾಯಿಗೆ ೯ ವರ್ಷವಾದಾಗ ಮದುವೆಯಾಯಿತು. ಅವಳಿಗಿಂತ ೪ ವರ್ಷಹಿರಿಯನಾದ ಫುಲೆಮನೆತನದ ಹುಡುಗ ಜೋತಿಬಾ ಅವಳ ಸಂಗಾತಿಯಾದ. ಅವಳು ಮದುವೆಯಾದ ಹುಡುಗ ಸಾಮಾನ್ಯ ವರನಾಗಿರಲಿಲ್ಲ. ಅವ ಇಂಗ್ಲಿಷ್ ಕಲಿತು ಅರಿವಿನ ಸ್ಫೋಟಕ್ಕೆ ಒಳಗಾಗಿದ್ದ ಹದಿಹರೆಯದ ಕನಸುಗಾರನಾಗಿದ್ದ. ಶಾಲೆ ಕಲಿಯದ ಜೀವನ ಸಂಗಾತಿಗೆ ತಾನೇ ಶಿಕ್ಷಕನಾಗಿ ಅಕ್ಷರ ಕಲಿಸಿದ. ಅತ್ತೆ ಸಗುಣಾಬಾಯಿಯ ಒತ್ತಾಸೆಯ ಮೇರೆಗೆ ಹೆಂಡತಿ ಸಾವಿತ್ರಿಯನ್ನು ಅಹ್ಮದ್‌ನಗರದ ಮಿಸ್ ಫರಾ ಫಾರ್ಮಲ್ ಸ್ಕೂಲಿಗೆ ಶಿಕ್ಷಕ ತರಬೇತಿ ಪಡೆಯಲೆಂದು ಕಳಿಸಿದನು. ಸಾವಿತ್ರಿ ಜೊತೆಗೆ ಫಾತಿಮಾಶೇಕ್ ಎಂಬಾಕೆಯೂ ಕಲಿತಳು. ಹೀಗೆ ಅನಕ್ಷರಸ್ಥ ವಧುವಾಗಿ ಫುಲೆ ಮನೆಗೆ ಕಾಲಿಟ್ಟ ೯ ವರ್ಷದ ಪುಟ್ಟ ಸಾವಿತ್ರಿ ೧೭ ವರ್ಷ ತುಂಬುವುದರಲ್ಲಿ ಇತರ ಹೆಣ್ಣುಮಕ್ಕಳಿಗೂ ಅಕ್ಷರ ಕಲಿಸುವ ಮಹದಾಸೆ ಹೊತ್ತು ಶಿಕ್ಷಕ ತರಬೇತಿ ಮುಗಿಸಿ ಭಾರತದ ಮೊತ್ತಮೊದಲ ಶಿಕ್ಷಕಿಯಾಗಿ ಹೊರಹೊಮ್ಮಿದಳು.

ಶಿಕ್ಷಕಿಯ ತರಬೇತಿ ಮುಗಿಸಿ ಸಾವಿತ್ರಿಬಾಯಿ ಬಂದ ಮೇಲೆ ಅವರ ಕುಟುಂಬ ಪುಣೆಯ ದಲಿತ ಕೇರಿಯಲ್ಲಿ ವಾಸವಾಯಿತು. ಒಂಬತ್ತು ವಿದ್ಯಾರ್ಥಿಗಳೊಂದಿಗೆ ೧೮೪೮ ರಲ್ಲಿ ಮೊದಲ ಶಾಲೆ ಪುಣೆಯ ಭಿಡೆವಾಡಿಯಲ್ಲಿ ಶುರುವಾಯಿತು. ಮುಂದೆ ಜೋತಿಬಾರೊಡನೆ ಸೇರಿ ಒಂದಾದ ಮೇಲೊಂದರಂತೆ ಸರಣಿ ಶಾಲೆಗಳನ್ನು ತೆರೆದರು. ೧೮೫೧ ರ ಜುಲೈಯಲ್ಲಿ ಪುಣೆಯ ಎರಡನೇ ಶಾಲೆ ಶುರುವಾಯಿತು. ಆ ಶಾಲೆಯಲ್ಲಿ ೪ ಶಿಕ್ಷಕರು ಹಾಗೂ ೪೮ ವಿದ್ಯಾರ್ಥಿನಿಯರಿದ್ದರು. ಅದೇ ವರ್ಷ ನವೆಂಬರಿನಲ್ಲಿ ಇನ್ನೊಂದು ಶಾಲೆ ಶುರುವಾಯಿತು. ಅದರಲ್ಲಿ ೩ ಶಿಕ್ಷಕರು ಹಾಗೂ ೫೧ ವಿದ್ಯಾರ್ಥಿನಿಯರಿದ್ದರು. ೧೮೫೨ ರ ಮಾರ್ಚ್‌ನಲ್ಲಿ ಒಬ್ಬರು ಶಿಕ್ಷಕರು ಹಾಗೂ ೩೩ ವಿದ್ಯಾರ್ಥಿನಿಯರೊಡನೆ ಮತ್ತೊಂದು ಶಾಲೆ ಶುರುವಾಯಿತು. ಸಾವಿತ್ರಿಬಾಯಿ ಮುಖ್ಯಶಿಕ್ಷಕಿಯಾಗಿದ್ದರು. ಶಾಲೆಗೆ ಬರುವ ಮಕ್ಕಳ ಕಲಿಕೆಗೆ ಅವಶ್ಯವಾದ ಬೋಧನ ಸಾಮಗ್ರಿಯಿಂದ ಹಿಡಿದು ಎಲ್ಲದರ ಮೇಲುಸ್ತುವಾರಿ ವಹಿಸಿಕೊಂಡರು. ಧಾರ್ಮಿಕ - ಅಧ್ಯಾತ್ಮಿಕ ವ್ಯಕ್ತಿಯಾಗಿದ್ದ ಸಾವಿತ್ರಿ ತಾನು ಮಾಡುತ್ತಿರುವ ಕೆಲಸವನ್ನು ವ್ರತವೆಂದೇ ಬಗೆದು ಅಚಲ ಶ್ರದ್ಧೆಯಿಂದ ದಣಿವರಿಯದೆ ದುಡಿದರು. ಆದರೆ ಹೆಣ್ಣು ಮಕ್ಕಳಿಗೆ ಮನೆಗೆಲಸ, ವ್ರತಕತೆ, ಹಾಡುಹಸೆ, ಪುರಾಣಪಠಣಗಳನ್ನು ಹೇಳಿಕೊಡುವುದು ಬಿಟ್ಟು, ವಿಚಾರಗಳ ಕಿಡಿಹೊತ್ತಿಸುವುದು, ಸಂಪ್ರದಾಯವಾದಿಗಳಿಗೆ ಸುತರಾಂ ಇಷ್ಟವಾಗಲಿಲ್ಲ. ಅವರು ಸಾವಿತ್ರಿಗೆ ನಾನಾ ತೆರದ ಹಿಂಸೆ ಕೊಡಲು ಶುರುಮಾಡಿದರು. ಶಾಲೆಗೆ ಹೋಗುವಾಗ ಪ್ರತಿದಿನ ಹಿಂದಿನಿಂದ ಅವಾಚ್ಯ ಶಬ್ದಗಳಲ್ಲಿ ನಿಂದಿಸುತ್ತಿದ್ದರು. ಅವಮಾನಕರವಾಗಿ ಕೂಗುತ್ತಿದ್ದರು. ದಾರಿಯಲ್ಲಿ ನಡೆದು ಬರುವಾಗ ಕಲ್ಲು, ಮಣ್ಣು, ಸೆಗಣಿ ಉಂಡೆಗಳು ತೂರಿಬರುತ್ತಿದ್ದವು. ಸಹನೆಯಿಂದ ಅವರ ಪೀಡನೆಗಳನ್ನೆಲ್ಲ ಸಹಿಸಿದ ಸಾವಿತ್ರಿ ಎದೆಗುಂದದೇ ಪಾಠಹೇಳಿದರು. ಒಂದು ಹಳೆಯ ಸೀರೆ ಉಟ್ಟು ಮತ್ತೊಂದು ಸೀರೆ ಒಯ್ಯುತ್ತಿದ್ದ ಆಕೆ ಶಾಲೆಗೆ ಹೋದ ನಂತರ ಸೀರೆ ಬದಲಿಸಿ ಕೆಲಸಮಾಡುತ್ತಿದ್ದರು. ಮೂದಲಿಕೆಯ ಮಾತು ಕೇಳಿಬಂದರೂ, 'ನಮ್ಮ ಅಂತಸ್ಸಾಕ್ಷಿಗೆ ಹಾಗೂ ದೇವರ ಇಚ್ಛೆಗೆ

ಅನುಗುಣವಾಗಿ ನಡೆದುಕೊಂಡಿದ್ದೇವೆ" ಎಂದು ಉತ್ತರಿಸುತ್ತಿದ್ದರು. ಜೋತಿಬಾ ಕುಟುಂಬ ನಿರ್ವಹಣೆಗಾಗಿ ಮಿಷನರಿ ಶಾಲೆಗಳಲ್ಲಿ ಅರೆಕಾಲಿಕ ಶಿಕ್ಷಕರಾಗಿ ಬೋಧಿಸುತ್ತಿದ್ದರೆ ಸಾವಿತ್ರಿಬಾಯಿ ಯಾವ ಸಂಬಳವೂ ಇಲ್ಲದೆ ಶಾಲೆಗಳಲ್ಲಿ ಉಚಿತವಾಗಿ ದುಡಿದರು.

ಶಿಕ್ಷಣ-ಸಂಘಟನೆ-ಹೋರಾಟ ಈ ಮೂರೂ ಶೋಷಿತರ ವಿಮೋಚನೆಯ ದಾರಿಗಳು. ಈ ಮೂರನ್ನೂ ಸಾವಿತ್ರಿ ಆಚರಣೆಯಲ್ಲಿ ತಂದು ತೋರಿಸಿದ್ದರು. ಮಹಿಳಾ ಶಿಕ್ಷಣ ಎನ್ನುವುದು ದೂರದ ಕನಸೇ ಆಗಿದ್ದ ಹೊತ್ತಿನಲ್ಲಿ, ಬಾಲ್ಯವಿವಾಹ ಉತ್ತುಂಗದಲ್ಲಿದ್ದ ಕಾಲದಲ್ಲಿ, ಹುಡುಗಿಯರಿಗಾಗಿಯೇ ಶಾಲೆ ನಡೆಸುವ ಮೂಲಕ ಸಮಾನತೆಯತ್ತ ಒಂದು ಹೆಜ್ಜೆಯಿಡುವುದನ್ನು ಹುಡುಗಿಯರಿಗೆ ಸಾವಿತ್ರಿಬಾಯಿ ಕಲಿಸಿದರು. ಅದರ ನಡುವೆಯೇ ೧೮೫೨ ರಲ್ಲಿ ಮಹಿಳಾ ಸಂಘಟನೆ 'ಮಹಿಳಾ ಸೇವಾ ಮಂಡಲ' ಶುರುವಾಯಿತು. ೧೮೫೨ ರಲ್ಲಿ ಶಿಕ್ಷಣ ಇಲಾಖೆಯು ಮಾದರಿ ಶಿಕ್ಷಕಿ ಎಂದು ಸಾವಿತ್ರಿಬಾಯಿಯವರನ್ನು ಸನ್ಮಾನಿಸಿತು.

ಆಗಲೂ ಸಹ ಈಗಿನ ಹಾಗೆ ಶಾಲೆಯನ್ನು ಅರ್ಧಕ್ಕೇ ಬಿಟ್ಟು ಹೋಗುವವರು ಇದ್ದರು. ಅರ್ಧಕ್ಕೆ ಶಾಲೆ ನಿಲ್ಲಿಸುವುದನ್ನು ತಡೆಯಲು ವಿದ್ಯಾರ್ಥಿಗಳಿಗೆ ಭತ್ಯೆಕೊಡುವುದು, ಪಾಠ ಅರ್ಥವಾಗುವಂತೆ ಅವರ ಭಾಷೆಯಲ್ಲಿ ಮಾಡುವುದು, ಸುಲಭದಲ್ಲಿ ನೆನಪಿಡುವ ವಿಧಾನ ಹೇಳಿಕೊಡುವುದು, ಮಕ್ಕಳ ತಾಯ್ತಂದೆಯರಿಗೆ ಶಿಕ್ಷಣದ ಪ್ರಾಮುಖ್ಯತೆ ಕುರಿತು ಹೇಳುವುದು, ಪಾಲಕರಿಗೂ ಅಕ್ಷರ ಕಲಿಸುವುದು ಮುಂತಾದ ಮಾರ್ಗಗಳನ್ನು ಸಾವಿತ್ರಿ ಅನುಸರಿಸಿದರು. ಹೀಗೆ ಫುಲೆದಂಪತಿಗಳು ಒಂದಾದ ಮೇಲೊಂದು ಶಾಲೆ ತೆರೆದು ತಳಸಮುದಾಯದ ಮಕ್ಕಳಿಗೆ, ಎಲ್ಲ ಹೆಣ್ಮಕ್ಕಳಿಗೆ ವಿದ್ಯಾದಾನ ಮಾಡತೊಡಗಿದರು. ಸಮಾಜದ ಕೆಳವರ್ಗದ ಮಹಿಳೆಯರಿಗೆ ಅಕ್ಷರ ಕಲಿಸಿ ಧರ್ಮದೋಷ ಮಾಡುತ್ತಿದ್ದಾರೆ ಎಂಬ ಆಪಾದನೆಗಳು ಬಂದವು. ಬೆದರಿಕೆಗಳೂ ಬಂದವು. ಅದೆಲ್ಲದರಿಂದ ಒತ್ತಡಕ್ಕೊಳಗಾದ ಜೋತಿಬಾರ ತಂದೆ ಮಗ ಸೊಸೆಯನ್ನು ಮನೆಯಿಂದ ಹೊರಕಳಿಸಿದರು.

ಬೋಧಿಸುವವರು ಎಷ್ಟು ಯಶಸ್ವಿ ಎಂದು ತಿಳಿಯಬೇಕಾದರೆ ಅವರ ಶಿಷ್ಯ ಗಣವನ್ನು ನೋಡಬೇಕಲ್ಲವೇ? ಫುಲೆ ಶಾಲೆಯಲ್ಲಿ ಕಲಿತ ಹೆಣ್ಣುಮಕ್ಕಳು ವೈಚಾರಿಕ ಜಾಗೃತಿ ಪಡೆದರು. ಅವರ ಶಾಲೆಯಲ್ಲಿ ಕಲಿಯುತ್ತಿದ್ದ ಹದಿನಾಲ್ಕು ವರ್ಷದ ಮುಕ್ತಾಬಾಯಿ ಹಾಗೂ ಅವರ ಸಮಕಾಲೀನಳಾದ ತಾರಾಬಾಯಿ ಶಿಂಧೆಯವರು ಜಾತಿ ವ್ಯವಸ್ಥೆಯನ್ನು ಪ್ರಶ್ನಿಸಿದರು. ಅದರೊಳಗಿರುವ ಪಿತೃಪ್ರಾಧಾನ್ಯವನ್ನು ಅದರ ಹೆಸರೇ ಎತ್ತದೆ ಬಯಲಿಗೆಳೆದರು. ಮುಕ್ತಾಬಾಯಿ ಬರೆದ ಪ್ರಬಂಧವು ತಳ ಸಮುದಾಯಗಳು ಆ ಕಾಲದಲ್ಲಿ ಎದುರಿಸುತ್ತಿದ್ದ ಸಂಕಟಗಳು ಹಾಗೂ ಆಕ್ರೋಶ ಹೇಗಿತ್ತೆಂದು ತಿಳಿಸುತ್ತದೆ. ಜೊತೆಗೆ ನಾವಿದ್ದ ಶಾಲೆಗಳಲ್ಲಿ ಹುಡುಗಿಯರು ಪಡೆಯುತ್ತಿದ್ದ ಮುಕ್ತ ತಿಳುವಳಿಕೆ ಮತ್ತು ಶಿಕ್ಷಣದ ಗುಣಮಟ್ಟ ಸೂಚಿಸುತ್ತದೆ.

ಅದುವರೆಗೂ ಅಸ್ಪೃಶ್ಯ ಸಮುದಾಯದ ಜನ ಬಾಯಾರಿದರೂ ನೀರನ್ನು ತಾವೇ ಕೆರೆ, ಬಾವಿ, ನದಿಗಳಿಂದ ತೆಗೆದುಕೊಳ್ಳುವಂತಿರಲಿಲ್ಲ. ಫುಲೆ ದಂಪತಿಗಳು ೧೮೬೮ ರಲ್ಲಿ ಎಲ್ಲರಿಗೂ ಬಳಕೆಗೆ ಮುಕ್ತವಾದ ನೀರಿನ ತೊಟ್ಟಿ ಕಟ್ಟಿದರು. ಜಾತಿ ತಾರತಮ್ಯ ಮತ್ತು ಶೋಷಣೆಯನ್ನು ಕೊನೆಗೊಳಿಸಬೇಕೆಂದರೆ ಚಿಂತನಶೀಲತೆಯನ್ನು, ಸತ್ಯ

ತಿಳಿಯಬೇಕೆಂಬ ಹಂಬಲವನ್ನು ಜನರಲ್ಲಿ ಬಿತ್ತಬೇಕೆಂಬ ಮಹದಾಸೆಯಿಂದ ೧೮೭೩ ರಲ್ಲಿ 'ಸತ್ಯಶೋಧಕ ಸಮಾಜ' ಕಟ್ಟಿದರು. ಅದರ ಮೂಲತತ್ವ 'ನಾವೆಲ್ಲರೂ ದೇವರ ಮಕ್ಕಳು; ದೇವರಿಗೂ ನಮಗೂ ಯಾವ ಮಧ್ಯವರ್ತಿಯ ಅವಶ್ಯಕತೆಯೂ ಇಲ್ಲ' ಎನ್ನುವುದು. ಅವರು ಅದೇ ವರ್ಷ ಪುರೋಹಿತರಿಲ್ಲದೆ ಮೊದಲ ಮದುವೆ ಮಾಡಿಸಿದರು. ೧೮೭೪ ರಲ್ಲಿ ಬ್ರಾಹ್ಮಣ ವಿಧವೆ ಕಾಶೀಬಾಯಿಯ ಮಗ ಯಶವಂತನನ್ನು ದತ್ತು ತೆಗೆದುಕೊಂಡು ಸಾಕಿದರು. ಮುಂದೆ ಆತ ಓದಿ ವೈದ್ಯನಾದ. ೧೮೭೦ ರಲ್ಲಿ ಭೀಕರ ಕ್ಷಾಮ ತಲೆದೋರಿತು. ಆಗ ಕ್ಷಾಮ ಪರಿಹಾರ ಕೇಂದ್ರಗಳನ್ನು ಸ್ಥಾಪಿಸುವಲ್ಲಿ, ಅದಕ್ಕೆ ತಕ್ಕಷ್ಟು ದವಸಧಾನ್ಯ ಪಡೆಯುವಲ್ಲಿ ಹಾಗೂ ಎಲ್ಲೆಲ್ಲಿ ಪರಿಹಾರ ಕೇಂದ್ರ ಸ್ಥಾಪಿಸಬೇಕೆಂದು ಗುರುತಿಸುವಲ್ಲಿ ಸಾವಿತ್ರಿಬಾಯಿ ಮಹತ್ವದ ಪಾತ್ರ ವಹಿಸಿದರು. ಪರಿಹಾರ ಕೇಂದ್ರಗಳು ಶುರುವಾದಾಗ ಅಲ್ಲಿಯೂ ಮಕ್ಕಳಿಗಾಗಿ ಶಾಲೆಗಳನ್ನು ನಡೆಸಿದರು. ಕ್ಷಾಮದಲ್ಲಿ ಅನಾಥರಾದ ಮಕ್ಕಳಿಗೆ ೫೨ ವಸತಿ ಶಾಲೆ ತೆರೆಯುವಲ್ಲಿ ಮಹತ್ವದ ಪಾತ್ರವಹಿಸಿದರು. ೧೮೭೭ ರಲ್ಲಿ ಕ್ಷಾಮಪರಿಹಾರವಾಗಿ 'ವಿಕ್ಟೋರಿಯಾ ಬಾಲಾಶ್ರಮ' ಶುರುಮಾಡಲಾಯಿತು.

ಹೀಗೆ ವಿದ್ಯೆಯನ್ನು ಧಾರೆಯೆರೆಯುವುದೇ ತಮ್ಮ ಕಾಯಕವೆಂದುಕೊಂಡ ಫುಲೆ ದಂಪತಿಗಳು ಸಮಾಜದ ಕೆಳವರ್ಗದವರಿಗೆ ಶಾಲೆಗಳನ್ನು ತೆರೆದು, ಅಶಿಕ್ಷಿತ ಜನರಿಗೆ ಶಿಕ್ಷಣದ ಮಹತ್ವ ತಿಳಿಸಿ ಹೇಳಿ, ವಿದ್ಯಾಜ್ಯೋತಿಗಳಾಗಿ ಬೆಳಕಿನ ಹೊಸಯುಗಕ್ಕೆ ನಾಂದಿಹಾಡಿದರು.

**- ಡಾ. ಎಚ್.ಎಸ್. ಅನುಪಮ**

### ಲೇಖಕರ ಪರಿಚಯ



ಸಾಹಿತ್ಯಕ ಮತ್ತು ಸಾಂಸ್ಕೃತಿಕ ವೇದಿಕೆ 'ಮಂಥನ'ದ ಸಂಚಾಲಕರಾದ ಡಾ. ಎಚ್.ಎಸ್. ಅನುಪಮ ವೃತ್ತಿಯಲ್ಲಿ ವೈದ್ಯರು. ಇವರ ಹುಟ್ಟೂರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಹೆಬ್ಬಾಗಿಲು. ಜನಿಸಿದ್ದು ೬.೨.೧೯೭೦ ರಲ್ಲಿ. 'ಕಾಡುಹಕ್ಕಿಯ ಹಾಡು' ಮತ್ತು 'ಸಹಗಮನ' (ಕವನ ಸಂಕಲನ), 'ಹೂವರಳಿದ್ದಕ್ಕೆ ಯಾಕೆ ಸಾಕ್ಷಿ?' (ಕಥಾ ಸಂಕಲನ), 'ಜೀವಕೋಶ', 'ವೈದ್ಯಲೋಕದ ಕಥನ' (ಚಿಂತನ ಬರಹ), 'ನೈಲ್ ನದಿಯಗುಂಟ ಶರಾವತಿಯನರಸುತ್ತ' ಮತ್ತು 'ಅಂಡಮಾನ್: ಕಂಡ ಹಾಗೆ' (ಪ್ರವಾಸ ಕಥನ), 'ಛತ್ರಪತಿ ಶಾಹೂ: ಜನರ ನೋವಿಗೆ ಮಿಡಿದ ಪ್ರಾಣಮಿತ್ರ' ಮತ್ತು 'ಕ್ರಾಂತಿಜ್ಯೋತಿ ಸಾವಿತ್ರಿಬಾಯಿ ಫುಲೆ' (ಜೀವನ ಚರಿತ್ರೆ)- ಇವು ಪ್ರಮುಖ ಕೃತಿಗಳು. ಇವರ 'ನೋಯುವ ಹಲ್ಲಿಗೆ ಹೊರಳುವ ನಾಲಿಗೆ' ಎಂಬ ಅಂಕಣ ಬರಹ ಜನಪ್ರಿಯವಾಗಿದೆ. ಇವರು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಪ್ರಸ್ತುತ ಗದ್ಯಭಾಗವನ್ನು ಡಾ. ಎಚ್.ಎಸ್. ಅನುಪಮ ಅವರ 'ಕ್ರಾಂತಿಜ್ಯೋತಿ ಸಾವಿತ್ರಿಬಾಯಿ ಫುಲೆ' ಎಂಬ ಜೀವನ ಚರಿತ್ರೆಯಿಂದ ಆರಿಸಿಕೊಳ್ಳಲಾಗಿದೆ.

## ಚಟುವಟಿಕೆಗಳು

### ಉತ್ತರಿಸಿರಿ

1. ಸ್ವಾತಂತ್ರ್ಯ ಚಳುವಳಿ ರೂಪುಗೊಳ್ಳುತ್ತಿದ್ದ ಕಾಲದಲ್ಲಿ ಹೆಣ್ಣು ಶಿಕ್ಷಣದಿಂದ ವಂಚಿತಳಾಗಿದ್ದಳು ಎಂದು ಹೇಗೆ ತಿಳಿದು ಬರುತ್ತದೆ?
2. ಸಾವಿತ್ರಿಬಾಯಿ ಫುಲೆ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಲು ಮುಂದಾದಾಗ ಇದಿರಿಸಿದ ಸವಾಲುಗಳೇನು?
3. ಸಾವಿತ್ರಿಬಾಯಿ ಫುಲೆ ಓರ್ವ ಸಮಾಜ ಸುಧಾರಕಿ ಎಂದು ಹೇಗೆ ಸಮರ್ಥಿಸಬಹುದು?

### ಅಭಿಪ್ರಾಯ ಟಿಪ್ಪಣಿ

'ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು' ಈ ವಿಷಯದ ಕುರಿತು ಪಾಠದ ಆಧಾರದಲ್ಲಿ ಅಭಿಪ್ರಾಯ ಟಿಪ್ಪಣಿ ಬರೆಯಿರಿ.

### ಸಂದರ್ಶನ ವರದಿ

ಶೋಷಣೆಯನ್ನು ಮೆಟ್ಟಿ ನಿಂತು ಛಲದಿಂದ ಬದುಕು ಕಟ್ಟಿಕೊಂಡ ಸಾಧಕಿಯರು ನಿಮ್ಮ ಊರಿನಲ್ಲಿಯೂ ಇರಬಹುದು. ಇಂಥ ಸಾಧಕಿಯನ್ನು ಸಂದರ್ಶಿಸಲು ಸಂದರ್ಶನ ಪ್ರಶ್ನೆಗಳನ್ನು ತಯಾರಿಸಿ ಸಂದರ್ಶನ ವರದಿಯನ್ನು ಬರೆಯಿರಿ.

### ಅಭಿನಂದನ ಪತ್ರ ತಯಾರಿ

ಭಾರತದ ಉನ್ನತ ನಾಗರಿಕ ಪ್ರಶಸ್ತಿಗಳಾದ ಭಾರತರತ್ನ, ಪದ್ಮಭೂಷಣ, ಪದ್ಮಶ್ರೀ ಮುಂತಾದ ಪ್ರಶಸ್ತಿ ಪಡೆದ ಮಹಿಳಾ ಸಾಧಕಿಯರನ್ನು ಅಭಿನಂದಿಸಲು ಅಭಿನಂದನ ಪತ್ರ ತಯಾರಿಸಿರಿ.

### ವಿಚಾರಗೋಷ್ಠಿ ಪ್ರಬಂಧ

"ಶಿಕ್ಷಣ – ಸಂಘಟನೆ - ಹೋರಾಟ ಈ ಮೂರು ಶೋಷಿತರ ವಿಮೋಚನೆಯ ದಾರಿಗಳು"

➢ ಸಾವಿತ್ರಿ ಬಾಯಿ ಫುಲೆ ಪಾಠಭಾಗದ ಆಧಾರದಲ್ಲಿ ಈ ಮೇಲಿನ ವಿಷಯದ ಕುರಿತಾಗಿ ತರಗತಿಯಲ್ಲಿ ನಡೆಯುವ ವಿಚಾರಗೋಷ್ಠಿಯಲ್ಲಿ ಮಂಡಿಸಲು ಒಂದು ಪ್ರಬಂಧವನ್ನು ಬರೆಯಿರಿ.

## ಆತ್ಮಕಥೆಯಾಗಿ ಬರೆಯಿರಿ

ಕೆಳಗಿನ ಜೀವನ ಚರಿತ್ರೆಯ ಭಾಗವನ್ನು ಓದಿ ಅದನ್ನು ಆತ್ಮಕಥೆಯ ರೂಪದಲ್ಲಿ ಬರೆಯಿರಿ.

# ಕಮಲಾದೇವಿ ಚಟ್ಟೋಪಾಧ್ಯಾಯ

ಕಮಲಾದೇವಿ ಚಟ್ಟೋಪಾಧ್ಯಾಯರು ೧೯೦೩ ರಲ್ಲಿ ಮಂಗಳೂರಿನಲ್ಲಿ ಜನಿಸಿದರು. ತಂದೆ ಅನಂತಯ್ಯ ಧಾರೇಶ್ವರ, ತಾಯಿ ಗಿರಿಜಾಬಾಯಿ. ೧೪ ನೇ ವಯಸ್ಸಿಗೆ ಹೆತ್ತವರು ಅವರ ವಿವಾಹವನ್ನು ಮಾಡಿದರು. ಅವರು ಮದುವೆಯಾದ ಒಂದೇ ವರ್ಷಕ್ಕೆ ಪತಿಯನ್ನು ಕಳೆದುಕೊಂಡರು. ಮುಂದೆ ತಾಯಿಯ ಸಹಕಾರದಿಂದ ಮದ್ರಾಸಿನಲ್ಲಿ ಶಿಕ್ಷಣ ಮುಂದುವರಿಸಿ ಸರೋಜಿನಿ ನಾಯ್ಡು ಅವರ ಸಮೀಪದ ಸಂಬಂಧಿ ಹರೇಂದ್ರನಾಥ್ ಚಟ್ಟೋಪಾಧ್ಯಾಯ ಅವರನ್ನು ವಿವಾಹವಾಗಿ ಕಮಲಾದೇವಿ ಚಟ್ಟೋಪಾಧ್ಯಾಯರಾದರು. ಮಹಾತ್ಮಾ ಗಾಂಧೀಜಿಯವರ ಜೊತೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ನಾಲ್ಕು ಬಾರಿ ಜೈಲುವಾಸವನ್ನು ಅನುಭವಿಸಿದರು. ಸಮಾಜ ಸೇವಕಿಯಾಗಿಯೂ ದುಡಿದು ಜನರ ಸಂಕಷ್ಟಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಅವಿಶ್ರಾಂತವಾಗಿ ದುಡಿದರು. ಅವರು ದೇಶದ ಅತ್ಯುನ್ನತ ಪ್ರಶಸ್ತಿಗಳಾದ ಪದ್ಮವಿಭೂಷಣ, ಪದ್ಮಭೂಷಣ, ಮ್ಯಾಗ್ಸೆಸೆ ಮೊದಲಾದ ಪ್ರಶಸ್ತಿಗಳನ್ನು ಪಡೆದಿದ್ದಾರೆ,

## ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿರಿ

ಈ ಕೆಳಗಿನ ವಾಕ್ಯಗಳನ್ನು ಗಮನಿಸಿರಿ.

ಗೀತ ಹಾಡು ಹಾಡಿದಳು.

ಮಕ್ಕಳು ಆಟ ಆಡಿದರು.

ಜಾನ್ ಊಟ ಮಾಡಿದನು.

ಈ ವಾಕ್ಯಗಳಲ್ಲಿ ಹಾಡಿದಳು, ಆಡಿದರು, ಮಾಡಿದನು, ಇತ್ಯಾದಿ ಪದಗಳು ಕ್ರಿಯೆಯನ್ನು ಸೂಚಿಸುತ್ತವೆ. ಕ್ರಿಯೆಯನ್ನು ಸೂಚಿಸುವ ಈ ರೀತಿಯ ಪದಗಳನ್ನು ಕ್ರಿಯಾಪದಗಳು ಎನ್ನುತ್ತಾರೆ. ಕ್ರಿಯೆ ಅಥವಾ ಕೆಲಸ ಮಾಡಿದವರನ್ನು ಸೂಚಿಸುವ ಪದಗಳು ಕರ್ತೃ ಪದಗಳು. ಅವರು ಮಾಡಿದ ಕೆಲಸವನ್ನು ಹೇಳುವ ಪದಗಳೇ ಕರ್ಮಪದಗಳು.

ಕೆಳಗೆ ನೀಡಿರುವ ವಾಕ್ಯಗಳಲ್ಲಿ ಕರ್ತೃ, ಕರ್ಮ, ಕ್ರಿಯಾ ಪದಗಳನ್ನು ಗುರುತಿಸಿ ಬರೆಯಿರಿ

- ರೈತರು ಬೀಜವನ್ನು ಬಿತ್ತಿದರು.
- ಸಲೀಂ ಬಸ್ಸನ್ನು ಚಲಾಯಿಸಿದನು.
- ಫುಲೆ ದಂಪತಿಗಳು ಶಾಲೆಗಳನ್ನು ತೆರೆದರು.
- ಶಿಕ್ಷಣ ಇಲಾಖೆ ಸಾವಿತ್ರಿಬಾಯಿಯವರನ್ನು ಸನ್ಮಾನಿಸಿತು.
- ಜ್ಯೋತಿಬಾರ ತಂದೆಯು ಮಗ-ಸೊಸೆಯನ್ನು ಮನೆಯಿಂದ ಹೊರ ಕಳಿಸಿದರು.

## ಕಾಲ ಸೂಚಕ ಕ್ರಿಯಾ ರೂಪಗಳನ್ನು ಬರೆಯಿರಿ

ಈ ವಾಕ್ಯಗಳನ್ನು ಗಮನಿಸಿ.

ಸಾವಿತ್ರಿಬಾಯಿ ಫುಲೆಯವರು ಹೊಸಯುಗಕ್ಕೆ ನಾಂದಿ ಹಾಡಿದರು.

ಜ್ಯೋತಿ ಕವನ ಬರೆಯುತ್ತಾಳೆ.

ಮಕ್ಕಳು ಸಾಧಕಿಯರ ಜೀವನಚರಿತ್ರೆಗಳನ್ನು ಓದುವರು.

ಇಲ್ಲಿ 'ನಾಂದಿ ಹಾಡಿದರು' ಎಂಬ ಕ್ರಿಯಾಪದ ನಡೆದುಹೋದ ಕ್ರಿಯೆಯನ್ನು ಸೂಚಿಸುತ್ತದೆ. ಇಂಥ ಕ್ರಿಯಾಪದಗಳನ್ನು ಭೂತಕಾಲ ಕ್ರಿಯಾಪದ ಎನ್ನುತ್ತಾರೆ. 'ಬರೆಯುತ್ತಾಳೆ' ಎಂಬ ಕ್ರಿಯಾಪದ ಸದ್ಯದಲ್ಲೇ ಆಗುವ ಕ್ರಿಯೆಯನ್ನು ಸೂಚಿಸುತ್ತದೆ. ಇಂಥ ಕ್ರಿಯಾಪದಗಳನ್ನು ವರ್ತಮಾನ ಕ್ರಿಯಾಪದಗಳು ಎನ್ನುತ್ತೇವೆ. 'ಓದುವರು' ಎಂಬ ಕ್ರಿಯಾಪದ ಮುಂದೆ ನಡೆಯಲಿರುವ ಕ್ರಿಯೆಯನ್ನು ಸೂಚಿಸುತ್ತದೆ. ಇಂಥ ಕ್ರಿಯಾಪದಗಳೇ ಭವಿಷ್ಯತ್ ಕಾಲದ ಕ್ರಿಯಾಪದಗಳು.

ಕೆಳಗಿನ ವಾಕ್ಯಗಳಲ್ಲಿರುವ ಕ್ರಿಯಾಪದಗಳು ಯಾವ ಕಾಲವನ್ನು ಸೂಚಿಸುತ್ತವೆ ಎಂಬುದನ್ನು ಬರೆಯಿರಿ.

- ವಿದ್ಯಾರ್ಥಿಗಳು ಪ್ರವಾಸ ಹೋಗುವರು.
- ಮಕ್ಕಳು ಗಿಡಗಳನ್ನು ನೆಟ್ಟರು.
- ಅಧ್ಯಾಪಕರು ಭಾಷಣ ಮಾಡುತ್ತಾರೆ.
- ನಾನು ಸೂರ್ಯಾಸ್ತಮಾನವನ್ನು ನೋಡಿದೆನು.
- ವೇದಿಕೆಯಲ್ಲಿ ನಾಟಕ ನಡೆಯುತ್ತಿದೆ
- ನಾಳೆ ನನ್ನ ಹುಟ್ಟುಹಬ್ಬವನ್ನು ಆಚರಿಸುವೆನು.

# 3. ಪ್ರಕೃತಿ - ಪರಿಸರ

ಈ ಭೂಮಿಯಲ್ಲಿ ಜೀವ ಜಾಲಗಳು ತಮ್ಮ ಬದುಕಿಗಾಗಿ ಪರಿಸರವನ್ನು ಆಶ್ರಯಿಸಿವೆ. ಬಯಲು, ಗುಡ್ಡ, ನದಿ, ಕೆರೆ ಹೀಗೆ ಹಲವು ಆವಾಸಗಳಲ್ಲಿ ಮಾನವನು ಸೇರಿದಂತೆ ಅನೇಕ ಜೀವಿಗಳು ವಾಸಿಸುತ್ತಿವೆ. ಇಲ್ಲಿ ಪ್ರತಿಯೊಂದು ಜೀವಿಗೂ ಬದುಕುವ ಹಕ್ಕಿದೆ. ಆದರೆ ಮಾನವನ ಕೆಲವೊಂದು ಪ್ರವೃತ್ತಿಗಳು ಪರಿಸರದ ವ್ಯವಸ್ಥೆಯನ್ನು ಹಾಳುಗೆಡಹುತ್ತಿವೆ. ಬದುಕನ್ನು ದುಸ್ತರವನ್ನಾಗಿಸಿವೆ. ಪ್ರಕೃತಿಯ ರಮಣೀಯ ಸೌಂದರ್ಯವನ್ನು ಆಸ್ವಾದಿಸುವ ಬದಲಿಗೆ ಪರಿಸರ ಅಸಮತೋಲನಕ್ಕೆ ಅವನು ಕಾರಣನಾಗುತ್ತಿದ್ದಾನೆ. ಪರಿಸರವನ್ನು ಸಂರಕ್ಷಿಸುವ ಪ್ರಜ್ಞೆ ನಮ್ಮಲ್ಲಿ ಇರಬೇಕು. ಪ್ರಕೃತಿಯ ಮಡಿಲಲ್ಲಿ ಬದುಕಬೇಕು, ಬದುಕಲು ಬಿಡಬೇಕು.

## ಪ್ರವೇಶ ಚಟುವಟಿಕೆ



ಎಲ್ಲಿ ಹೋದವೊ ಕಣ್ಣಿಗೆ ಕಾಣದಾದವೊ
ಆ ಗಿಡಮರ ಬಳ್ಳಿ ಪ್ರಾಣಿ ಪಕ್ಷಿ ಓತಿಕ್ಯಾತ
ಎಲ್ಲಿ ಹೋದವೊ ಕಾಣದಾದವೋ

ಅಲಾರಾಂ ಗಡಿಯಾರ ಎಲ್ಲರ ಮನೆಯಲ್ಲಿರಲಿಲ್ಲ
ಹೊತ್ತಾರೆ ಎದ್ದು ಹೊಲಕೆ ಹೋಗಲು ಏಳಿಸೋರು ಇಲ್ಲ
ಗುಬ್ಬಚ್ಚಿಗಳ ಚಿಲಿಪಿಲಿಗೆ ಎಚ್ಚೆತ್ತು ನಾವು ಹೋಗ್ಯಾವಲ್ಲೋ

ಬೇಲಿ ಮೇಲೆ ಬಣ್ಣ ಬಣ್ಣದ ಚಿಟ್ಟೆಗಳ ಪರದಾಟ
ಗುಡಿ ಗೋಪುರದ ಮ್ಯಾಲ ರಂಗು ರಂಗಿನ ಹಕ್ಕಿಗಳ ಆಟ
ರಂಗನತಿಟ್ಟನು ನೋಡಲು ರಜೆ ಹಾಕಿ ಹೋಗ್ಯಾವಲ್ಲೊ



- ಮೇಲಿನ ಪದ್ಯವನ್ನು ಓದಿ ನಿಮ್ಮ ಅನಿಸಿಕೆಗಳನ್ನು ಬರೆದು ತರಗತಿಯಲ್ಲಿ ಮಂಡಿಸಿರಿ .

# ಊರು ಬರಿದಾಯ್ತು

ಮಂಗಳೂರಿನಿಂದ ಬೆಂಗಳೂರಿನ ಕಡೆಗೆ ಹೊರಟರೆ ಹತ್ತಾರು ಮೈಲು ಸಾಗುವುದರೊಳಗೆ ನಿಮಗೆ ದೂರ ದಿಗಂತದಲ್ಲಿ ಆಕಾಶದ ನೀಲಿಯಲ್ಲಿ ನೀಲಿಯಾಗಿ ಪರ್ವತಶ್ರೇಣಿಗಳು ಮುಗಿಲೆತ್ತರದ ಗರಗಸದ ಹಲ್ಲುಗಳಂತೆ ಅಡ್ಡಗಟ್ಟಿ ನಿಂತಿರುವುದು ಕಾಣಿಸುತ್ತದೆ. ಕಡಲ ತೀರದಿಂದ ನೀವು ಯಾವ ದಾರಿಯನ್ನೇ ಹಿಡಿಯಿರಿ ಈ ಗಿರಿತರಂಗಗಳು ನಿಮಗೆ ಇದಿರಾಗೇ ಆಗುತ್ತವೆ. ಶಿರಾಡಿ, ಆಗುಂಬೆ, ಚಾರ್ಮಾಡಿ, ಹುಲಿಕಲ್ಲು, ಬಿಸಲೆ, ಮಡಿಕೇರಿ, ಎಲ್ಲಿ ಯಾವ ಕಡೆಯಿಂದ ಮುಂದುವರಿದರೂ ಈ ಅಡ್ಡಗಟ್ಟಿನಿಂತ ಗಿರಿ ಶ್ರೇಣಿಗಳ ಕಿರಿದಾದ ಘಾಟಿರಸ್ತೆಯನ್ನು ಸುತ್ತಿಸುತ್ತಿ ಹತ್ತಬೇಕಾದ್ದು ಅನಿವಾರ್ಯ. ಆದರೆ ಬಯಲುಸೀಮೆ ಕಡೆಯಿಂದ ಕಡಲತಡಿಯ ಕಡೆಗೆ ಹೊರಟವರಿಗೆ ಪಶ್ಚಿಮ ಘಟ್ಟಗಳ ಪರ್ವತಶ್ರೇಣಿಗಳು ಈ ರೀತಿ ನಾಟಕೀಯವಾಗಿ ಇದಿರಾಗುವುದಿಲ್ಲ. ನಿಧಾನವಾಗಿ ಕುರುಚಲು ಕಾಡು ಪ್ರಾರಂಭವಾಗಿ ಆಮೇಲೆ ಮತ್ತಿ, ಹೊನ್ನೆ, ತೇಗ, ನಂದಿ, ಮುಂತಾದ ಉದುರೆಲೆಯ ಮರಗಳ ಕಾಡಾಗಿ ಪರಿವರ್ತನೆಯಾಗಿ ಅನಂತರ ಪರ್ವತಶ್ರೇಣಿಗಳು ಎದುರಾಗುವ ಹೊತ್ತಿಗೆ ದಟ್ಟ ಹಸುರಿನ ನಿತ್ಯಹರಿದ್ವರ್ಣದ ಕಗ್ಗಾಡು ಕವಿಯುತ್ತದೆ.

ದೇವಪುರದಿಂದ ಮುಂದಿನ ದಾರಿಯಂತೂ ಮೈಲಿ ಮೈಲಿಯವರೆಗೆ ಪರ್ವತದ ಏರು ತಗ್ಗುಗಳಲ್ಲಿ ನಿಬಿಡವಾಗಿ ಮೆತ್ತಿಕೊಂಡಿರುವ ಕಾಡಿನೊಳಗೆ ನುಸಿದು ಹೋಗುತ್ತದೆ. ಯಾರಿಗಾದರೂ ಒಮ್ಮೆಲೇ ಅನಾಥರಾದಂತೆನ್ನಿಸುವ ವಿಚಿತ್ರ ಪರಿಸರ ಅದು. ದೇವಪುರದಿಂದ ಮೂರು ಮೈಲು ಹೋಗುವುದರೊಳಗೇ ಕೊನೆಯ ಕಾಫಿ ತೋಟದ ಬೇಲಿಯೂ ಮುಗಿಯುತ್ತದೆ. ಅನಂತರ ಹೆಣೆದುಕೊಂಡಂತೆ ಕವಿದಿರುವ ಕಾಡಿನ ಅಡಿ ವಾಹನಗಳು ಇರುವೆ ತೆವಳಿದಂತೆ ಮುಂದುವರಿಯಬೇಕು. ಈ ದಾರಿಯ ಎಡ ಬಲದ ಪಾತಾಳದ ಕಣಿವೆಗಳಲ್ಲಿ ಎಂದೂ ಬತ್ತದ ಅನೇಕ ಜೀವ ನದಿಗಳು ಸ್ಫಟಿಕ ಶುಭ್ರವಾದ ನೀಲಿಯ ನೀರಿನ ಹೊನಲುಗಳಾಗಿ ಬಂಡೆಯಿಂದ ಬಂಡೆಗೆ ಬೆಳ್ನೊರೆ ಕಾರುತ್ತಾ ಹಾರುವುದನ್ನು ನೋಡಬಹುದು. ರಸ್ತೆ ಸಮುದ್ರ ಮಟ್ಟಕ್ಕೆ ಆ ಹಳ್ಳಗಳ ಸಮತಳಕ್ಕೆ



ಇಳಿಯುವ ಮೊದಲೇ ಆ ಹಳ್ಳಗಳೆಲ್ಲಾ ಒಂದಕ್ಕೊಂದು ಸೇರಿಕೊಳ್ಳುತ್ತಾ ದೊಡ್ಡ ಭೋರ್ಗರೆವ ನದಿಯಾಗುತ್ತದೆ. ಆದರೂ ಇದು ಪಶ್ಚಿಮದ ಕಡಲಕಡೆಗೆ ಹರಿಯುವುದರಿಂದ ಸಮುದ್ರದ ಪಾರಾವಾರ ಸೇರಲು ಹೆಚ್ಚೇನೂ ದೂರ ಹರಿಯಬೇಕಿಲ್ಲ.

ಇಷ್ಟು ನಿರ್ಜನವಾದ ಈ ರಸ್ತೆಯಲ್ಲೂ ಅಲ್ಲಲ್ಲಿ ಎಲ್ಲೋ ಒಂದೊಂದು ಮಂಕು ಹಿಡಿದ ಮನೆಗಳೂ ನಾಲ್ಕಾರು ಅಡಕೆಯ ಮರಗಳೂ ಕಣಿವೆಗಳ ತಿರುವಿನಲ್ಲಿ ಹಠಾತ್ತಾಗಿ ಕಾಣಿಸಿಕೊಂಡು ಮರೆಯಾಗುತ್ತವೆ. ಅವುಗಳಲ್ಲಿ ಆ ಕಾಡಿನ ನಡುವಿನ ಹತ್ತನೆಯದೋ ಹನ್ನೆರಡನೆಯದೋ ತಿರುವು ದಾಟಿದ ಕೂಡಲೆ ಬಲಕ್ಕೆ ಕಾಣುವ ನಾಲ್ಕಾರು ಜೋಪಡಿಗಳ ಹಳ್ಳಿ ನೋಡಿದವರ ನೆನಪಿನಲ್ಲಿ ಕೆಲಕಾಲ ಉಳಿದು ಕೊರೆಯುತ್ತದೆ.

ಈ ಹಳ್ಳಿಯನ್ನು ಒಂದಾನೊಂದು ಕಾಲದಲ್ಲಿ ಮೇದರಹಳ್ಳಿ ಅಥವಾ ಮೇದರಳ್ಳಿ ಎಂದು ಕರೆಯುತ್ತಿದ್ದರು. ಮೇದರಹಳ್ಳಿಗೆ ಆ ಹೆಸರು ಬರಲು ಕಾರಣ ಅಲ್ಲಿ ವಾಸಿಸುತ್ತಿದ್ದ ಮೇದರು. ಈ ಹಳ್ಳಿಯ ಆಸುಪಾಸಿನಲ್ಲಿ ಸಾವಿರಾರು ಚದರಮೈಲಿ ಅಕ್ಷಯವಾಗಿ ಹೆಬ್ಬಿದಿರು, ವಾಟೆ ಬಿದಿರು, ಕಿರುಬಿದಿರು ಇತ್ಯಾದಿಗಳು ಬೆಳೆದಿದ್ದುವು. ಅಲ್ಲಿನ ಬಿದಿರು ಎಷ್ಟು ಒಳ್ಳೆಯದೆಂದರೆ ತಲೆಯಿಂದ ಬುಡದವರೆಗೆ ತೆಳ್ಳಗೆ ದಾರದಂತೆ ಸೀಳಬಹುದಿತ್ತು. ಸಿಂಗಾಪುರದ ಬೆತ್ತದ ಹಾಗೆ ಬೆಳ್ಳಗೆ ಹೊಳೆಯುವ ಈ ಬಿದಿರು ಬೇಕಾದ ಆಕಾರಕ್ಕೆ ಬಗ್ಗಿಸಿದರೂ ಮುರಿಯದೆ ಸಿಬಿರೇಳದೆ ಹೇಳಿದ ಹಾಗೆ ಕೇಳುತ್ತಿತ್ತು. ಮೇದರಹಳ್ಳಿಯಲ್ಲಿ ಮಾಡಿದ ಬತ್ತದ ತಡಿಕೆಗಳೂ, ಬುಟ್ಟಿ, ಮೊರ, ಕೂಣಿಗಳೂ ಕರ್ನಾಟಕದಾದ್ಯಂತ ಹೆಸರುವಾಸಿಯಾಗಿದ್ದವು. ಆದರೆ ಈ ಹಳ್ಳಿ ನಿಜಕ್ಕೂ ಪ್ರವರ್ಧಮಾನಕ್ಕೆ ಬಂದಿದ್ದು ಯೂರೋಪಿಯನ್ನರ ಕಾಲದಲ್ಲಿ, ಕಾಫಿ ತೋಟದ ದೊರೆಗಳಿಗೆ ಕಾಫಿ ಸಸಿಗಳನ್ನು ಬೆಳೆಸಲು ಬೇಕಾಗಿದ್ದ ಬಿದಿರಿನ ಚಿಕ್ಕಚಿಕ್ಕ ಕುಕ್ಕೆಗಳು ಮೇದರಹಳ್ಳಿಯಿಂದಲೇ ಸರಬರಾಜಾಗುತ್ತಿದ್ದುದು. ದೊಡ್ಡ ದೊಡ್ಡ ಯೂರೋಪಿಯನ್ ದೊರೆಗಳೆಲ್ಲ ಮೇದರಹಳ್ಳಿಗೆ ಭೇಟಿಕೊಟ್ಟು, ಮುಂಗಡ ಹಣ ಕೊಟ್ಟು ಲಕ್ಷಾಂತರ ಕಾಫಿ ಕುಕ್ಕೆಗಳಿಗೆ ಆರ್ಡರ್ ಬುಕ್ ಮಾಡುತ್ತಿದ್ದರು. ಕಾಫಿ ತೋಟಗಳು ವಿಸ್ತರಿಸುತ್ತಾ ಹೋದಂತೆ ಮೇದರ ಹಳ್ಳಿಯ ವ್ಯವಹಾರಗಳೂ ವಿಸ್ತರಿಸುತ್ತಾ ಹೋದವು. ಸ್ವಾತಂತ್ರ್ಯಾ ನಂತರ ಬ್ರಿಟಿಷರೆಲ್ಲ ಭಾರತದಿಂದ ನಿರ್ಗಮಿಸಿದ ಮೇಲೂ ಮೇದರ ಹಳ್ಳಿಯ ವಹಿವಾಟೇನೂ ಕಡಮೆಯಾಗಲಿಲ್ಲ. ಮೇದರಳ್ಳಿಯ ಮೇದರಿಗೆಲ್ಲಾ ಕಾಫಿ



ತೋಟಗಳಿರುವೆಡೆಗಳಲ್ಲಿ ಬಹುವಚನದ ಮರ್ಯಾದೆಯೇ ಸಿಗುತ್ತಿತ್ತು.

ನಾಗರಿಕತೆಯೊಳಗೆ ಪ್ಲಾಸ್ಟಿಕ್ ಕಾಲಿಟ್ಟಾಗ ಈ ತೆಳ್ಳಗೆ ಪಾರದರ್ಶಕವಾಗಿ ಮಿಂಚುವ ಮೋಹಿನಿಯ ವಿಶ್ವರೂಪ ಯಾರಿಗೂ ಗೊತ್ತಿರಲಿಲ್ಲ. ಅನೇಕ ಹಳ್ಳಿ, ಮನೆತನ, ಬುಡಕಟ್ಟುಗಳ ನಿರ್ನಾಮಕ್ಕೆ ಇದು ಕಾರಣವಾದೀತೆಂದು ಯಾರೂ ಕನಸು ಮನಸಿನಲ್ಲಿಯೂ ಊಹಿಸಿರಲಿಲ್ಲ. ಖಾಲಿ ಜಾಗಗಳ ಸಂದುಗೊಂದುಗಳೊಳಗೆಲ್ಲಾ ಹಬ್ಬಿ ಆಕ್ರಮಿಸುವ ಪಾರ್ಥೆನಿಯಮ್, ಯುಪಟೋರಿಯಮ್ ಕಳೆಗಳಂತೆ ಪ್ಲಾಸ್ಟಿಕ್ ಪಾಲಿಯುರಿಥೇನ್, ಪಾಲಿಎಥಿಲೀನ್, ಪಾಲಿಫೈಬರ್, ಪಾಲಿಮಾರ್, ಹೀಗೆ ನಾನಾ ಅವತಾರಗಳನ್ನೆತ್ತಿ ಮಾರುಕಟ್ಟೆಯ ಎಲ್ಲ ಕ್ಷೇತ್ರಗಳಿಗೆ, ಎಲ್ಲ ಅವಕಾಶಗಳಿಗೆ ಮುತ್ತಿಗೆ ಹಾಕಿತು.

ನಿಧಾನವಾಗಿ ಕಾಫಿ ಮೊಳಕೆಗಳನ್ನು ನೆಡುವ ಬಿದಿರಿನ ಕುಕ್ಕೆಗಳಿಗೆ ಬದಲಾಗಿ ಪ್ಲಾಸ್ಟಿಕ್ ಚೀಲಗಳು ಬಂದವು. ಗಾಳಿ ಮಳೆ ಬಿಸಿಲು ಇವು ಯಾವುದಕ್ಕೂ ಜಗ್ಗದ ಈ ತೆಳ್ಳಗಿನ ಕಾಗದದಂಥ ಪ್ಲಾಸ್ಟಿಕ್ ಚೀಲಗಳು ಕಾಫಿ ಪ್ಲಾಂಟರುಗಳ ಮನ ಗೆಲ್ಲಲು ಕೆಲವೇ ವರ್ಷಗಳು ಸಾಕಾದವು. ಮೇದರ ಹಳ್ಳಿಯ ಬಿದಿರಿನ ಕುಕ್ಕೆಗಳನ್ನಾದರೋ ಸಾವಿರಗಟ್ಟಲೆ ಸಾಗಿಸುವುದೇ ದೊಡ್ಡ ಗೋಳು. ಅವುಗಳನ್ನು ಪ್ಲಾಸ್ಟಿಕ್ ಚೀಲಗಳಂತೆ ಮಡಚಿ ತುರುಕುವ ಹಾಗೂ ಇಲ್ಲ. ಬಿದಿರಿನ ಬುಟ್ಟಿಗಳಿಗೆ ಮಣ್ಣು ತುಂಬಿ ಕಾಫಿ ಸಸಿಗಳನ್ನು ನೆಡುವ ಮೊದಲು ಅವಕ್ಕೆ ಗೆದ್ದಲು ಹಿಡಿಯದಂತೆ ಮೈಲುತುತ್ತಿನ ನೀರಿನಲ್ಲಿ ಕುದಿಸಬೇಕು. ಲಕ್ಷಗಟ್ಟಲೆ ಬುಟ್ಟಿಗಳು ಬೇಕಾದಾಗ ಮೇದರಹಳ್ಳಿಯ ಹೆಂಗಸರು ಮಕ್ಕಳಾದಿಯಾಗಿ ಎಲ್ಲ ಬುಟ್ಟಿ ಹೆಣೆಯಲು ಕುಳಿತರೂ ಸಕಾಲಕ್ಕೆ ಸಾಕಷ್ಟು ದೊರೆಯುತ್ತಿರಲಿಲ್ಲ. ಪ್ಲಾಸ್ಟಿಕ್ ಹಾಗಲ್ಲ. ಒಂದು ಚಿಕ್ಕ ಪ್ಯಾಕೆಟ್ಟಿನಲ್ಲಿ ಒಂದು ಲಕ್ಷ ಚೀಲಗಳಿರುತ್ತವೆ. ತೆಳ್ಳಗೆ ಬಟ್ಟೆಯಂತಿರುವ ಅವುಗಳಲ್ಲಿ ಮಣ್ಣು ತುಂಬಿ ಪಾತಿಗಳಲ್ಲಿ ಕೂರಿಸಿದರೆ ಅವಕ್ಕೆ ತುಕ್ಕು ಹಿಡಿಯುವುದಿಲ್ಲ, ಗೆದ್ದಲು ಹತ್ತಿರ ಸುಳಿಯುವುದಿಲ್ಲ. ಮಳೆ ಗಾಳಿಗೆ ಕುಂಬಾಗುವುದೂ ಇಲ್ಲ. ಬೇಕೆಂದಾಗ ಬೇಕಷ್ಟು ದೊರೆಯುತ್ತದೆ. ಎಲ್ಲೊ ಕಗ್ಗಾಡಿನ ಪಾತಾಳದಲ್ಲಿರುವ ಮೇದರ ಹಳ್ಳಿಗೆ ಹೋಗಿ "ಈಗ ಎಷ್ಟಿದೆಯೋ ಅಷ್ಟು ಕೊಡ್ರಪ್ಪಾ" ಎಂದು ಗೋಗರೆಯುವ ಪ್ರಮೇಯವೇ ಇಲ್ಲ !

ಮೊದಲು ಮೇದರಹಳ್ಳಿಗೆ ಜನ ಬಂದು ದುಂಬಾಲು ಬಿದ್ದು ಗೋಗರೆದು ಕುಕ್ಕೆ ತೆಗೆದುಕೊಂಡು ಹೋಗುವುದು ತಪ್ಪಿತು. ಆಮೇಲೆ ಅಡ್ವಾನ್ಸ್ ಕೊಟ್ಟು ಆರ್ಡರ್ ಬುಕ್ ಮಾಡುವುದು ನಿಂತಿತು. ಆಮೇಲೆ ಮೇದರೇ ಕುಕ್ಕೆಗಳನ್ನು ಸರದಂತೆ ಪೋಣಿಸಿ ಬಸ್ಸು ಲಾರಿಗಳ ಮೇಲೆ ಗುಡ್ಡೆ ಹಾಕಿಕೊಂಡು ಪೇಟೆಗೆ ತಂದರೆ ಮಾತ್ರ ಗಿರಾಕಿ ಇತ್ತು. ಕಾಫಿ ಬೆಳೆಗಾರರಲ್ಲಿ ಅನೇಕ ಹಳಬರು "ಏನೇ ಆದರೂ ಪ್ಲಾಸ್ಟಿಕ್ ಕುಕ್ಕೆಗಳಲ್ಲಿ ಬಿದಿರು ಬುಟ್ಟಿಯಲ್ಲಿ ಬಂದ ಹಾಗೆ ಗಿಡ ಬರುವುದಿಲ್ಲ. ಬಿದಿರು ಬುಟ್ಟಿಯಲ್ಲಿ ಗಾಳಿಯಾಡುವ ಹಾಗೆ ಪ್ಲಾಸ್ಟಿಕ್‌ನೊಳಗೆ ಗಾಳಿಯಾಡುವುದಿಲ್ಲ" ಎಂದು ದುಬಾರಿಯಾದರೂ ಕುರಿಗ ಕುಕ್ಕೆಗಳನ್ನು ಕೊಳ್ಳುತ್ತಿದ್ದರು.

ಆ ವೇಳೆಗೆ ಸರಿಯಾಗಿ ಇನ್ನೂ ಒಂದು ದುರದೃಷ್ಟ ಮೇದರಹಳ್ಳಿಗೆ ಎರಗಿತು! ಅರವತ್ತು ವರ್ಷಗಳಿಗೊಮ್ಮೆ ಬಿದಿರಿಗೆ ಬರುವ ನೆರೆ, ಅಥವಾ ಕಟ್ಟೆ ಪ್ರಾರಂಭವಾಯ್ತು. ಬಿದಿರು ಭತ್ತದ ರೀತಿಯಲ್ಲಿ ತೆನೆ ಬಿಟ್ಟು ಹೂವಾಗಿ ಬಿದಿರಕ್ಕಿ

ST-295-7-KANNADA (AT)-7-VOL-1

ಹಿಡಿದು ಮುದಿಯಾಗುತ್ತದೆ. ಭತ್ತ ತೆನೆ ಬಿಡಲು ಆರು ತಿಂಗಳು ತೆಗೆದುಕೊಂಡರೆ ಬಿದಿರು ಮಾತ್ರ ಅರವತ್ತು ವರ್ಷ ತೆಗೆದುಕೊಳ್ಳುತ್ತದೆ. ಮೇದರಹಳ್ಳಿಯ ಸುತ್ತಮುತ್ತ ಇರುವ ಸಾವಿರಾರು ಚದರ ಮೈಲಿಯ ಬಿದಿರು ಯಾವುದೋ ಖಾಯಿಲೆ ಹಿಡಿದಹಾಗೆ ಮೆಲ್ಲಗೆ ಹಳದಿಯಾಗತೊಡಗಿತು. ಮೇದರಹಳ್ಳಿಯ ಹಳಬರಿಗೆಲ್ಲ ಇದೇನೆಂದು ಚೆನ್ನಾಗಿ ಗೊತ್ತಿತ್ತು. ಇನ್ನೆಲ್ಲೋ ಇದ್ದ ಅವರು ಹಿಂದೊಮ್ಮೆ ಅಲ್ಲಿಗೆ ಬಂದು ಹಳ್ಳಿ ಕಟ್ಟಿಕೊಂಡಿದ್ದಕ್ಕೂ ಇದೇ ಕಾರಣವಂತೆ! ಕೆಲವೇ ಕಾಲದೊಳಗೆ ಪ್ರತಿಯೊಂದು ಬಿದಿರಿನ ಕವಲುಕೊಂಬೆಗಳ ತುದಿಗಳಿಂದೆಲ್ಲ ಗೋಧಿಯ ತೆನೆಗಳಂಥ ದೊಡ್ಡದೊಡ್ಡ ತೆನೆಗಳು ಹೊರಟವು. ತೆನೆಗಳೊಳಗಿನ ಬಿದಿರಕ್ಕಿಯ ಭಾರದಲ್ಲಿ ಬಲವಾದ ಹೆಬ್ಬಿದಿರುಗಳು ಕೂಡ ನೆಲಮುಖವಾಗಿ ಬಾಗಿ ಜೋಲತೊಡಗಿದವು. ಅಲ್ಲಿಗೆ ಆ ಬಿದಿರಿನ ಆಯುಸ್ಸು ಮುಗಿದಹಾಗೇ! ಇನ್ನು ಅವುಗಳಿಂದ ಉದುರುವ ಬೀಜಗಳಿಂದ ಮತ್ತೆ ಬಿದಿರು ಮೊಳಕೆಯೊಡೆದು ಹುಟ್ಟಿ ಮೇಲೆದ್ದು, ಬುಟ್ಟಿ ಹೆಣೆಯಲು ಬಿದಿರು ದೊರಕಬೇಕಾದರೆ ಕೆಲವು ಕಾಲವೇ ಬೇಕು.

ಬಿದಿರು ಅಲ್ಲೊಂದು ಇಲ್ಲೊಂದು ಹಣ್ಣಾಗಿ ಅಕ್ಕಿ ಬಿಡುವುದಿಲ್ಲ. ಭತ್ತದ ಗದ್ದೆಗಳಂತೆಯೇ ಇಡೀ ಕಾಡಿಗೆ ಕಾಡೇ ಹಣ್ಣಾಗಿ ತೆನೆ ಬಿಟ್ಟು ಸತ್ತು ಹೋಗುತ್ತವೆ. ಬಿದಿರು ಹಿಂಡಿಲಿನ ಕೆಳಗೆ ನೆಲವನ್ನೆಲ್ಲಾ ಗುಡಿಸಿ ಸೆಗಣಿ ಸಾರಿಸಿ ಉದುರುವ ಬಿದಿರಕ್ಕಿಯನ್ನೆಲ್ಲಾ ಮೇದರ ಹೆಂಗಸರು ಹಿಂದೆ ದಾಸ್ತಾನು ಮಾಡುತ್ತಿದ್ದರು. ಒಂದೊಂದು ಬಿದಿರಿನ ಅಡಿಯೂ ಕಡಿಮೆ ಎಂದರೆ ಒಂದೊಂದು ಟನ್ ಬಿದಿರಕ್ಕಿ ಬೀಳುತ್ತದೆ. ಮೇದರಹಳ್ಳಿಯ ಆಸುಪಾಸಿನ ಬಿದಿರಕ್ಕಿಯನ್ನೆಲ್ಲಾ ಗುಡಿಸಿದ್ದರೆ ಮೇದರಹಳ್ಳಿಗೆ ಇನ್ನು ಅರುವತ್ತು ವರ್ಷಕ್ಕಾಗುವಷ್ಟು ಬಿದಿರಕ್ಕಿ ಇತ್ತೇನೋ! ಆದರೆ ಆ ಬಿದಿರುಕಾಡಿನ ಸಮುದ್ರದಲ್ಲಿ ಯಾರಿಗೆ ಎಷ್ಟೆಂದು ಒಟ್ಟು ಮಾಡಲು ಸಾಧ್ಯ! ಜೊತೆಗೆ ತಮ್ಮ ಕಸುಬಿಗೆ ಶಾಶ್ವತವಾದ ನೆರೆ ಬಂದಿದೆ! ಬಿದಿರಕ್ಕಿಯ ಬೀಜದಿಂದ ಮತ್ತೊಮ್ಮೆ ಬಿದಿರು ಮೊಳಕೆಯೊಡೆದು ಚಿಗುರಿದರೂ ತಮ್ಮ ಕಸುಬು ಮಾತ್ರ ಇನ್ನೆಂದೂ ಚಿಗುರುವುದಿಲ್ಲ ಎಂದು ಮೇದರ ಒಳಮನಸ್ಸಿಗೆ ಚೆನ್ನಾಗಿ ಗೊತ್ತಿತ್ತು. ನಿರುತ್ತೇಜಕ ಭವಿಷ್ಯದಲ್ಲಿ, ನಿರುತ್ಸಾಹಿಗಳಾದ ಮೇದರಿಗೆ ಬೆಳಗ್ಗೆ ಎದ್ದು ಮುಖ ತೊಳೆದುಕೊಳ್ಳಲು ಸಹ ಉತ್ಸಾಹವಿರುತ್ತಿರಲಿಲ್ಲ. ಇನ್ನು ಬಿದರಕ್ಕಿ ಸಂಗ್ರಹಿಸಲು ಕಾಡು ಪ್ರಾಣಿಗಳ ಜೊತೆ ಪೈಪೋಟಿಗೆ ಯಾಕೆ ಹೋದಾರು!

ಬಿದಿರಿಗೆ ಕಟ್ಟೆ ಬರುತ್ತಿದ್ದಂತೆಯೇ ಮೇದರಹಳ್ಳಿಯ ಉತ್ಪನ್ನಗಳು ಪೇಟೆಗೆ ಬರುವುದು ನಿಂತುಹೋಯ್ತು. ಬಿದಿರಿನ ಬುಟ್ಟಿಗಳಿಗೆ ಜೋತುಕೊಂಡಿದ್ದ ಅಳಿದುಳಿದ ಸಂಪ್ರದಾಯಸ್ಥ ಗಿರಾಕಿಗಳೂ ಅನಿವಾರ್ಯವಾಗಿ ಪ್ಲಾಸ್ಟಿಕನ್ನೇ ಆಶ್ರಯಿಸಿದರು. ಮೇದರಹಳ್ಳಿಯ ಹೆಂಗಸರು ಅತ್ಯಾಕರ್ಷಕವಾಗಿ ಕುಸುರಿ ಕೆಲಸ ಮಾಡಿ ಕಲಾಕೃತಿಗಳಂತೆ ಹೆಣೆಯುತ್ತಿದ್ದ ಬುಟ್ಟಿಗಳೂ ಮೊರಗಳೂ ಮಾರ್ಕೆಟ್ಟಿನಿಂದ ಅದೃಶ್ಯವಾದುವು.

ಮೇದರಹಳ್ಳಿಯ ಸುತ್ತಮುತ್ತ ಎಲ್ಲಿ ನೋಡಿದರೂ ಆಯುಸ್ಸು ಮುಗಿದು ಸತ್ತು ನಿಂತಿದ್ದ ದೊಡ್ಡ ದೊಡ್ಡ ರಾಕ್ಷಸಾಕಾರದ ಬಿದಿರು ಹಿಂಡಿಲುಗಳು! ಕೆಲವು ಕುಂಬಾಗಿ ಕುಸಿಯುತ್ತಿದ್ದರೆ, ಕೆಲವು ಮಳೆ ಗಾಳಿಗಳ

ತುಯ್ದಾಟದಲ್ಲಿ ಅಡ್ಡಡ್ಡಲಾಗಿ ಬುಡಸಮೇತ ಮಗುಚಿ ಬಿದ್ದಿದ್ದವು. ಮೇದರಹಳ್ಳಿಯ ಅವನತಿಯೂ ಅಷ್ಟೇ ವೇಗವಾಗಿ ಕ್ಷಿಪ್ರವಾಗಿ ಸಂಭವಿಸಿತು. ಅವರಿದ್ದ ಕಗ್ಗಾಡಿನಲ್ಲಿ ಬೇರಾವುದೇ ಹೊಟ್ಟೆಪಾಡಿನ ಉದ್ಯೋಗಾವಕಾಶಗಳೂ ಇಲ್ಲದೆ ಅಲ್ಲಿದ್ದವರೆಲ್ಲಾ ಹೇಳಹೆಸರಿಲ್ಲದೆ ಊರು ಬಿಟ್ಟು ಚಲ್ಲಾಪಿಲ್ಲಿಯಾದರು.

ಮತ್ತೆ ಬಿದಿರು ಲಂಟಾನ ಕೆಂಜಿಗೆ ಜಿಗ್ಗಿನೊಳಗಿಂದ ತಲೆ ಎತ್ತುವುದರೊಳಗೆ ಅಲ್ಲಿ ಯಾರೂ ಇರಲಿಲ್ಲ! ಬುಟ್ಟಿ ಹೆಣೆಯಲು ಮೇದರೂ ಇರಲಿಲ್ಲ! ಕೊಳ್ಳಲು ಗಿರಾಕಿಗಳೂ ಇರಲಿಲ್ಲ!

**- ಕೆ.ಪಿ ಪೂರ್ಣಚಂದ್ರ ತೇಜಸ್ವಿ**

### ಲೇಖಕರ ಪರಿಚಯ



ಕೆ.ಪಿ ಪೂರ್ಣಚಂದ್ರ ತೇಜಸ್ವಿಯವರು ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯಲ್ಲಿ ೮.೯.೧೯೩೮ ರಂದು ಜನಿಸಿದರು. ಇವರು ರಾಷ್ಟ್ರಕವಿ ಕುವೆಂಪು ಅವರ ಸುಪುತ್ರರು. ಕಥೆ, ಕಾದಂಬರಿ, ಕವಿತೆ, ಪ್ರಬಂಧ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಹಲವು ಕೃತಿಗಳನ್ನು ಬರೆದಿರುವರು, ಪೂಂಚಂತೇ ಇವರ ಕಾವ್ಯನಾಮ. 'ಪರಿಸರದ ಕತೆ' - ಇವರ ಪರಿಸರ ಪರವಾದ ಮುಖ್ಯ ಕೃತಿ. ಇವರ ಸಣ್ಣಕತೆಗಳಾದ 'ಅಬಚೂರಿನ ಪೋಸ್ಟ್ ಆಫೀಸ್', 'ತಬರನ ಕಥೆ', 'ಕುಬಿ' ಮತ್ತು 'ಇಯಾಲ' ಚಲನಚಿತ್ರಗಳಾಗಿ ರೂಪುಗೊಂಡಿವೆ. ಈ ಚಲನಚಿತ್ರಗಳು ರಾಷ್ಟ್ರಮಟ್ಟದಲ್ಲಿ ಮನ್ನಣೆ ಗಳಿಸಿವೆ. 'ಕರ್ವಾಲೋ', 'ಜುಗಾರಿ ಕ್ರಾಸ್', 'ಕಿರಗೂರಿನ ಗಯ್ಯಾಳಿಗಳು', 'ಚಿದಂಬರ ರಹಸ್ಯ' ಇವರ ಪ್ರಮುಖ ಕಾದಂಬರಿಗಳು. ಪ್ರಸ್ತುತ ಪಾಠ ಭಾಗವನ್ನು 'ಜುಗಾರಿ ಕ್ರಾಸ್' ಎಂಬ ಕಾದಂಬರಿಯಿಂದ ಆಯ್ದುಕೊಳ್ಳಲಾಗಿದೆ.

## ಚಟುವಟಿಕೆಗಳು

### ಉತ್ತರಿಸಿರಿ

1. ಮೇದರಹಳ್ಳಿಗೆ ಆ ಹೆಸರು ಬರಲು ಕಾರಣವೇನು?
2. ಮೇದರಹಳ್ಳಿಯ ಬಿದಿರಿನ ಪ್ರತ್ಯೇಕತೆಗಳೇನು?
3. ಮೇದರಹಳ್ಳಿಗೆ ಎರಗಿದ ಮತ್ತೊಂದು ದುರದೃಷ್ಟ ಯಾವುದು?
4. ಮೇದರಹಳ್ಳಿಯ ಜನರು ಊರು ಬಿಡಲು ಕಾರಣವೇನು?

## ಸಮರ್ಥಿಸಿ ಬರೆಯಿರಿ

'ತಮ್ಮ ಕಸುಬಿಗೆ ಶಾಶ್ವತವಾದ ನೆರೆ ಬಂದಿದೆ! ಬಿದಿರಕ್ಕಿಯ ಬೀಜದಿಂದ ಮತ್ತೊಮ್ಮೆ ಬಿದಿರು ಮೊಳಕೆಯೊಡೆದು ಚಿಗುರಿದರೂ ತಮ್ಮ ಕಸುಬು ಮಾತ್ರ ಇನ್ನೆಂದೂ ಚಿಗುರುವುದಿಲ್ಲ' - ಈ ಹೇಳಿಕೆಗೆ ಕಾರಣವಾದ ಅಂಶಗಳನ್ನು ಚರ್ಚಿಸಿ ನಿಮ್ಮ ಅಭಿಪ್ರಾಯಗಳೊಂದಿಗೆ ಸಮರ್ಥಿಸಿ ಬರೆಯಿರಿ.

## ಟಿಪ್ಪಣಿ

ಪ್ಲಾಸ್ಟಿಕ್ ಬಳಕೆ ಮೇದರಹಳ್ಳಿಯಲ್ಲಿ ಉಂಟುಮಾಡಿದ ಬದಲಾವಣೆಗಳೇನು? ಎಂಬುದನ್ನು ಪಾಠ ಭಾಗದಲ್ಲಿ ಗುರುತಿಸಿ ಆ ಕುರಿತು ಟಿಪ್ಪಣಿಯೊಂದನ್ನು ಬರೆಯಿರಿ.

## ವರ್ಣನೆ ಬರೆಯಿರಿ

ನೀವು ನಿಮ್ಮ ಶಾಲೆಯಿಂದ ಅಥವಾ ಹಿರಿಯರ ಜೊತೆಗೂಡಿ ಪ್ರಕೃತಿ ರಮಣೀಯ ಸ್ಥಳಗಳನ್ನು ಸಂದರ್ಶಿಸಿರಬಹುದಲ್ಲವೇ? ನೀವು ಸಂದರ್ಶಿಸಿದ ಸ್ಥಳವೊಂದರ ಕುರಿತು ವರ್ಣನೆ ಬರೆಯಿರಿ.

## ಕರಪತ್ರ ತಯಾರಿ

ಪ್ಲಾಸ್ಟಿಕ್ ವಸ್ತುಗಳ ಬಳಕೆಯಿಂದ ಆಗುವ ದುಷ್ಪರಿಣಾಮಗಳನ್ನು ತಿಳಿಸುತ್ತಾ ಬಟ್ಟೆ ಚೀಲಗಳನ್ನು ಬಳಸುವಂತೆ ಜನಜಾಗೃತಿ ಮೂಡಿಸುವ ಕರಪತ್ರವೊಂದನ್ನು ತಯಾರಿಸಿರಿ.

## ವಿರುದ್ಧಾರ್ಥ ಪದ

ಅಡಿಗೆರೆ ಎಳೆದ ಪದಗಳನ್ನು ಗಮನಿಸಿರಿ.

- ಕಾರ್ಯಕ್ರಮಕ್ಕೆ ಆಗಮಿಸಿದ ಸಭಿಕರೆಲ್ಲರೂ ಕಾರ್ಯಕ್ರಮವನ್ನು ಸಂಪೂರ್ಣವಾಗಿ ವೀಕ್ಷಿಸಿ ನಿರ್ಗಮಿಸಿದರು.
- ತಿರುವುಗಳಲ್ಲಿ ವಾಹನ ವೇಗವಾಗಿ ಚಲಿಸದೆ ನಿಧಾನವಾಗಿ ಸಾಗಬೇಕು.

ಇದೇ ರೀತಿಯಲ್ಲಿ ಕೆಳಗಿನ ಪದಗಳ ವಿರುದ್ಧ ಅರ್ಥ ಕೊಡುವ ಪದಗಳನ್ನು ಬಳಸಿಕೊಂಡು ಹೊಸ ವಾಕ್ಯಗಳನ್ನು ರಚಿಸಿರಿ.

(ಸಂತೋಷ, ದುಬಾರಿ, ಅದೃಷ್ಟ, ಉತ್ಸಾಹ, ಅವನತಿ)

## ಸಂಧಿ ಗುರುತಿಸಿರಿ

ಪದಗಳು ಸಂಧಿಯಾಗುವಾಗ ಆಗುವ ಬದಲಾವಣೆಯನ್ನು ಗಮನಿಸಿರಿ.

| ಪದ ವಿಂಗಡಣೆ | ಸಂಧಿಯಾದ ಪದ | ಬದಲಾವಣೆ |
|---|---|---|
| ಮುಗಿಲು + ಎತ್ತರ | ಮುಗಿಲೆತ್ತರ | 'ಮುಗಿಲು' ಎಂಬಲ್ಲಿನ ಉಕಾರ ಲೋಪವಾಗುವುದು. |
| ಯಾರಿಗೆ + ಆದರು | ಯಾರಿಗಾದರು | 'ಯಾರಿಗೆ' ಎಂಬಲ್ಲಿನ ಎಕಾರ ಲೋಪವಾಗುವುದು. |
| ಕಾಡಿನ + ಒಳಗೆ | ಕಾಡಿನೊಳಗೆ | 'ಕಾಡಿನ' ಎಂಬಲ್ಲಿನ ಅಕಾರ ಲೋಪವಗುವುದು. |

ಹೀಗೆ ಸಂಧಿಯಾಗುವಾಗ ಪೂರ್ವಪದದ ಕೊನೆಯ ಸ್ವರವು ಲೋಪವಾಗುವುದನ್ನು ಲೋಪ ಸಂಧಿ ಎನ್ನುತ್ತಾರೆ.

ಪಾಠ ಭಾಗದಲ್ಲಿ ಬಂದಿರುವ 'ಲೋಪ' ಸಂಧಿ ಆಗುವ ಪದಗಳನ್ನು ಗುರುತಿಸಿ ಬರೆಯಿರಿ.


# ಕಾರ್ಗಾಲದ ವೈಭವ

ಪಡುವಣ ತೀರದ
ಕನ್ನಡ ನಾಡಿನ
ಕಾರ್ಗಾಲದ ವೈಭವವೇನು?
ಚೆಲ್ಲಿದರನಿತೂ
ತೀರದ ನೀರಿನ
ಜಡದೇಹದ ಕರ್ಮುಗಿಲೇನು?

ಕೆರೆಗಳನುಕ್ಕಿಸಿ
ತೊರೆಗಳ ಸೊಕ್ಕಿಸಿ
ಗುಡ್ಡವ ಬೆಟ್ಟವ ಕೊರೆಕೊರೆದು.
ಕಡಲಿನ ತೆರೆಗಳ
ರಿಂಗಣಗುಣಿಯಿಸಿ
ಮೊರೆಮೊರೆವುದದೋ ಸುರಿಸುರಿದು.

ಕುದುರೆಮೊಗದ ಕಡಿ
ವಾಣದ ತೆರದಲಿ
ಮಿಂಚುಗಳವು ಥಳಥಳಿಸುವುವು.
ಗೊರಸಿನ ಘಟ್ಟನೆ
ಯಂತಿರೆ ಥಟ್ಟನೆ
ಗುಡುಗುಗಳವು ಗುಡುಗಾಡಿಪುವು.

ಆವೇಶದ ವೇ-
ಷದ ಬಿರುಸುಟ್ಟುರೆ
ಊರೂರಲಿ ಹಾರೋಡುವುದು.
ಮರಗಳ ಕೀಳುತ
ಬಂಡೆಯ ಹೋಳುತ
ಜಗಜಟ್ಟಿಯ ತೆರನಾಡುವುದು.





ಹಗಲಿರುಳೆನ್ನದೆ
ಹೊಡೆಯುವ ಜಡಿಮಳೆ
ಬಡಿಕೋಲ್ಮಿಂಚಿನ ಲಾಗುಗಳು.
ಮನೆಗಳ ಮನಗಳ
ಒಳಗೂ ಹೊರಗೂ
ಜಿನುಗುತಿರುವ ಹನಿ ಸೋನೆಗಳು.

ಮುಗಿಲಿನ ಹುಬ್ಬಿನ
ಗಂಟಿಕ್ಕುತ ಬಿರು-
ದನಿಯಲಿ ಬೆದರಿಸುತಿಹನಲ್ಲ.
ನಲ್ಲನೆನುತೆ ಆ-
ಗಸವೆಣ್ಣೊಗುತೆ
ಸುರಿಸಿದ ಕಣ್ಣೀರ್ವೊನಲೆಲ್ಲ.

ಅತ್ತತ್ತೂ ಆ-
ಯಸದಲಿ ಸತ್ತೂ
ಸಾಯದೆ ನೋವನು ಹಿಂಗಿಸುತ,
ಎಂತಾದರು ಬಾ-
ಳಲೆಬೇಕೆನ್ನುತ
ದೆಸೆಯಿದ್ರ್ದುದು ಬಗೆ ತಿಳಿಯಿಸುತ.

ಮಳೆ ಕುಂದಿತು, ನೆರೆ
ಯಿಳಿದುದು, ವಾಹಿನಿ
ಎದೆ ಕೆಸರೆತ್ತಲೊ ಹೋಗಿರಲು
ತಿಳಿವಿನ ತೆಳುವಿನ
ಅಲೆಗಳ ವಲಿಗಳ
ಬಲೆಯಲಿ ನೇಸರ ಹಿಡಿದಿರಲು.

ಹೊಸ ಹಸುರಿನ ತೊಡ
ವುಟ್ಟಳು ಮೇದಿನಿ,
ಚಿಗುರ ಮೊಗಕೆ ಮುಗುಳಿನ ನತ್ತ,
ಕರ್ಮೋಡದ ಕು
ಪ್ಪಸವನು ಬಿಟ್ಟಳು,
ಬೆಳ್ಮುಗಿಲಲಿ ಗೆಯ್ದಳು ಹೊಸತ.

**- ಕಡಂಗೋಡ್ಲು ಶಂಕರ ಭಟ್ಟ**

### ಕವಿ ಪರಿಚಯ



ಕನ್ನಡದ ನವೋದಯ ಸಾಹಿತಿಗಳಲ್ಲಿ ಕಡಂಗೋಡ್ಲು ಶಂಕರ ಭಟ್ಟರು ಪ್ರಮುಖರು. ಇವರು ವಿಟ್ಲ ಸಮೀಪದ ಪೆರುವಾಯಿ ಎಂಬಲ್ಲಿ ೧೯೦೪ ಆಗಸ್ಟ್ ೯ ರಂದು ಜನಿಸಿದರು. ಇವರ ತಂದೆ ಈಶ್ವರ ಭಟ್ಟ, ತಾಯಿ ಗೌರಮ್ಮ. ಮಂಗಳೂರಿನ ಸೈಂಟ್ ಆಗ್ನೇಸ್ ಕಾನ್ವೆಂಟ್ ಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿ ಇವರು ದೀರ್ಘಕಾಲ ಸೇವೆ ಸಲ್ಲಿಸಿರುವರು. ಘೋಷಯಾತ್ರೆ (ಕಾವ್ಯ) ಪತ್ರಪುಷ್ಪ, ಗಾಂಧಿಸಂದೇಶ (ಕವನ ಸಂಕಲನಗಳು) ದೇವತಾಮನುಷ್ಯ, ಧೂಮಕೇತು (ಕಾದಂಬರಿಗಳು) ಗಾಜಿನಬಳೆ, ದುಡಿಯುವ ಮಕ್ಕಳು (ಕಥಾ ಸಂಕಲನಗಳು) ಗುರುದಕ್ಷಿಣೆ, ಹಿಡಿಂಬೆ, ವಿರಾಮ (ನಾಟಕಗಳು) ಹೊನ್ನಿಯ ಮದುವೆ (ಕಥನ ಕವನ), ಮಾದ್ರಿಯ ಚಿತೆ (ಖಂಡಕಾವ್ಯ) ಇವರ ಪ್ರಮುಖ ಕೃತಿಗಳಾಗಿವೆ. 'ರಾಷ್ಟಬಂಧು' ಮತ್ತು 'ರಾಷ್ಟ್ರಮತ' ಎಂಬ ಪತ್ರಿಕೆಗಳನ್ನು ನಡೆಸಿದರು. ೧೯೫೬ ರಲ್ಲಿ ನಡೆದ ೪೫ ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಪ್ರಸ್ತುತ ಪಾಠಭಾಗವನ್ನು 'ನಲ್ಮೆ' ಎಂಬ ಕಥನ ಕವನದಿಂದ ಆಯ್ದು ಕೊಳ್ಳಲಾಗಿದೆ.

## ಚಟುವಟಿಕೆಗಳು

### ಹಾಡಿರಿ

ಈ ಕಥನ ಕವನವನ್ನು ಭಾವಪೂರ್ಣವಾಗಿ ಹಾಡಿರಿ.

### ಉತ್ತರಿಸಿರಿ

1. ಕವನದಲ್ಲಿ ಕವಿಯು ಗುಡುಗು ಮಿಂಚುಗಳನ್ನು ಯಾವುದಕ್ಕೆ ಹೋಲಿಸಿರುವನು?
2. ಕವಿ ಮಳೆಯನ್ನು ಜಗಜಟ್ಟಿ ಎಂದು ಕರೆದಿರುವುದೇಕೆ?
3. ಮಳೆ ಬಂದು ಹೋದ ಮೇಲೆ ಮೇದಿನಿ ಹೇಗೆ ಕಂಗೊಳಿಸುತಿತ್ತು?

### ಪ್ರಾಸ ಪದ ಬರೆಯಿರಿ

ಕವನದಲ್ಲಿ ಕಂಡು ಬರುವ ಪ್ರಾಸ ಪದಗಳನ್ನು ಗುರುತಿಸಿ ಬರೆಯಿರಿ.

## ಆಶಯ ಬರವಣಿಗೆ

ಈ ಕವನದ ಆಶಯವನ್ನು ಬರೆಯಿರಿ.

## ಆಸ್ವಾದನ ಟಿಪ್ಪಣಿ

ಕೆಳಗೆ ಕೊಟ್ಟಿರುವ ಪದ್ಯದ ಸಾಲುಗಳ ಆಸ್ವಾದನ ಟಿಪ್ಪಣಿ ಬರೆಯಿರಿ.

ಕುದುರೆಮೊಗದ ಕಡಿ
ವಾಣದ ತೆರದಲಿ
ಮಿಂಚುಗಳವು ಥಳಥಳಿಸುವುವು.
ಗೊರಸಿನ ಘಟ್ಟನೆ
ಯಂತಿರೆ ಥಟ್ಟನೆ
ಗುಡುಗುಗಳವು ಗುಡುಗಾಡಿಪುವು.

## ಅನುಕರಣ ಪದ

ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆಯೆಳೆದ ಪದಗಳನ್ನು ಗಮನಿಸಿರಿ.

- ಬೆಳದಿಂಗಳಲ್ಲಿ ಹರಿಯುವ ತೊರೆಯು <u>ಫಳಫಳನೆ</u> ಹೊಳೆಯುತ್ತಿತ್ತು.
- ಮೆಟ್ಟಿಲು ಇಳಿದು ನಡೆಯುತ್ತಿರಲು ನನ್ನ ಕಾಲಬುಡದಲ್ಲಿಯೇ ಹಾವು <u>ಸರಸರನೆ</u> ಸಾಗಿಹೋಗಿತ್ತು.

ಫಳಫಳನೆ, ಸರಸರನೆ ಎಂಬೀ ಪದಗಳು ಕ್ರಿಯೆಯನ್ನು ಅನುಕರಿಸುವ ಪದಗಳಾಗಿವೆ. ಇವುಗಳನ್ನು ಅನುಕರಣ ಪದಗಳು ಎನ್ನುವರು. ಈ ರೀತಿಯ ಪದಗಳನ್ನು ಪಟ್ಟಿ ಮಾಡಿರಿ.

## ಸಮಾನಾರ್ಥಕ ಪದ

ಕೆಳಗೆ ಕೊಟ್ಟಿರುವ ಪದಗಳ ಸಮಾನಾರ್ಥಕ ಪದಗಳನ್ನು ಪದ್ಯದಿಂದ ಆಯ್ದು ಬರೆಯಿರಿ.

- ಸಮುದ್ರ
- ನದಿ
- ಸೂರ್ಯ
- ಭೂಮಿ

## ಸ್ವಾರಸ್ಯ ಬರವಣಿಗೆ

ಕೆಳಗೆ ನೀಡಿರುವ ಸಾಲುಗಳ ಸ್ವಾರಸ್ಯ ಬರೆಯಿರಿ.

ಮರಗಳ ಕೀಳುತ

ಬಂಡೆಯ ಹೋಳುತ

ಜಗಜಟ್ಟಿಯ ತೆರನಾಡುವನು

## ಅನುಭವ ಟಿಪ್ಪಣಿ

'ಕಾರ್ಗಾಲದ ವೈಭವ'ದಲ್ಲಿ ಮಳೆಯ ಅಬ್ಬರದ ಅಂಶಗಳನ್ನು ತಿಳಿದಿರುವಿರಿ.

ಅಂತೆಯೇ ನೀವು ನೋಡಿದ ಒಂದು ಮಳೆಯ ಸೊಬಗು, ವೈಭವಗಳ ಕುರಿತು ಒಂದು ಅನುಭವ ಟಿಪ್ಪಣಿ ಬರೆಯಿರಿ.

# ಕಾಡು ಕಡಿದರೆ....

'ಬಿಸಿಲೆ' ಹಾಸನದ ಪಕ್ಕಕ್ಕಿದ್ದ ದಟ್ಟಾರಣ್ಯ. ಪಕ್ಷಿ ಸಂಕುಲಗಳಿಗೆ ಅಭಯಾರಣ್ಯವಾಗಿದ್ದ ಅಲ್ಲಿಗೆ ಘಟ್ಟದ ಕೆಳಗಿನಿಂದ ತಂಡವೊಂದು ವಲಸೆ ಬಂದು ನೆಲೆಸಿತು. ಹೊಟ್ಟೆಯ ಪಾಡನ್ನು ಅರಸಿಕೊಂಡು ಬಂದ ಈ ತಂಡ, ಊರಲ್ಲಿ ವಸತಿಗಾಗಿ ಹುಡುಕಾಡದೆ 'ಬಿಸಿಲೆ' ಅರಣ್ಯವನ್ನು ಆಶ್ರಯಿಸಿತು. ತಂಡದ ನಾಯಕ ಪಾಂಡು ಬಹಳ ಬುದ್ಧಿವಂತ, ನಿರಕ್ಷರಕುಕ್ಷಿಯಾದರೂ ತೀಕ್ಷ್ಣಮತಿ. ಅರಣ್ಯದೊಳಗೆ ಪ್ರವೇಶಿಸುತ್ತಿದ್ದ ಹಾಗೆ ಸುತ್ತಲೂ ಒಮ್ಮೆ ತನ್ನ ತೀಕ್ಷ್ಣದೃಷ್ಟಿ ಹರಿಸಿದ. ಬಣ್ಣಬಣ್ಣದ ಬಗೆಬಗೆಯ ಪಕ್ಷಿಗಳು. ಬೃಹದಾಕಾರವಾಗಿ ಬೆಳೆದಿರುವ ಮರಗಳಲ್ಲಿ ಕುಳಿತಿವೆ. ಕೆಲವು ಮನುಷ್ಯ ಸುಳಿವಿಗೆ ಹೆದರಿ ಗೂಡೊಳಗೆ ಸೇರಿಕೊಂಡಿವೆ. ಕೆಲವು ಇನ್ನಷ್ಟು ಎತ್ತರಕ್ಕೆ ಹಾರಿ ಕುಳಿತುಕೊಂಡಿವೆ. ಒಂದೊಂದು ಮರಗಳ ಕಡೆಗೂ ದೃಷ್ಟಿ ಹರಿಸಿದ ಪಾಂಡು. ದೊಡ್ಡದೊಡ್ಡ ಮತ್ತಿ, ಹೊನ್ನೆ ಮರಗಳೂ, ಬೀಟಿ ತೇಗದ ಮರಗಳೂ, ಟಿಸಿಲೊಡೆದು ಒಂದೊಂದು ಗೆಲ್ಲು ರಟ್ಟೆ ಗಾತ್ರ ಬೆಳೆದು, ಒಂದು ಮರದ ಗೆಲ್ಲಿಗೆ ಮತ್ತೊಂದು ಮರದ ಗೆಲ್ಲು ಸೇರಿಕೊಂಡು ಒಂದನ್ನೊಂದು ತಬ್ಬಿಕೊಂಡಂತೆ ಕಾಣುತ್ತಿತ್ತು. ಕಾಡು ದಟ್ಟವಾಗಿದೆ.

ಕಾಡಿನ ಒಳಗೆ ಹೋಗುತ್ತಿದ್ದಂತೆ ಬೆಳಗಿನ ಹೊತ್ತಿನಲ್ಲೂ ಕತ್ತಲು ದಟ್ಟವಾಗುತ್ತಿದೆ. 'ಬಿಸಿಲೆ' ಬಿಸಿಲು ಮುಟ್ಟದ ಅರಣ್ಯ, ಒಳಗೆ ಹೋದಷ್ಟು ಕಗ್ಗತ್ತಲು, ಬಗೆಬಗೆಯ ವಿಧವಿಧ ಪ್ರಾಣಿಗಳ ಕೂಗು, ಜೊತೆಗೆ ಪಕ್ಷಿಗಳ ಕಲರವ, ಜೀರುಂಡೆಗಳ ಝೇಂಕಾರ, ಗೂಗೆಯ ಘೂಂ ಘೂಂ ಸದ್ದು ಇವೆಲ್ಲವುಗಳಿಂದ ಒಂದು ರೀತಿಯ ಭಯಾನಕ ವಾತಾವರಣ ಅಲ್ಲಿ ನೆಲೆಗೊಂಡಿತ್ತು. ಒಬ್ಬರ ಮುಖ ಒಬ್ಬರಿಗೆ ಕಾಣಿಸುತ್ತಿಲ್ಲ. ಒಬ್ಬರನ್ನೊಬ್ಬರು ಕೂಗುತ್ತಾ, ಹಿಂದೆ ಬರುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ಸ್ಥಿರಪಡಿಸಿಕೊಳ್ಳುತ್ತ ಅವರು ಮುನ್ನಡೆದಿದ್ದಾರೆ. ಇದ್ದಕ್ಕಿದ್ದಂತೆ ಮುಂದಿದ್ದ ಪಾಂಡು ಸರ್ರನೆ ನಿಂತು ಬಿಟ್ಟ. ಕಾಲಿಗೆ ಏನೋ ಮೃದುವಾದದ್ದು ಸ್ಪರ್ಶಿಸುತ್ತಿದ್ದ ಹಾಗೆ ಹಾವಿರಬಹುದೇ? ಎನ್ನುವ ಅನುಮಾನ, ಭೀತಿ, ಬೆಂಕಿಕಡ್ಡಿ ಗೀರಿ ನೋಡಿದಾಗ ಬಿಳಿ ಮೊಲ ಚಿಗುರು ಹುಲ್ಲನ್ನು ತಿನ್ನುತ್ತಿದೆ! ಮುದ್ದಾದ ಮೊಲವನ್ನು ನೋಡಿ ಮಕ್ಕಳೆಲ್ಲ ಒಂದು ಕ್ಷಣ ನಿಂತುಕೊಂಡರು. ಮೆಲ್ಲನೆ ಹೊಂಚು ಹಾಕಿ ಸರ್ರನೆ ಹಿಡಿದುಕೊಂಡ ಸುಬ್ರಮಣಿ, ಮೊಲ ಹುಡುಗರ ಕೈಯಿಂದ ಕೈಗೆ ಬದಲಾಗುತ್ತ ಹುಡುಗರ ಆಯಾಸವನ್ನೇ ಕೆಲಕಾಲ ಪರಿಹರಿಸಿತು.

"ಕಾಡೊಳಗೆ ಬಿಟ್ಟುಬಿಡೋ ಅದನ್ನ ಸುಮ್ನೆ ಹಿಂಸೆ ಮಾಡಬೇಡಿ" ಎಂದ ತಂಡದ ಹಿರಿಯ ಹಾಲಜ್ಜ. ಹುಡುಗರಿಗೂ ಮೊಲವನ್ನು ಹೊತ್ತು ಹೊತ್ತು ಸಾಕಾಗಿತ್ತು. ಅವರು ಮೊಲವನ್ನು ಕಾಡೊಳಗೆ ಬಿಟ್ಟಿದ್ದೇ ಅದು ಜಿಗಿದು ಓಡಿ ಹೋಯಿತು.

"ನಾವು ಅರಣ್ಯದ ಮಧ್ಯಭಾಗಕ್ಕೆ ಹೋಗೋಣ, ನಮ್ಮನ್ನು ಯಾರೂ ಕಾಣಬಾರದು. ನಾವು ಅಲ್ಲಿ ಒಂದಿಷ್ಟು ಮರಗಿಡಗಳನ್ನು ಕಡಿದು ಮೊದಲು ನಿಲ್ಲಲು ವಸತಿ ಕಟ್ಟಿಸಿಕೊಳ್ಳಬೇಕು. ಮುಂದಿನ ವಿಚಾರ ಆಮೇಲೆ" ಎಂದ ಪಾಂಡು.

"ಮರಗಿಡಗಳನ್ನು ಕಡಿಯುವುದೇ" ಎಂದ ಹಾಲಜ್ಜನ ಮಾತಿಗೆ ಉತ್ತರಿಸಬೇಕು ಎನ್ನುವಷ್ಟರಲ್ಲಿ ಕಾಡುಕೋಳಿಯೊಂದು ಇವರ ಇದಿರು ಬಂತು, ಅಷ್ಟರಲ್ಲೇ ಕಾಡುಬೆಕ್ಕು ಬಂದು ಹಾರುತ್ತಾ ಅತ್ತ ಹೋದುದನ್ನು ನೋಡಿ ಹುಡುಗರಿಗೆ ಸಂತೋಷವೋ ಸಂತೋಷ. ಅವನ್ನೆಲ್ಲ ಹುಡುಗರಿರಲಿ ಹಿರಿಯರೂ ಕಂಡಿರಲಿಲ್ಲ. ಆದರೆ ಹಾಲಜ್ಜ ನೋಡಿದ್ದಾನೆ. ಅವನು ಎಳೆಯವನಿದ್ದಾಗ ಅವನು ಹುಟ್ಟಿದ ಹಳ್ಳಿಯಲ್ಲೇ ದಟ್ಟವಾದ ಕಾಡುಗಳಿದ್ದವು. ಪಕ್ಕದ ಹಳ್ಳಿಗೆ ಹೋಗಬೇಕಾದರೆ ಕಾಡು ಹಾದು ಹೋಗಬೇಕು.ಕಾಡುದಾರಿಯೇ ನೆರೆಯ ಹಳ್ಳಿಗೆ ಸಮೀಪದ ದಾರಿ. ಹೀಗೆ ಕಾಡುದಾರಿಯಲ್ಲಿ ಹೋಗುವಾಗೆಲ್ಲ ಕಾಡುಕೋಳಿಯನ್ನು ಕಂಡಿದ್ದಾನೆ: ಕಾಡುಬೆಕ್ಕನ್ನು ನೋಡಿದ್ದಾನೆ ಹಾಲಜ್ಜ.

ಹಾರೆ, ಗುದ್ದಲಿ, ಗಡಿಪಾಯ ಎಲ್ಲಾ ಹಿಡಿದುಕೊಂಡು ಒಬ್ಬೊಬ್ಬರೇ ಎದ್ದರು. ನಿಂತ ಜಾಗದಲ್ಲಷ್ಟು ಬೃಹದಾಕಾರದ ಮರಗಳಿರಲಿಲ್ಲ. ಆದರೆ ಮರಗಿಡಗಳು ದಟ್ಟವಾಗಿ ಸೊಂಪಾಗಿ ಬೆಳೆದಿದ್ದವು. ಪಕ್ಷಿಗಳ ಗೂಡುಗಳೂ ಆ ಮರದ ತುಂಬಾ ಇದ್ದುವು. ವಿಧವಿಧದ ಬಣ್ಣಬಣ್ಣದ ಪಕ್ಷಿಗಳೂ ಆ ಮರಗಳ ಮೇಲೆ ಕುಳಿತಿವೆ. ಬಲವಾದ ಏಟು ಮರಕ್ಕೆ ಬಿದ್ದೊಡನೆ ಮರಗಳ ಮೇಲೆ ಕುಳಿತಿದ್ದ ಪಕ್ಷಿಗಳು ಪುರ್ರನೆ ಹಾರಿ ಆಕಾಶದಲ್ಲಿ ತೇಲಿಹೋದವು. ಹಾಲಜ್ಜ ತಲೆ ಎತ್ತಿ ಮೇಲೆ ನೋಡಿದ. ಮರಗಳ ಪೊಟರೆ ಪೊಟರೆಗಳಲ್ಲೂ ಪಕ್ಷಿಗಳು ಗೂಡು ಕಟ್ಟಿವೆ. ಮರ ಕೆಡವಿದರೆ ಪಕ್ಷಿಗಳ ಮರಿಮೊಟ್ಟೆಗಳು ಸಾಯುತ್ತವೆ ಎಂದು ಹಾಲಜ್ಜ ಯೋಚಿಸುತ್ತಾ ಅಂದ.

“ಬೇಡ ಪಾಂಡು, ಮರ ಕಡಿಯಬೇಡ, ಕಾಡು ಕಡಿದರೆ ಊರು ನಾಶವಾಗುತ್ತದೆ. ಕಾಡಿದ್ದರೆ ಊರು” ಎಂದ ಪಾಂಡುಗೆ ಹಾಲಜ್ಜನ ಮಾತಿನ ಬಗ್ಗೆ ಅಲಕ್ಷ್ಯ, "ಊರಲ್ಲಿ ಇಷ್ಟು ದೊಡ್ಡ ಪರಿವಾರಕ್ಕೆ ಯಾರು ಜಾಗ ಕೊಡುತ್ತಾರೆ. ಕಷ್ಟಪಡುವವರಿಗೆ ಊರೂ ಒಂದೇ, ಅರಣ್ಯವೂ ಒಂದೇ. ಇಷ್ಟು ದಿನ ಊರಲ್ಲಿದ್ದು ಏನು ಸುಖ ಪಟ್ಟೆವು?' ಎಂದು ತನ್ನಷ್ಟಕ್ಕೆ ಹೇಳಿಕೊಳ್ಳುತ್ತ ಮರಗಳನ್ನು ಕಡಿದು ಕೆಡಹುವುದರಲ್ಲಿ ಸನ್ನದ್ಧನಾಗಿದ್ದ. ನಾಲ್ಕು ಕೈ ಸೇರಿದ್ದರಿಂದ ಸಂಜೆ ಹೊತ್ತಿಗೆ ಹತ್ತಾರು ಮರಗಳು ಕೆಳಗೆ ಉರುಳಿ ಬಿದ್ದುವು. ಎಲ್ಲರೂ ಸೇರಿ ಉರುಳಿ ಬಿದ್ದ ಮರಗಳನ್ನು ಎಳೆದು ಅರಣ್ಯದೊಳಗೆ ತೂರಿದರು. ತಾವಿದ್ದ ಅಷ್ಟು ಜಾಗ ಸಮತಟ್ಟು ಮಾಡಿಕೊಂಡರು.

ಒಬ್ಬರು ನೆಲ ಅಗೆದರು. ಕಾಡೊಳಗೆ ಸಿಕ್ಕಿದ ಚಪ್ಪಡಿ ಕಲ್ಲುಗಳನ್ನು ಮತ್ತೊಬ್ಬರು ಹೊತ್ತು ತಂದರು. ಮಗದೊಬ್ಬರು ನೀರಿನ ಗುಮ್ಮಿಯ ಬಳಿ ಇದ್ದ ಜೇಡಿ ಮಣ್ಣನ್ನು ಹೊತ್ತು ತಂದರು, ಮಣ್ಣಿನ ಹೆಂಟೆಯಿಂದ ಮಣ್ಣಿನ ಗೋಡೆಯನ್ನು ಅಲ್ಲಲ್ಲಿ ಜೇಡಿ ಮಣ್ಣನ್ನು ಕೂಡಿಸಿ ಕಟ್ಟಿದರು. ಸಂಜೆ ಹೊತ್ತಿಗೆ ಪುಟ್ಟ ಗುಡಿಸಲು ಸಿದ್ಧವಾಯಿತು. ಮಾಡಿಗೆ ಮುಚ್ಚಲು ಚಾಪೆ, ಗೋಣಿ ಚೀಲ, ಎಲೆ ಸರಕು ಉಪಯೋಗಿಸಿ, ಮಳೆ ಬಂದರೂ ಒಳಗೆ

ಬೀಳದಂತೆ ಭದ್ರವಾಗಿ ಗುಡಿಸಲನ್ನು ಕಟ್ಟಿದರು. ಹೆಂಗಸರು ಮೊದಲು ಒಂದು ಆರತಿ ಬೆಳಗಿ ಗುಡಿಸಲೊಳಗೆ ಕಾಲಿಟ್ಟರು. ಅವರ ಹಿಂದೆ ಗಂಡಸರು ಹೋದರು. ಇಷ್ಟೆಲ್ಲಾ ಆಗುತ್ತಿರುವಾಗ ಹಾಲಜ್ಜ ಮಾತ್ರ ಹೊರಗೇ ನಿಂತಿದ್ದ. ಧರೆಗುರುಳಿದ ಮರಗಳ ಕಡೆ ನೋಡುತ್ತ ನಿಟ್ಟುಸಿರುಬಿಡುತ್ತಿದ್ದ. ಗಿರಿ ಕಡಿದು ಹಾಕಿದ್ದ ಮರಗಳ ಪೊಟರೆಯೊಳಗೆ ಅನಾಥವಾಗಿ ಬಿದ್ದಿದ್ದ ಪಕ್ಷಿಗಳ ಗೂಡುಗಳನ್ನು ಶೇಖರಿಸುವುದರಲ್ಲಿ ತೊಡಗಿದ್ದ. ವಿಧವಿಧದ ಪಕ್ಷಿಗಳು ತರಾವರಿ ಗೂಡುಗಳನ್ನು ಕಟ್ಟಿದ್ದವು. ಎಷ್ಟು ಮರಿಗಳು, ಎಷ್ಟು ಮೊಟ್ಟೆಗಳು ನಾಶವಾಗಿವೆಯೋ ದೇವರಿಗೇ ಗೊತ್ತು. ಪಕ್ಷಿಗಳು ಆ ಗೂಡುಗಳನ್ನು ಎಷ್ಟು ವ್ಯವಸ್ಥಿತವಾಗಿ ಕಟ್ಟಿವೆ. ಮಳೆಗಾಳಿಯನ್ನು ತಡೆಯುವಂತೆ ಅವನ್ನು ನಿರ್ಮಿಸಿದೆ. ಒಂದು ಗೂಡಿಗಿಂತ ಮತ್ತೊಂದು ಗೂಡಿಗೆ ಎಷ್ಟೊಂದು ಅಂತರ ಎಷ್ಟೊಂದು ವ್ಯತ್ಯಾಸ! ಮನುಷ್ಯರು ಮನೆಗಳನ್ನು ನಿರ್ಮಿಸುವ ಹಾಗೆ ಅವು ನಿರ್ಮಿಸಿಕೊಂಡಿವೆ. ಹಾಲಜ್ಜ ಗಿರಿ ಶೇಖರಿಸುತ್ತಿದ್ದ ಒಂದೊಂದು ಗೂಡನ್ನು ಕೈಗೆತ್ತಿಕೊಂಡು ತಿರುಗಿಸಿ ಮುರುಗಿಸಿ ನೋಡಿದ, ದೂರದಲ್ಲಿ ಕುಳಿತು ಮೌನವಾಗಿ ರೋದಿಸುವ ಪಕ್ಷಿಸಂಕುಲಗಳ ಕಡೆಗೆ ಅವನ ದೃಷ್ಟಿ ಹೋಯಿತು. ಮೂಲಭಾಷೆಯಲ್ಲೇ ಅವು ಕಣ್ಣೀರು ಸುರಿಸುತ್ತಿವೆ. ಏನೋ  ಎನಿಸಿತು ಹಾಲಜ್ಜನಿಗೆ. ಮರಗಳನ್ನು ಕಡಿದು, ಗೂಡುಗಳು ಕೆಳಗುರುಳಿದಾಗಿನಿಂದ ಅವುಗಳ ಕಲರವವೇ ಇಲ್ಲ, ದೂರದ ಮರಗಳಲ್ಲಿ ಕೇಳುವ ಪಕ್ಷಿಗಳ ಕಲರವದ ಹೊರತು ಆ ಸುತ್ತು ಮುತ್ತಲೆಲ್ಲ



ಪಕ್ಷಿಗಳು ಹಾರಾಡುತ್ತಿದ್ದರೂ, ಸದ್ದೇ ಇಲ್ಲ. ಹಾಗಾದರೆ ಪಕ್ಷಿಗಳು ಮನುಷ್ಯನಿಗಿಂತೇನು ಕಮ್ಮಿ! ಅವುಗಳೂ ಶೋಕವನ್ನು ಅನುಭವಿಸುತ್ತವೆ ಎಂದುಕೊಂಡಾಗ ಹಾಲಜ್ಜನ ಕರುಳು ಸುಡುತ್ತದೆ.

"ಹಾಲಜ್ಜ ಇಲ್ಲಿ ನೋಡು ಈ ಗೂಡು ಎಷ್ಟು ಸುಂದರವಾಗಿದೆ" ಎಂದು ಗಿರಿ ಹಾಲಜ್ಜನಿಗೆ ತೋರಿಸಿದ. ಆ ಗೂಡಿನ ಅಡಿಭಾಗ ಬಿಟ್ಟರೆ ಉಳಿದ ಭಾಗದಲ್ಲೆಲ್ಲ ಸಣ್ಣ ಸಣ್ಣ ತೂತುಗಳಿದ್ದವು. ಆ ಗೂಡು ನಿಜವಾಗಿಯೂ ಕಲಾತ್ಮಕವಾಗಿತ್ತು. ಗಿರಿಯ ಸಂತೋಷದಲ್ಲಿ ಹಾಲಜ್ಜ ಪಾಲ್ಗೊಳ್ಳಲಿಲ್ಲ. ಅವನ ಮನಸ್ಸಿಗೆ ತುಂಬಾ ನೋವಾಗಿತ್ತು. ಬೇಸರವಾಗಿತ್ತು. ಮರಗಿಡಗಳನ್ನು ಕೆಡವಿ ಪಕ್ಷಿಸಂಕುಲಗಳನ್ನು ದುಃಖದಲ್ಲಿ ಮುಳುಗಿಸಿ ಸಾಧಿಸಿದ್ದಾದರೂ ಏನು?

ಅವರು ಮರುದಿನ ಮತ್ತಷ್ಟು ಕಾಡುಗಳ ಸರ್ವನಾಶಕ್ಕೆ ತೊಡಗಿದರು. ತಮ್ಮ ನೆಲೆಯನ್ನು ವಿಶಾಲವಾಗಿ ಪಸರಿಸಿಕೊಳ್ಳುವ ಪ್ರಯತ್ನ ಅವರದ್ದಾಗಿತ್ತು. ಪಾಂಡು ತಮ್ಮಂದಿರ ಜೊತೆ ಸೇರಿ ಮತ್ತಷ್ಟು ಮರಗಳನ್ನು ಕಡಿಯಲು ಮುಂದಾಗಿದ್ದ. ಒಳಗೆ ಇದ್ದ ಹಾಲಜ್ಜ ಹೊರಗೆ ಬಂದ. ಹಣ್ಣು ಹಣ್ಣು ಮುದುಕ ಬಳುಕುವ ಶರೀರ, ಸವಕಲು ತೊಡೆ, ಇಡೀ ಶರೀರ ನಡುಗುತ್ತಿತ್ತು. ಹಾಗೆಂದು ಅಜ್ಜ ಕಳಪೆಯಲ್ಲ, ಕೈಗೆ ಕೋಲು ಕೊಟ್ಟರೆ, ಜೊತೆಗೆ ಒಂದು ಜನ ಮಾಡಿಕೊಟ್ಟರೆ, ಇಡೀ ಅರಣ್ಯ ಸುತ್ತಿ ಬರಬಲ್ಲ, ಕಣ್ಣುಗಳೂ ದೃಷ್ಟಿ ಕಳೆದುಕೊಂಡಿಲ್ಲ. ಕಿವಿಯೂ ಕೇಳಿಸುತ್ತದೆ. ಎಲ್ಲರಿಗಿಂತ ಹಿರಿಯವನಾದಂತೆ ಬುದ್ಧಿಮತ್ತೆಯಲ್ಲೂ ಹಿರಿಯನೇ. ಯೋಚನೆ ವಿವೇಚನೆ ಅವನಿಗೆ ಇದ್ದ ಹಾಗೆ ಅಲ್ಲಿ ಒಬ್ಬರಿಗೂ ಇಲ್ಲ. ಅವನು ಕೋಲೂರುತ್ತ ಮರ ಕಡಿಯುವಲ್ಲಿಗೆ ಬಂದ ಬೃಹದಾಕಾರವಾಗಿ ಬೆಳೆದ ಆ ಮರಗಳೂ ಎಷ್ಟು ಮಳೆಗಾಳಿಯನ್ನು ತಡೆದಿದ್ದುವೋ! ಈಗ ರಾಕ್ಷಸರ ಕೈಗೆ ಸಿಕ್ಕಿ ಸರ್ವನಾಶ ಹೊಂದುತ್ತಿವೆ. ಹಸಿ ಹಸಿ ಮರಗಳೂ. ಬುಡ ಕಳಚಿ ಬಿದ್ದಿವೆ. ಮರಗಳಿಗೆ ಪೆಟ್ಟು ಬಿದ್ದ ಜಾಗದಲ್ಲಿ ನೀರು ಸೋರುತ್ತಿದೆ. ಮನುಷ್ಯನಿಗೆ ಗಾಯವಾದರೆ ರಕ್ತ ಸೋರುವ ಹಾಗೆ, ಪಕ್ಷಿಗಳು ಮನುಷ್ಯರಂತೆ ಮಾತನಾಡುವುದಿಲ್ಲ. ಆದರೂ ಅವಕ್ಕೊಂದು ಭಾಷೆಯಿದೆ. ಹಾಗೆ ಮರಗಿಡಗಳಿಗೆ ಜೀವವಿದ್ದಂತೆ ಕಾಣುವುದಿಲ್ಲ. ಆದರೆ ಅವಕ್ಕೂ ಜೀವವಿದೆ. ಆ ಜೀವವಿರುವುದರಿಂದಲೇ ಕಡಿದಾಗ ಪೆಟ್ಟು ಬಿದ್ದ ಭಾಗದಲ್ಲಿ ನೀರಿನಂತಹ ಸೊನೆ ಸೋರುತ್ತದೆ. 'ಮನುಷ್ಯನ ಶರೀರದಲ್ಲಿ ರಕ್ತ ಹರಿಯುವಂತೆ ಮರಗಿಡಗಳಲ್ಲಿ ಹರಿಯುವುದೇನು? ಅದು ರಕ್ತವೇ ಅಲ್ಲವೆ?' ಎಂದು ಯೋಚಿಸಿದ. ಪಕ್ಕದಲ್ಲಿದ್ದ ಮರಗಳು ಬುಡ ಕಳಚಿ ಬಿದ್ದ ಮರಗಳನ್ನು ನೋಡಿ ದುಃಖಿಸುತ್ತವೆ ಏನೋ! ಎನಿಸಿತು ಹಾಲಜ್ಜನಿಗೆ. ಅವುಗಳಿಂದ 'ಸೂಂಯಿ' ಎಂದು ಬೀಸಿ ಬರುವ ಗಾಳಿಯಲ್ಲಿ ದುಃಖವೇ ತುಂಬಿದೆ ಎಂದು ಅನಿಸಿದಾಗ ಹಾಲಜ್ಜ ಮರ ಕಡಿಯುತ್ತಿದ್ದ ಪಾಂಡುವಿನ ಹತ್ತಿರ ಮೆಲ್ಲಗೆ ಬಂದು ಹೇಳಿದ.

“ಮಗ ಕಾಡು ಬೇಕು, ಕಾಡಿದ್ದರೆ ಊರು ನೋಡು. ಈ ಮರಗಳು ಕೆಳಗುರುಳಿ ಬಿದ್ದಿವೆ. ಇದನ್ನು ನೋಡಿ ಉಳಿದ ಮರಗಳು ನಿಟ್ಟುಸಿರುಬಿಡುವಂತೆ, ದುಃಖಿಸುವಂತೆ ಕಾಣುವುದಿಲ್ಲವೇ ನಿನಗೆ” ಎಂದು ದೀನನಾಗಿ ಮೊರೆಯಿಡುವಂತಿದ್ದ ಹಾಲಜ್ಜನ ಮಾತಿಗೆ ಪಾಂಡುವಿಗೆ ಉತ್ತರಿಸಲಾಗಲಿಲ್ಲ.

**- ಪ್ರೇಮಾಭಟ್**

### ಕವಿ ಪರಿಚಯ



ಪ್ರೇಮಾಭಟ್ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸೃಜನಶೀಲ ಮಹಿಳಾ ಸಾಹಿತಿಯಾಗಿ ಪ್ರಸಿದ್ಧರಾದವರು. ಅವರು ತಮ್ಮ ಸೂಕ್ಷ್ಮ ಸಂವೇದನೆಯಿಂದ ಕನ್ನಡ ಕಥಾ ಪ್ರಪಂಚಕ್ಕೆ ಹೊಸ ಆಯಾಮವನ್ನು ಕಲ್ಪಿಸಿದರು. ಕಾದಂಬರಿ ಕ್ಷೇತ್ರಕ್ಕೆ ಇವರ ಕೊಡುಗೆ ಅನನ್ಯವಾದುದು. ಕೌಟುಂಬಿಕ ಕಥಾಹಂದರವನ್ನೊಳಗೊಂಡಿರುವ ಇವರ ಕಥೆ, ಕಾದಂಬರಿಗಳು ಬಹಳ ಜನಪ್ರಿಯವಾಗಿವೆ. ಮನೆ, ಮದುಮಗಳು, ಹೆರ್ಗದ ದುರ್ಗಾಮಾತೆ (ಕವನಸಂಕಲನಗಳು), ಮನಮೆಚ್ಚಿದವಳು, ಅಕ್ಷತೆ - ೧೦೮ ಕತೆಗಳು, ಪಂಚಾಮೃತ – ೧೦೮ ಕತೆಗಳು, ಹೊಸ ಕಡತ (ಕಥಾಸಂಕಲನಗಳು), ಅವಳ ಬಾಳು, ಕುಂಕುಮ ಶೋಭಿಣಿ, ಸುಜಾತ, ಹೂಬಿಸಿಲು, ಭಾವ ಬಂಧನ, ಮಿಣುಕುಹುಳು, ಯಜ್ಞ, ಭ್ರಮಣ (ಕಾದಂಬರಿಗಳು) ಮೊದಲಾದವು ಇವರ ಪ್ರಸಿದ್ಧ ಕೃತಿಗಳು.

ಪ್ರಸ್ತುತ ಪಾಠಭಾಗವನ್ನು ಅವರ 'ಕಾಡು ಕಡಿದು ಊರು ಮಾಡಿದರು' ಎಂಬ ನೀಳ್ಗತೆಯಿಂದ ಆಯ್ದು ಕೊಳ್ಳಲಾಗಿದೆ.

## ಚಟುವಟಿಕೆಗಳು

### ಉತ್ತರಿಸಿರಿ

1. ದಟ್ಟಾರಣ್ಯವನ್ನು ಪ್ರವೇಶಿಸಿದ ಪಾಂಡು ಕಂಡ ದೃಶ್ಯವೇನು?
2. ಕಾಡಿನ ಒಳಗೆ ಪ್ರವೇಶಿಸುತ್ತಿದ್ದಂತೆ ಭಯಾನಕ ವಾತಾವರಣ ಸೃಷ್ಟಿಯಾದದ್ದು ಹೇಗೆ?
3. ಪಾಂಡು ಮತ್ತು ತಂಡದವರು ಪುಟ್ಟ ಗುಡಿಸಲನ್ನು ಕಟ್ಟಿದ ಬಗೆ ಹೇಗೆ?
4. ಹಾಲಜ್ಜನು ಗಿರಿಯ ಜೊತೆ ಸಂತೋಷದಲ್ಲಿ ಪಾಲ್ಗೊಳ್ಳದಿರಲು ಕಾರಣವೇನು?

### ಕಥೆಯನ್ನು ನಾಟಕಕ್ಕೆ ಪರಿವರ್ತಿಸಿರಿ

ಈ ಪಾಠಭಾಗದಲ್ಲಿ ಬಂದ ಕಥಾಪಾತ್ರಗಳನ್ನು ಗುರುತಿಸಿ, ಸೂಕ್ತ ಸಂಭಾಷಣೆಯನ್ನು ಬರೆದು ಕಥೆಯನ್ನು ನಾಟಕ ರೂಪಕ್ಕೆ ಪರಿವರ್ತಿಸಿರಿ.

## ಊಹಿಸಿ ಬರೆಯಿರಿ

"ಮಗ, ಕಾಡು ಬೇಕು. ಕಾಡಿದ್ದರೆ ಊರು ನೋಡು. ಈ ಮರಗಳು ಕೆಳಗುರುಳಿ ಬಿದ್ದಿವೆ. ಇದನ್ನು ನೋಡಿ ಉಳಿದ ಮರಗಳು ನಿಟ್ಟುಸಿರುಬಿಡುವಂತೆ, ದುಃಖಿಸುವಂತೆ ಕಾಣುವುದಿಲ್ಲವೇ ನಿನಗೆ?" ಎಂದು ದೀನನಾಗಿ ಮೊರೆಯಿಡುವಂತಿದ್ದ ಹಾಲಜ್ಜನ ಮಾತಿಗೆ ಪಾಂಡುವಿಗೆ ಉತ್ತರಿಸಲಾಗಲಿಲ್ಲ.

ಇದಾದ ಬಳಿಕ ಪಾಂಡು ಹಾಲಜ್ಜನ ನಡುವೆ ನಡೆದಿರಬಹುದಾದ ಮಾತುಕತೆಯನ್ನು ಊಹಿಸಿ ಸಂಭಾಷಣೆಯ ರೂಪದಲ್ಲಿ ಬರೆಯಿರಿ.

## ಪಾತ್ರಚಿತ್ರಣ

ಈ ಪಾಠಭಾಗದಲ್ಲಿ ನಿಮಗಿಷ್ಟವಾದ ಕಥಾಪಾತ್ರದ ಪಾತ್ರಚಿತ್ರಣ ಮಾಡಿರಿ.

## ಓದುಗರ ಓಲೆ

"ಮರಗಿಡಗಳಿಗೆ ಜೀವವಿದ್ದಂತೆ ಕಾಣುವುದಿಲ್ಲ. ಆದರೆ ಅವಕ್ಕೂ ಜೀವವಿದೆ. ಆ ಜೀವವಿರುವುದರಿಂದಲೇ ಕಡಿದಾಗ ಪೆಟ್ಟು ಬಿದ್ದ ಭಾಗದಲ್ಲಿ ನೀರಿನಂತಹ ಸೊನೆ ಸೋರುತ್ತದೆ."

- ಮೇಲಿನ ಮಾತಿನ ಹಿನ್ನೆಲೆಯಲ್ಲಿ ಮರಗಿಡಗಳನ್ನು ಕಡಿಯದಂತೆ, ಮರಗಳನ್ನು ಬೆಳೆಸುವ ಮಹತ್ವವನ್ನು ವಿವರಿಸುವ ಒಂದು ಲೇಖನವನ್ನು ಪತ್ರಿಕೆಯ ಓದುಗರ ಓಲೆಗೆ ಬರೆಯಿರಿ.

## ಘೋಷಣ ವಾಕ್ಯ

ಕಾಡೇ ನಾಡಿನ ಸಂಪತ್ತು

ಕಾಡನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ

- ಕಾಡಿನ ಸಂರಕ್ಷಣೆಗೆ ಸಂಬಂಧಿಸಿದ ಇತರ ಘೋಷಣ ವಾಕ್ಯಗಳನ್ನು ಬರೆದು ತರಗತಿಯಲ್ಲಿ ಪ್ರದರ್ಶಿಸಿರಿ.

## ಭರ್ತಿ ಮಾಡಿರಿ

ಸೂಚನೆಗಳ ಆಧಾರದಲ್ಲಿ ಪದಬಂಧ ಭರ್ತಿ ಮಾಡಿರಿ.

| | | | | | |
|---|---|---|---|---|---|
| 1 | | 2 | | ■ | 3 |
| | ■ | | ■ | 4 | |
| | ■ | ■ | 5 | ■ | |
| | ■ | 6 | | | ■ |
| ■ | | ■ | | ■ | 7 |
| 8 | 9 | | ■ | 10 | |

### ಎಡದಿಂದ ಬಲಕ್ಕೆ

1. ಸೂರ್ಯ ಮುಳುಗುವ ದಿಕ್ಕು (4)
4. ಮಗಳು ಎಂದರೆ ಸಾಕು,ಇವನೂ ಇದ್ದೇ ಇದ್ದಾನೆ (2)
6. ವೇಗ ಹೆಚ್ಚಾದರೆ ಹೀಗೂ ಹೇಳಬಹುದು (3)
8. ಅರರೇ ಈ ಪ್ರಾಣಿ ಅಂದಿನಿಂದಲೇ ಪ್ರಸಿದ್ಧ (3)
10. ಋಷಿಯನ್ನು ಹೀಗೂ ಹೇಳಬಹುದು (2)

### ಮೇಲಿನಿಂದ ಕೆಳಕ್ಕೆ

1. ಇದು ಮೂಗನ್ನು ಆಕರ್ಷಿಸಿತು (4)
2. 'ಹೊಸತು' ಇದರ ಪರ್ಯಾಯ ಪದವನ್ನು ತಿರುಗಿಸಿ ಹೇಳಿರುವರು (2)
3. ಇರುಳೆಲ್ಲಾ ಬೆಳಗಿ ಚಂದಿರ ಈ ಹೊತ್ತಿನಲ್ಲಿ ಕಣ್ಮರೆ ನೋಡಿ (3)
5. ಪ್ರಕೃತಿಯನ್ನು ವರ್ಣಿಸಲು ಪದಗಳಿಗೆ ಅಭಾವ ಇಲ್ಲ (3)
7. ಇದು ಕಾಲಕಾಲಕ್ಕೆ ಸರಿಯಾಗಿ ಸುರಿಯಲೇ ಬೇಕು (2)
9. ಕೆಳಗೆ ಇದ್ದವರೂ ಮೇಲಕ್ಕೆ ಹೋಗುವರು ಇವರಿಂದ (2)

# ಅರ್ಥಕೋಶ

ಅಖಿಲ - ಸಕಲ, ಎಲ್ಲಾ
ಅಧಿಕಾರಿ - ಅಧಿಕಾರವುಳ್ಳವ, ಮುಖ್ಯಸ್ಥ
ಅನತಿ - ಸ್ವಲ್ಪ
ಅನನ್ಯ - ಅದ್ವಿತೀಯ, ಬೇರೆಯಲ್ಲದ
ಅನರ್ಘ್ಯ - ಅಮೂಲ್ಯ
ಅನುಕಂಪ - ಸಹಾನುಭೂತಿ
ಅನುಕೂಲ - ಸಹಾಯಕ,ಸಮರ್ಥಕ, ದಡಮೀರದ
ಅನುಜ - ತಮ್ಮ
ಅನುತಾಪ - ಪಶ್ಚಾತ್ತಾಪ, ಕನಿಕರ
ಅನ್ಯೋನ್ಯ - ಪರಸ್ಪರ
ಅನ್ವಯ - ಹೊಂದಿಸು, ಜೋಡಿಸು
ಅಪಪ್ರಚಾರ - ಸುಳ್ಳು ಸುದ್ದಿಯ ಹರಡುವಿಕೆ
ಅಬಲೆ - ನಾರಿ, ಹೆಂಗಸು, ಬಲಹೀನೆ
ಅಂಘ್ರಿ - ಪಾದ
ಅಂಬು - ಬಾಣ
ಅಭಯ - ಭಯವಿಲ್ಲದ,ಆಶ್ರಯ
ಅಭಯಾರಣ್ಯ - ಪ್ರಾಣಿಗಳು ನಿರ್ಭಯವಾಗಿ ಬದುಕುವ ಕಾಡು
ಅಭ್ಯುದಯ - ಏಳಿಗೆ
ಅರಸಿ - ರಾಣಿ
ಅರಿ - ವೈರಿ, ತಿಳಿ
ಅವಾಚ್ಯ - ಬೈಗುಳ,ನಿಂದೆ,ನುಡಿಯಬಾರದ
ಅಲಕ್ಷ್ಯ - ಗಮನ ಕೊಡದ
ಅಹೆವು - ಆಗುವೆವು, ಅಪ್ಪೆವು
ಅಳಿವೆ - ನದಿಗಳು ಸಮುದ್ರಕ್ಕೆ ಸೇರುವ ಪ್ರದೇಶ
ಅಳುಕು - ಭಯ, ಹೆದರು
ಆಘಾತ - ಪೆಟ್ಟು
ಆತಂಕ - ಹೆದರಿಕೆ , ಚಿಂತೆ
ಆದಾಯ - ವರಮಾನ

ಆಂದೋಲನ - ಚಳುವಳಿ, ತೂಗಾಡುವಿಕೆ
ಆಯಾಮ - ಉದ್ದ, ಹರಹು
ಆರೋಗಣೆ - ಊಟ , ಭೋಜನ
ಆವರಿಸು - ಮುಚ್ಚು,ತುಂಬಿ ಕೊಳ್ಳು
ಆವಿಷ್ಕಾರ - ಶೋಧ
ಆಸರೆ - ಅವಲಂಬನೆ , ಆಶ್ರಯ
ಇಕ್ಕಟ್ಟು - ಸ್ಥಳ ಸಾಲದೆ ಚಲಿಸಲಾಗದ ಸ್ಥಿತಿ
ಇಕ್ಕಡೆ - ಎರಡು ಭಾಗಗಳು
ಇಂಗಿತ - ಆಶಯ
ಇಂಚು - ಉದ್ದವನ್ನು ಅಳೆಯುವ ಮಾಪನದ ಒಂದು ಘಟಕ
ಇಂಪಾಗಿ - ಸವಿಯಾಗಿ, ಮಧುರವಾಗಿ
ಇಳೆ - ಭೂಮಿ
ಉಜ್ವಲ - ಪ್ರಕಾಶಮಾನವಾದ
ಉಳು - ಉಳುಮೆ, ಉಳುವುದು
ಉತ್ಪತ್ತಿ - ಉಗಮ , ಬೆಳೆ,ಲಾಭ
ಉತ್ಪತ್ತಿ - ಉತ್ಪಾದನೆ, ಸೃಷ್ಟಿ
ಉದ್ಯಮ - ಉದ್ಯೋಗ, ಕೈಗಾರಿಕೆ
ಉದ್ವೇಗ - ಭಾವಾವೇಶ
ಉರುವಲು - ಕಟ್ಟಿಗೆ, ಸೌದೆ
ಉಸಾಬರಿ - ಸುದ್ದಿ, ಗೊಡವೆ, ವಿಷಯ
ಎಕರೆ - ಭೂಮಿಯ ಒಂದು ಅಳತೆ
ಎಗರು - ಜಿಗಿ, ಹಾರು
ಏಕಾಂಗಿ - ಒಬ್ಬಂಟಿ
ಏಳಿಗೆ - ಉನ್ನತಿ,ಹೆಚ್ಚಳ
ಏಳು - ಗೆಲುವು
ಒತ್ತುವರಿ - ಆಕ್ರಮಣ, ಕಬಳಿಸು
ಒತ್ತಾಸೆ - ಸಹಾಯ, ಬೆಂಬಲ
ಒರಗು - ಬಾಗು, ಅಡ್ಡಾಗು, ಮಾಲು, ವಾಲು
ಒರಲು - ಗೋಳಿಡು
ಓಲೆ - ಕಾಗದ, ಪತ್ರ, ತಾಳೆ ಗರಿ

ಕಗ್ಗತ್ತಲು - ದಟ್ಟವಾದ ಕತ್ತಲು
ಕಗ್ಗಾಡು - ದಟ್ಟವಾದ ಕಾಡು
ಕಟಾವು - ಕೊಯ್ಲು
ಕಡವು - ಹೊಳೆಯನ್ನು ದಾಟುವ ಸ್ಥಳ
ಕಡಿವಾಣ - ನಿಯಂತ್ರಣ
ಕಣ್ಬಿಡುವ - ಕಣ್ಣು ತೆರೆಯುವ
ಕಥಾ ಹಂದರ - ಕಥೆಯ ವ್ಯಾಪ್ತಿ
ಕಂಬನಿ - ಕಣ್ಣೀರು
ಕಪ್ಪ - ಅರಸರಿಗೆ ಕೊಡುವ ಕಾಣಿಕೆ
ಕಲಬೆರಕೆ - ದುರ್ಮಿಶ್ರಣ
ಕಲರವ - ಮಧುರ ಶಬ್ದ
ಕಲಶ - ಗೋಪುರಕ್ಕೆ ಹಾಕುವ ಲೋಹ ಶಿಖರ, ಪೂಜೆಯಲ್ಲಿ ನೀರು ತುಂಬಿಡುವ ಚೆಂಬು
ಕಲಾಸಂಪದ - ಕಲೆಯ ಸಂಪತ್ತು
ಕಲ್ಲೋಲ - ದೊಡ್ಡ ಅಲೆ, ಹೊಯ್ದಾಟ
ಕವಿಯು - ಸುತ್ತಲೂ ಹಬ್ಬು
ಕಸುವು - ಬಲ
ಕಳಪೆ - ಅತ್ಯಂತ ಕೆಳಮಟ್ಟದ
ಕಾರ್ಗಾಲ - ಮಳೆಗಾಲ
ಕಾರ್ಮೋಡ - ಕಪ್ಪಗಿನ ಮೋಡ, ಮಳೆ ಸುರಿಸುವ ಮೋಡ
ಕುಕ್ಕರಗಾಲು - ಮಂಡಿಗಳನ್ನು ಮಡಚಿಕೊಂಡು ತುದಿಗಾಲ ಮೇಲೆ ಭಾರ ಹಾಕಿ ಕುಳಿತು ಕೊಳ್ಳುವುದು
ಕುಮಾರಿ - ಮಗಳು, ಸಣ್ಣ ಹುಡುಗಿ, ಮದುವೆಯಾಗದವಳು
ಕುಲದೀಪಕರು - ಕುಲವನ್ನು ಬೆಳಗುವವರು
ಕೂಲಂಕಷ - ಸೂಕ್ಷ್ಮ
ಕೂಲಿ - ಸಂಬಳ
ಕೆಚ್ಚೆದೆ - ಧೈರ್ಯ
ಕೆಂಜಿಗೆ - ಒಂದು ಜಾತಿಯ ಪೊದರು ಸಸ್ಯ
ಕೆಡರು - ಕೆಳಕ್ಕೆ ಬೀಳಿಸು
ಕೆಡಹು - ಬೀಳಿಸು
ಕೆಳೆ - ಗೆಳೆತನ
ಕೊಟ್ಟಿಗೆ - ಸಾಕುಪ್ರಾಣಿಗಳನ್ನು ಕಟ್ಟುವ ಜಾಗ
ಕೊಳಚೆ - ಹೊಲಸು, ಕೆಸರು
ಕೋವಿದ - ತಿಳಿದವನು, ವಿದ್ವಾಂಸ
ಖಚರ - ಆಕಾಶಗಾಮಿ, ಗಂಧರ್ವ
ಖಳ - ದುಷ್ಟ
ಗಗನ - ಆಕಾಶ
ಗಜ - ಆನೆ
ಗಂಜಲ - ಪಶುಗಳ ಮೂತ್ರ, ಸೆಗಣಿ
ಗಣ - ಸಮೂಹ, ಗುಂಪು
ಗದ್ದಲ - ಗಲಾಟೆ
ಗಂಭೀರ - ಗಹನ
ಗಿಟ್ಟು - ಸಿಗು, ದಕ್ಕು
ಗಿರಿತರಂಗ - ಏರುತಗ್ಗುಗಳಿಂದ ಕೂಡಿದ ಬೆಟ್ಟಗಳು
ಗುಂಗುರು - ಉಂಗುರ ಉಂಗುರವಾದ
ಗುಮ್ಮಿ - ಗುಂಪು, ಸಮೂಹ
ಗೊಂಚಲು - ಜೊಂಕೆ, ಜೊಲ್ಲೆ, ಗುಚ್ಛ
ಘಾಟಿರಸ್ತೆ - ಬೆಟ್ಟಗಳ ನಡುವೆ ಇಕ್ಕಟ್ಟಾದ ರಸ್ತೆ
ಚಪ್ಪಡಿ - ಚಪ್ಪಟೆಯಾದ ಹಲ್ಲು
ಚಿಕ್ಕಾಸು - ಸ್ವಲ್ಪ ಹಣ, ಮೌಲ್ಯವಿಲ್ಲದ
ಚಿಂತಾಕ್ರಾಂತ - ಚಿಂತೆಯಿಂದ ಕೂಡಿದ
ಚಿಮ್ಮುಂಡೆ - ಜೀರುಂಡೆ
ಚಿರಸ್ಮರಣೀಯ - ಶಾಶ್ವತವಾಗಿ ನೆನಪಿಡತಕ್ಕ
ಚುಕ್ಕಾಣಿ - ಹಡಗನ್ನು ಚಲಿಸುವಂತೆ ಮಾಡುವ ಮರ ಅಥವಾ ಲೋಹದಿಂದ ಮಾಡಿದ ಒಂದು ಸಾಧನ, ಮಾರ್ಗದರ್ಶಿಯ ಸ್ಥಾನ
ಚೆಂಬಣ್ಣ - ಕೆಂಪು ಬಣ್ಣ

| | | |
|---|---|---|
| ಜಟಕಾ ಗಾಡಿ | - | ಕುದುರೆ ಗಾಡಿ |
| ಜಡ | - | ಚಲಿಸದ, ನಿಶ್ಚಲ |
| ಜಪ್ತಿ | - | ಮುಟ್ಟುಗೋಲು |
| ಜಮೀನು | - | ಭೂಮಿ, ಹೊಲ |
| ಜರೀಗಿಡ | - | ನೀರಿನಲ್ಲಿ ಬೆಳೆಯುವ ಒಂದು ಜಾತಿಯ ಸಣ್ಣ ಸಸ್ಯ |
| ಜಲಧಿ | - | ಸಮುದ್ರ |
| ಜಲ್ಲೆ, ಜಲ್ಲು | - | ಹುಟ್ಟು ಹಾಕುವ ಕೋಲು |
| ಜಿನುಗು | - | ಸುರಿಯು |
| ಜೋಪಡಿ | - | ಸಣ್ಣ ಗುಡಿಸಲು |
| ಜ್ಞಾನ | - | ತಿಳಿವು, ಅರಿವು |
| ಝೇಂಕಾರ | - | ದುಂಬಿಗಳ ಮಧುರ ಧ್ವನಿ |
| ಟಿಸಿಲು | - | ರೆಂಬೆ |
| ತಕರಾರು | - | ಅಡ್ಡಿ |
| ತಂಗು | - | ಒಂದೆಡೆ ನಿಲ್ಲು |
| ತತ್ತರ | - | ನಡುಕ, ಕಂಪಿಸು |
| ತನುಜ | - | ಮಗ |
| ತರಳೆ | - | ಹೆಣ್ಣು |
| ತರಾವರಿ | - | ಬಗೆ ಬಗೆಯ |
| ತವರು | - | ತಾಯಿ ಮನೆ |
| ತಾಳಗತಿ | - | ತಾಳದ ಲೆಕ್ಕ |
| ತೀಕ್ಷ್ಣಮತಿ | - | ಚುರುಕು ಬುದ್ಧಿ |
| ತುರ್ತಾಗಿ | - | ಜರೂರಾಗಿ |
| ತೇವ | - | ನೀರಿನಂಶ |
| ತೊಳೆ | - | ದೋಣಿ ನಡೆಸುವ ಹುಟ್ಟು ,ಸ್ವಚ್ಛ ಗೊಳಿಸು |
| ದಕ್ಕಿಸು | - | ಜೀರ್ಣ ಮಾಡಿಕೊಳ್ಳು |
| ದರ್ಪ | - | ಅಹಂಕಾರ |
| ದಹಿಸು | - | ಸುಡು |
| ದಾಂಡಿಗ | - | ಕಟ್ಟು ಮಸ್ತಾದ ಆಳು |
| ದಾಯಾದಿ | - | ರಕ್ತ ಸಂಬಂಧಿಕರು, ಹಕ್ಕುದಾರರು |
| ದಿಗಂತ | - | ದಿಕ್ಕಿನ ಕೊನೆ, ಭೂಮಿ ಆಕಾಶಗಳ ಸಂಗಮ ಸ್ಥಾನ |
| ದುಪ್ಪಟ್ಟು | - | ಎರಡು ಪಾಲು |
| ದುರ್ಘಟನೆ | - | ಅಶುಭ ಸಂಗತಿ,ದುಃಖದಾಯಕ ಘಟನೆ |
| ದೌರ್ಜನ್ಯ | - | ಪೀಡೆ, ಉಪದ್ರವ |
| ಧನ್ಯ | - | ಕೃತಾರ್ಥ |
| ಧರೆ | - | ಭೂಮಿ |
| ಧರೆಗುರುಳು | - | ಭೂಮಿಗೆ ಬೀಳು |
| ಧರ್ಮಜ್ಞ | - | ಧರ್ಮವನ್ನು ತಿಳಿದವ |
| ಧಾವಿಸು | - | ಆತುರದಿಂದ ಓಡಿ ಬರು |
| ನಂದನವನ | - | ಆನಂದವನ್ನು ನೀಡುವ ವನ, ಸ್ವರ್ಗದ ಉದ್ಯಾನ |
| ನಂದಾದೀವಿಗೆ | - | ನಂದಿ ಹೋಗಲೇ ಬಾರದ ದೀಪ |
| ನಮುಲುತ್ತ | - | ಸವಿಯುತ್ತಾ |
| ನರೆ | - | ಮುಪ್ಪು, ಬಿಳಿ ಕೂದಲು |
| ನಳ ನಳಿಸು | - | ಶೋಭಿಸು, ಚಂದಕಾಣು |
| ನಾಂದಿ | - | ಶುಭ ಆರಂಭ |
| ನಾಗಾಲೋಟ | - | ನಾಲ್ಕು ಕಾಲುಗಳ ಓಟ |
| ನಾಟಕೀಯ | - | ಸಹಜವಲ್ಲದ |
| ನಿತ್ಯಹರಿದ್ವರ್ಣ | - | ಸದಾ ಹಸಿರಾಗಿರುವ ಬಣ್ಣ |
| ನಿಮಿತ್ತ | - | ಕಾರಣ |
| ನಿರಕ್ಷರ | - | ಅಕ್ಷರಜ್ಞಾನ ಇಲ್ಲದ |
| ನಿರುಕಿಸು | - | ನಿರೀಕ್ಷಿಸು ,ಪರಿಶೀಲನೆ ಮಾಡು |
| ನಿರ್ವಹಣೆ | - | ಉಸ್ತುವಾರಿ |
| ನಿಲ್ದಾಣ | - | ತಂಗು ಮನೆ , ತಂಗುವೆಡೆ |
| ನಿವೃತ್ತ | - | ಸೇವೆಯಿಂದ ವಿರಮಿಸಿದ |
| ನಿಷ್ಕಪಟ | - | ವಂಚನೆಯಿಲ್ಲದ |
| ನೃಪ | - | ರಾಜ |
| ನೆತ್ತಿ | - | ತಲೆಯ ಮಧ್ಯಭಾಗ |
| ನೆಪ | - | ನೆವ, ಕಾರಣ |
| ನೇಸರು | - | ಸೂರ್ಯ, ರವಿ |
| ಪಡುವಣ | - | ಪಶ್ಚಿಮ |

ಪದ್ಧತಿ - ಕ್ರಮ,ವಿಧಾನ
ಪರಕೀಯ - ಬೇರೆಯವರ
ಪರಿಕ್ಲೇಶ - ಕಷ್ಟ
ಪರ್ವತಶ್ರೇಣಿ - ಬೆಟ್ಟಗಳ ಸಾಲು
ಪವಾಡ - ಅಧ್ಭುತ ಕಾರ್ಯ ,ಅತಿಮಾನುಷ ಕೃತ್ಯ
ಪಸರಿಸು - ಹರಡಿಸು
ಪಾಡು - ರೀತಿ, ಸ್ಥಿತಿ
ಪಾತರಗಿತ್ತಿ - ಬಣ್ಣದ ಚಿಟ್ಟೆ
ಪಾರಾವಾರ - ಸಮುದ್ರ
ಪಾರ್ಥೇನಿಯಂ - ಒಂದು ಜಾತಿಯ ಕಳೆಗಿಡ
ಪಾಳು - ಹಾಳು ಬಿದ್ದ, ಪಡೀಲು
ಪಿಸುಗುಟ್ಟು - ಮೆಲುದನಿಯಲ್ಲಿ ಹೇಳು
ಪುನರ್ಜನ್ಮ - ಮತ್ತೆ ಹುಟ್ಟುವುದು
ಪುರುಳು - ಸಾರ, ತಿರುಳು, ಮೌಲ್ಯ
ಪೂರ್ವಪದ - ಮೊದಲ ಪದ
ಪೆರ್ಚುವರು - ವೃದ್ಧಿಯನ್ನು ಹೊಂದು
ಪೆರ್ಮೆ - ಹೆಮ್ಮೆ, ಹಿರಿಮೆ, ಶ್ರೇಷ್ಠತೆ
ಪೆಸರಿಸು - ಹೆಸರಿಸು
ಪೋರಿ - ಹೋರಿ, ಗಂಡು ಕರು
ಪ್ರಕಟ - ಬಹಿರಂಗ
ಪ್ರಚಂಡ - ಬಲಶಾಲಿ
ಪ್ರಸ್ತುತ - ವರ್ತಮಾನ ಕಾಲದ
ಬಡಕಲು - ಕ್ಷೀಣ
ಬಣವೆ - ಹುಲ್ಲಿನ ರಾಶಿ
ಬಾಣಿ - ದೋಣಿಯ ಮೂತಿ
ಬಾನು - ಆಗಸ
ಬಾಳು - ಬದುಕು
ಬಿತ್ತರ - ವಿಸ್ತಾರ
ಬಿಂದಿಗೆ - ಚಿಕ್ಕ ಕೊಡ, ತಂಬಿಗೆ
ಬೀದಿ - ದಾರಿ, ಮಾರ್ಗ, ಓಣಿ, ಹಾದಿ
ಬುವಿ - ಭೂಮಿ
ಬೆಡಗು - ಚಂದ
ಬೆಣಚು ಕಲ್ಲು - ಒಂದು ಬಗೆಯ ಕಲ್ಲು, ಕತ್ತಿಗಳನ್ನು ಹರಿತಗೊಳಿಸಲು ಉಪಯೋಗಿಸುವ ಬಿಳಿ ಕಲ್ಲು
ಬೆಳ್ಮುಗಿಲು - ಬೆಳ್ಳಗಿರುವ ಮೋಡ
ಬೇಸಾಯ - ವ್ಯವಸಾಯ, ಕೃಷಿ
ಭಣಗುಟ್ಟು - ಬರಿದಾಗಿ ಕಾಣು
ಭಯಾನಕ - ಹೆದರಿಕೆಯನ್ನು ಹುಟ್ಟಿಸುವ
ಭವ - ಅಸ್ತಿತ್ವ, ಇರುವಿಕೆ, ಜನ್ಮ, ಶಿವ
ಭೀಕರ - ಭಯವನ್ನುಂಟು ಮಾಡುವ
ಭೂಪ - ರಾಜ, ಭೂಮಿಯ ಒಡೆಯ
ಭೇರಿ - ರಾಜರುಗಳ ಸವಾರಿಯ ಮುಂದೆ ಬಡಿಯುತ್ತಿದ್ದ ಢಕ್ಕೆ
ಮಕರಂದ - ಹೂಗಳ ರಸ, ಮಧು, ಭ್ರಮರ
ಮಗ್ಗುಲು - ಬಗಲು
ಮಧ್ಯವರ್ತಿ - ನಡುವಿನಲ್ಲಿರುವವ, ದಲ್ಲಾಳಿ
ಮನದನ್ನೆ - ಹೆಂಡತಿ, ಪ್ರಿಯೆ
ಮನೋಕ್ಷಿತಿಜ - ಮನಸ್ಸು ಎಂಬ ದಿಗಂತ
ಮರುಪಾವತಿ - ಹಿಂದಿರುಗಿಸುವಿಕೆ
ಮಳಲು - ಮರಳು
ಮಾಸ - ತಿಂಗಳು
ಮಿಂದು - ಸ್ನಾನ ಮಾಡಿ
ಮುಕ್ತಿ - ಮೋಕ್ಷ, ಬಿಡುಗಡೆ
ಮುಂಗಾರು - ಮಳೆಗಾಲದ ಮೊದಲ ಭಾಗ
ಮೂಡಣ - ಮೂಡು ದಿಕ್ಕಿನ
ಮೃಗಜಲ - ಬಿಸಿಲ ಕುದುರೆ
ಮೇದಿನಿ - ಭೂಮಿ
ಮೇಲಾಟ - ಪೈಪೋಟಿ, ಸ್ಪರ್ಧೆ
ಮೇಳ - ಹೊಂದಾಣಿಕೆ
ಮೈಲು - ದೂರದ ಒಂದು ಅಳತೆ
ಮೊಗ - ಮುಖ
ಮೊನಚು ಕಣ್ಣು - ಚೂಪಾದ ಕಣ್ಣು
ಮೊರೆಯಿಡು - ಕಾಪಾಡುವಂತೆ ಬೊಬ್ಬಿಡು
ಯಶೋಗಾಥೆ - ಕೀರ್ತಿಯ ಕತೆ

ಯಾನ - ಪ್ರಯಾಣ
ರೂಢಿ - ಬಳಕೆ
ರೆಂಬೆ - ಟೊಂಗೆ,ಶಾಖೆ,ಕೊಂಬೆ
ರೌದ್ರ - ಅತಿಯಾದ ಕ್ರೋಧ
ಲಘು - ಹಗುರ, ಒಂದು ಮಾತ್ರೆಯ ಕಾಲಾವಧಿ
ಲಂಟಾನ - ಸಣ್ಣ ಹೂವುಗಳನ್ನು ಬಿಡುವ ಒಂದು ಬಗೆಯ ಸಸ್ಯ
ಲಾಸ್ಯ - ಕುಣಿತದ ಒಂದು ಬಗೆ
ವಸಂತ - ಒಂದು ಋತು, ಒಂದು ರಾಗ, ಹೂ ಗೊಂಚಲು
ವಾದ - ಚರ್ಚೆ,ಮಾತನಾಡುವಿಕೆ
ವಾಹಿನಿ - ನದಿ
ವಿಕೋಪ - ಅತಿರೇಕ, ಅನರ್ಥ
ವಿಧವೆ - ಪತಿ ವಿಹೀನೆ, ಗಂಡ ಸತ್ತವಳು
ವಿವೇಚನೆ - ಯಾವುದು ಸರಿ ಯಾವುದು ತಪ್ಪು ಎಂಬುದರ ತೀರ್ಮಾನ
ವೈಷಮ್ಯ - ವೈಮನಸ್ಸು, ವೈರತ್ವ
ವ್ಯವಹಾರ - ವ್ಯಾಪಾರ, ಉದ್ಯೋಗ
ಶರಣು - ನಮಸ್ಕಾರ, ರಕ್ಷಣೆ
ಶರ್ತ - ಶರತ್ತು
ಶಾಂತಿ - ನೆಮ್ಮದಿ, ಸಮಾಧಾನ
ಶಿಥಿಲ - ಕರಗು, ಸಡಿಲ
ಶ್ರೇಣಿ - ಸಾಲು
ಸಂಕೇತ - ಗುರುತು, ಚಿಹ್ನೆ, ಸೂಚನೆ
ಸಂತೃಪ್ತ - ತೃಪ್ತಿಯನ್ನು ಹೊಂದಿದ
ಸಂಪದ - ಸಂಪತ್ತು
ಸಂಭ್ರಮ - ಸಡಗರ
ಸಖಿ - ಗೆಳತಿ
ಸಜ್ಜನ - ಒಳ್ಳೆಯ ಜನ
ಸನಿಕೆ - ಸಲಿಕೆ
ಸನ್ನದ್ಧ - ಸಿದ್ಧತೆಯಿಂದ ಕೂಡಿದ
ಸವಾಲು - ವಿಚಾರಣೆ, ಕೆಳುವಿಕೆ
ಸಾಕ್ಷಿ - ಪ್ರತ್ಯಕ್ಷದರ್ಶಿ
ಸಾರಥಿ - ಗಾಡಿ ಚಲಾಯಿಸುವವನು
ಸಾವಯವ - ಜೈವಿಕ
ಸಿಬಿರು - ಸಲಿಕೆ, ಸಿಗುರು
ಸಿರಿ - ಐಶ್ವರ್ಯ
ಸುತ - ಮಗ
ಸೃಜನಶೀಲ - ಸೃಷ್ಟಿಸುವ ಸಾಮರ್ಥ್ಯ
ಸೆಣಸು - ಕಾದಾಡು
ಸೇನಾನಿ - ಸೈನ್ಯಾಧಿಕಾರಿ
ಸೊನೆ - ಮಾವಿನ ಮಿಡಿಯ ತೊಟ್ಟಿನಿಂದ ಹರಿಯುವ ನೀರ ಬಿಂದು
ಸೊಂಪಾದ - ಹುಲುಸಾದ, ಚೆಲುವಾದ
ಸೋನೆ - ಹನಿ ಮಳೆ
ಸೋಮವಂಶ - ಚಂದ್ರವಂಶ
ಸ್ಮರಣೀಯ - ನೆನಪಲ್ಲಿ ಉಳಿಯತ್ತಕ್ಕ
ಸ್ವಪ್ನ - ಕನಸು
ಸ್ವಾದ - ರುಚಿ, ಸವಿ, ಕಂಪು
ಹಂಗಿಸು - ಮೂದಲಿಸು, ಕೆಣಕು
ಹಗೆ - ವೈರಿ
ಹತೋಟಿ - ನಿಯಂತ್ರಣ
ಹರ್ಷ - ಸಂತಸ
ಹಸನು - ಸಮೃದ್ಧಿ
ಹಾಯಿ - ಗಾಳಿಯ ಅನುಕೂಲತೆಗಾಗಿ ದೋಣಿಯ ನಡುಗಂಬಕ್ಕೆ ಕಟ್ಟುವ ನೌಕಾ ಪಟ - ಹಡಗಿನ ಮೇಲೆ ಹಾರಿಸಿದ ಬಾವುಟ
ಹಿಂಗೋಟು - ದೋಣಿಯ ಹಿಂಭಾಗದ ತುದಿ
ಹಿಮ್ಮೇಳ - ನೃತ್ಯ, ನಾಟಕಗಳಲ್ಲಿ ತೆರೆಯ ಹಿಂಭಾಗದಲ್ಲಿದ್ದು ಹಾಡುವ, ವಾದ್ಯನುಡಿಸುವ ಗುಂಪು
ಹುಲುಸು - ಹೆಚ್ಚಳ, ಸಮೃದ್ಧಿ
ಹೊಟ್ಟೆ ಪಾಡು - ಜೀವನೋಪಾಯ

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.


**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in